ಮಾಡಿದರೆ ನಮ್ಮ ರಾಜ್ಯವು ಖಂಡಿತವಾಗಿ ಸರ್ವಾಂಗೀಣ ಪ್ರಗತಿ ಹೊಂದುತ್ತದೆ. ಇಂಥ ಪ್ರಗತಿ ಸಾಧನೆ ಬಗ್ಗೆ ಒಂದು ಕಾರ್ಯಕ್ರಮ ಹಾಕಿಕೊಂಡು ಎಲ್ಲರೂ ಕಾರ್ಯಪ್ರವೃತ್ತರಾದರೆ ಸರ್ವ ಸಮೃದ್ಧಿ ಪಡೆಯಲು ಯಾವ ತೊಂದರೆಯಿಲ್ಲ. ಈ ದೃಷ್ಟಿಯಿಂದ ಕೆಲಸ ಮಾಡತಕ್ಕಂಥ ಶಕ್ತಿ ನಮ್ಮಲ್ಲಿ ಬರಬೇಕು ಎಂದು ಆಶಿಸುತ್ತೇನೆ. ಇಂಥ ಉತ್ತಮ ಭಾಷಣವನ್ನು ದಯಪಾಲಿಸಿದ್ದಕ್ಕಾಗಿ ರಾಜ್ಯಪಾಲರವರಿಗೆ ವಂದನೆಗಳನ್ನು ಅರ್ಪಿಸಿ ಮಾನ್ಯ ಮಿತ್ರರಾದ ಶ್ರೀಮಾನ್ ಶ್ರೀನಿವಾಸರವರು ಮಂಡಿಸಿರತಕ್ಕಂಥ ಸೂಚನೆಯನ್ನು ಹೃತ್ಪೂರ್ವಕವಾಗಿ ಅನುಮೋದಿಸಿ ನನ್ನ ಮಾತು ಮುಗಿಸುತ್ತೇನೆ. ನಮಸ್ಕಾರ.

ಚೇರಮನ್‌ಅವರು.— ಶ್ರೀಮಾನ್ ಶಿವಪ್ಪನವರು ಭಾಷಣ ಪ್ರಾರಂಭಿಸಬಹುದು.

ಶ್ರೀ ಎಸ್. ಶಿವಪ್ಪ.—ಐದು ಗಂಟೆಗೆ ಮೂರು-ನಾಲ್ಕು ನಿಮಿಷ ಮಾತ್ರ ಇದೆ. ನನಗೆ ಭಾಷಣಕ್ಕೆ ಒಂದು ಗಂಟೆ ಬೇಕು. ನಾನು ನಾಳೆ ಮಾತನಾಡುತ್ತೇನೆ. ಐದು ಗಂಟೆಗೆ ಅಡ್ಜರ್ನಮೆಂಟ್ ಮೋಷನ್ ಇದೆ.

ಶ್ರೀ ಎಚ್. ಸಿದ್ಧವೀರಪ್ಪ.—ಈ ಮೂರು ನಿಮಿಷದಲ್ಲಿ ಬೇರೆ ವಿಷಯ ಹೇಳಬಹುದಲ್ಲವೇ ?

ಚೇರಮನ್ ಅವರು.—ಇನ್ನೊಂದು ವಿಷಯ ಹೇಳುವುದು ಬೇಡ. ಸರಿಯಾಗಿ ಐದು ಗಂಟೆಗೆ ನಿಲುವಳಿ ಸೂಚನೆ ತೆಗೆದುಕೊಳ್ಳಲಾಗುವುದು.

[Mr. CHAIRMAN (SRI S. D. KOTHAWALE) in the Chair]

Sri H. SIDDAVEERAPPA.—Sir, the bills that have been passed in this House which have not been given effect to, that information we have asked and also bills which have been passed and rules have not yet been framed in respect of them. This information may be directed to be furnished to the House.

Mr. CHAIRMAN.—One adjournment motion stands in the name of Sri S. S. Shettar. He may move the motion now.

5-00 P.M.

ಶ್ರೀ ಎಸ್. ಎಸ್. ಶೆಟ್ಟರ್.—ಮಾನ್ಯ ಸಭಾಪತಿಗಳೇ, ಸಭೆಯು ಕಾರ್ಯಕಲಾಪಗಳನ್ನು ಮುಂದೂಡುವ ಸಲುವಾಗಿ ನಾನು ಈ ನಿಲುವಳಿ ಸೂಚನೆಯನ್ನು ಮಂಡಿಸುತ್ತೇನೆ.

Mr. CHAIRMAN.—Sri Shettar has moved the motion ; the motion moved. "That the House do now adjourn" the member may make a speech if he so desires. Before he proceeds, I wish to bring to the notice of the members the provisions of rule 58. No speech during the debate shall exceed for more than 15 minutes. I think a number of members would like to participate in the debate. So, this time limit may please be borne in mind.

†ಶ್ರೀ ಎಸ್. ಎಸ್. ಶೆಟ್ಟರ್.—ಮಾನ್ಯ ಸಭಾಪತಿಗಳೇ, ರಾಜ್ಯಪಾಲರು ಈ ಸಭೆಯಲ್ಲಿ ಭಾಷಣ ಮಾಡುವಾಗ ಒಂದು ಮಹತ್ವದ ಮಾತನ್ನು ಉಲ್ಲೇಖಿಸಿದ್ದಾರೆ. 'ಭಾಷಾ ಪ್ರಶ್ನೆಯ ಸಂಬಂಧವಾಗಿ ವಿದ್ಯಾರ್ಥಿ ಸಮುದಾಯದಲ್ಲಿ ಸಂಭವಿಸಿದ ಅಶಾಂತಿಯನ್ನು ಸಮಾಜ ವಿರೋಧಿ ವ್ಯಕ್ತಿಗಳು ದುರುಪಯೋಗಪಡಿಸಿಕೊಂಡು, ತೊಂದರೆ ಉಂಟುಮಾಡಿದ್ದಾರೆ' ಎನ್ನುವ ಮಾತನ್ನು ಉಲ್ಲೇಖಿಸಿದ್ದಾರೆ. ಈ ಮಾತುಗಳನ್ನು ರಾಜ್ಯಪಾಲರು ಉಲ್ಲೇಖನ ಮಾಡಿದ್ದು ರಾಜಕೀಯ ದೃಷ್ಟಿಯಿಂದ ಬಹಳ ಮಹತ್ವ ಉಳ್ಳಂಥ ಮಾತಾಗಿದೆ ಎಂದು ನಾನು ಹೇಳಬಯಸುತ್ತಿದ್ದೇನೆ. ಇವತ್ತಿನ ದಿವಸ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳ ಹೇಳಿಕೆ ಯಾವ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿದೆ, ಇವುಗಳನ್ನು ಅನುಲಕ್ಷಿಸಿ ಈ ವಿಷಯವನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕಾಗಿದೆ. ಸುದೈವದಿಂದಲೋ ದುರ್ದೈವದಿಂದಲೋ ನಮ್ಮ ರಾಜ್ಯದ ಮುಖ್ಯ ಮಂತ್ರಿಯವರು ಅಖಿಲ ಭಾರತೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದಾರೆ. ನಮ್ಮ ರಾಜ್ಯದ ಆಡಳಿತ ಇವತ್ತಿನ ದಿವಸ

(ಶ್ರೀ ಎಸ್. ಎಸ್. ಶೆಟ್ಟರ್)

ಎರಡು ಕುದುರೆಯನ್ನು ಸವಾರಿ ಮಾಡತಕ್ಕ ಒಬ್ಬ ಮನುಷ್ಯನ ಸ್ಥಿತಿ ಹೇಗೆ ಇದೆಯೋ ಆ ರೀತಿಯಾಗಿದೆ ಎಂದು ತಿಳಿದುಕೊಂಡು ಈ ಭಾಷಾ ಪ್ರಶ್ನೆಯ ಬಗ್ಗೆ ಹೇಳುವಾಗ ನಾವು ಮಾತನಾಡಬೇಕಾಗುತ್ತದೆ.

ಎರಡು ಕುದುರೆಯನ್ನು ಸವಾರಿ ಮಾಡತಕ್ಕ ಮನುಷ್ಯ ಎಂದೂ ಸುಖಿಯಾಗಲಾರ. ಇವತ್ತಿನ ದಿವಸ ನಮ್ಮ ಮುಖ್ಯ ಮಂತ್ರಿಯವರು ಭಾಷಾ ಪ್ರಶ್ನೆಯ ಬಗ್ಗೆ ಹೇಳಿಕೆ ಕೊಟ್ಟಿರುವುದು ವಿಚಿತ್ರಕಾರಕವಾಗಿದೆ ಎಂದು ಹೇಳುತ್ತೇನೆ. ಅವರು ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಿ ಈ ಹೇಳಿಕೆಯನ್ನು ಕೊಟ್ಟರೋ ಅಥವಾ ಈ ರಾಜ್ಯದ ಮುಖ್ಯ ಮಂತ್ರಿಗಳು ಎಂದು ತಿಳಿದುಕೊಂಡು ಹೇಳಿಕೆಯನ್ನು ಕೊಟ್ಟರೋ, ಅವರು ಯಾವ ದೃಷ್ಟಿಯಿಂದ ವಿಚಾರ ಮಾಡಿದರು ಎನ್ನುವುದನ್ನು ಅವರೇ ಹೇಳಿದರೆ ಒಳ್ಳೆಯದು, ನಾವು ಹೇಳಿದರೆ ಸುಖವಾಗಲಾರದು ಎಂದು ಅನ್ನಿಸುತ್ತದೆ. ಭಾಷಾ ಪ್ರಶ್ನೆಯನ್ನು ಸುಲಭವಾದ ರೀತಿಯಿಂದ ಬಿಡಿಸುವುದಕ್ಕೆ ಒಂದು ಪ್ರಯತ್ನವನ್ನು ಅವರು ಮಾಡಬೇಕಾಗಿದೆ. ಈ ವಿದ್ಯಾರ್ಥಿ ಚಳುವಳಿಯನ್ನು ಇಷ್ಟು ಸಣ್ಣದನ್ನಾಗಿ ಅವರು ಏನು ತೆಗೆದುಕೊಂಡರು, ಇದು ಅತ್ಯಂತ ಖೇದಕಾರಕವಾದ ಸಂಗತಿ. ಅದಕ್ಕಾಗಿಯೇ ರಾಜ್ಯಪಾಲರು ಹೇಳಿರಬಹುದು, ದುಷ್ಟ ಶಕ್ತಿಗಳು ಇಂಥ ಒಂದು ವಿದ್ಯಾರ್ಥಿ ಚಳುವಳಿಯನ್ನು ತಮ್ಮ ಕೆಲಸಗಳಿಗೆ ಉಪಯೋಗಿಸಿದರು ಎಂದು. ಇನ್ನು ಯಾರೂ ಇದನ್ನು ಪ್ರಸ್ತಾಪ ಮಾಡಿ ಇದರ ಬಗ್ಗೆ ಹೆಚ್ಚಿನ ಬೆಳಕನ್ನು ಕೊಡುವಂಥ ಪರಿಸ್ಥಿತಿ ಇಲ್ಲ. ಈ ದುಷ್ಟ ಶಕ್ತಿಗಳು ಯಾರು, ರಾಜ್ಯದಲ್ಲಿ ಯಾರು ಈ ಪ್ರಕಾರ ದುಷ್ಟ ಶಕ್ತಿಯನ್ನು ಹರಡಿ ನಮ್ಮ ಆಡಳಿತೆಯಲ್ಲಿ ಒಂದು ದೊಂಬಿಯನ್ನು ಎಬ್ಬಿಸಿದ್ದಾರೆ ಇದನ್ನೆಲ್ಲ ಆಲೋಚನೆ ಮಾಡಬೇಕಾಗಿದೆ. ಇದಕ್ಕೆ ಹಿನ್ನೆಲೆ ಏನಿದೆ, ಇದರಿಂದ ಪ್ರಜಾಪ್ರಭುತ್ವಕ್ಕೆ ಯಾವ ಗಂಡಾಂತರ ತಂದೊದಗಿಸಬಹುದು ಎನ್ನುವಂಥ ಪ್ರಯತ್ನವಿದೆ, ಇದನ್ನೆಲ್ಲಾ ನಮ್ಮ ಆಡಳಿತಗಾರರು ನೀಡಬೇಕಾಗಿದೆ.

ಬಹಳ ವಿಚಿತ್ರವಾದ ಸಂಗತಿ ಎಂದರೆ, ಇವತ್ತು ನಮ್ಮಲ್ಲಿರತಕ್ಕ ಎರಡೂ ವಿಶ್ವವಿದ್ಯಾಲಯದ ಜವಾಬ್ದಾರಿಯನ್ನು ಹೊತ್ತಂಥ ಜನರು ಕಾಲೇಜುಗಳನ್ನು ಮುಚ್ಚಿಬಿಡತಕ್ಕ ಒಂದು ಪ್ರಯತ್ನ ಮಾಡಿದ್ದಾರೆ. ಕಾಲೇಜುಗಳನ್ನು ಮುಚ್ಚುವುದರಿಂದ ವಿದ್ಯಾರ್ಥಿ ಚಳುವಳಿ ಹೆಚ್ಚಾಗಬಹುದೇ ಅಥವಾ ಅದು ಕುಗ್ಗಬಹುದೇ, ಇದನ್ನೆಲ್ಲ ಅವರು ವಿಚಾರ ಮಾಡಿ ನಿರ್ಧಾರ ತೆಗೆದುಕೊಂಡರೇ ? ಈ ನಿರ್ಧಾರಕ್ಕೆ ಬರಬೇಕಾದರೆ ಅವರ ಬುದ್ಧಿಚಾತುರ್ಯವೇನಿರಬಹುದು ? ಇದು ವಿಚಾರ ಮಾಡತಕ್ಕ ಮಾತಾಗಿದೆ ವಿದ್ಯಾರ್ಥಿಗಳು ಚಳುವಳಿಯನ್ನು ಸ್ಥಗಿತಗೊಳಿಸಿದ ಹೊರತು ಕಾಲೇಜನ್ನು ನಾವು ತೆರೆಯಲಾರೆವು ಎನ್ನುವಂಥ ನಿರ್ಧಾರ ನಿನ್ನಿನ ವೃತ್ತಪತ್ರಿಕೆಗಳಿಂದ ತಿಳಿದುಬರುತ್ತದೆ. ವಿದ್ಯಾರ್ಥಿಗಳು ಚಳುವಳಿಯನ್ನು ಸ್ಥಗಿತಗೊಳಿಸುವುದಕ್ಕೂ, ಕಾಲೇಜುಗಳನ್ನು ತೆಗೆಯುವುದಕ್ಕೂ ಏನೋ ಸಂಬಂಧವಿದೆಯೋ ಏನೋ ಎನ್ನುವ ಒಂದು ಅಪ್ಪತೆ ಇದೆ. ಈ ಚಳುವಳಿಯನ್ನು ಸರ್ಕಾರ ಅಥವಾ ಜವಾಬ್ದಾರಿಯನ್ನು ಹೊತ್ತಂಥ ವಿಶ್ವವಿದ್ಯಾಲಯದ ಅಧಿಕಾರ ವರ್ಗ ಮತ್ತು ವಿದ್ಯಾರ್ಥಿಗಳ ಮುಖಂಡರು ಎಲ್ಲರೂ ಸೇರಿ ಇದನ್ನು ಯಾವ ದಿಸೆಗೆ ಒಯ್ಯುತ್ತಿದ್ದಾರೆ ಎನ್ನುವುದನ್ನು ಸರ್ಕಾರ ಪರಿಶೀಲಿಸಿ ನೋಡಬೇಕಾದ ವಿಚಾರವಾಗಿದೆ. ಈ ಚಳುವಳಿ ಏತಕ್ಕೋಸ್ಕರ ನಡೆಯುತ್ತಿದೆ. ಈ ಚಳುವಳಿಯ ಹಿನ್ನೆಲೆ ಏನು, ಈ ಚಳುವಳಿಯಿಂದ ಏನು ಸಾಧಿಸಬೇಕಾಗಿದೆ, ಈ ಚಳುವಳಿಯನ್ನು ಪ್ರಾರಂಭಿಸಿದವರ ಮನಸ್ಸಿನಲ್ಲಿ ಏನಿತ್ತು, ಈ ಚಳುವಳಿಯನ್ನು ಮಾಡುವುದರಿಂದ ಏನು ಸಾಧನೆ ಮಾಡಬಹುದು, ಇದನ್ನೆಲ್ಲ ಸರ್ಕಾರ ಪರಿಶೀಲಿಸಲಿಲ್ಲ. ಇವತ್ತು ಭಾಷಾ ಸಮಸ್ಯೆಯ ಒಂದು ಕಲ್ಪನೆಯನ್ನು ವಿದ್ಯಾರ್ಥಿಗಳಿಗೆ ಸರಿಯಾಗಿ ಕೊಡುವಂಥ ಜವಾಬ್ದಾರಿಯನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಮಾಡಲಿಲ್ಲ, ರಾಜ್ಯದ ಮುಖ್ಯ ಮಂತ್ರಿಗಳೂ ಮಾಡಲಿಲ್ಲ, ವಿದ್ಯಾ ಇಲಾಖೆಯ ಮಂತ್ರಿಗಳು ಕೂಡ ಮಾಡಲಿಲ್ಲ ಎನ್ನುವಂಥ ಒಂದು ಖೇದಕರವಾದ ಸಂಗತಿಯನ್ನು ನಾನು ಚಿತ್ರಿಸ ಬಯಸುತ್ತೇನೆ. ಏಕೆಂದರೆ, ಅಫಿಷಿಯಲ್ ಲಾಂಗ್ವೇಜ್ ಅಮೆಂಡ್‌ಮೆಂಟ್ ಬಿಲ್ ಅಫ್ 1967, ಇದನ್ನು ಪರಿಶೀಲಿಸಿ ನೋಡಿದಲ್ಲಿ ವಿದ್ಯಾರ್ಥಿಗಳು ಇವತ್ತಿನ ದಿವಸ ಏನು ಬೇಡಿಕೆಯನ್ನು ಇಟ್ಟಿದ್ದಾರೆ, ವಿದ್ಯಾರ್ಥಿಗಳು ಇವತ್ತಿನ ದಿವಸ ಯಾವ ಒಂದು ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟು ತಮ್ಮ ಚಳುವಳಿಯನ್ನು, ಹೋರಾಟವನ್ನು ಸಾಗಿಸುತ್ತಿದ್ದಾರೆ ಮತ್ತು ಈ ಅಫಿಷಿಯಲ್ ಲ್ಯಾಂಗ್ವೇಜ್ ಅಮೆಂಡ್‌ಮೆಂಟ್ ಬಿಲ್ 1967 ಏನು ಹೇಳುತ್ತದೆ, ಇದನ್ನು ಒಂದಕ್ಕೊಂದು ಪರಿಶೀಲಿಸಿ ನೋಡಿದರೆ ಚಳುವಳಿಯ ಅರ್ಥವೇ ಬಹಳ ವಿಚಿತ್ರವಾಗಿ ಬರುತ್ತಿದೆ, ನಾನು ಈ ವಿಷಯದಲ್ಲಿ ಕೆಲವು ಮಾಹಿತಿಯನ್ನು ಸಂಗ್ರಹ ಮಾಡುತ್ತಿರುವಾಗ ಕೆಲವು ಹಸ್ತ ಪತ್ರಿಕೆಗಳು ನಮ್ಮ ಕಣ್ಣಿದುರಿಗೆ ಬಂದುವು. ಪೋಲೀಸಿನವರು ವಿದ್ಯಾರ್ಥಿ ಚಳುವಳಿ ಎಂದು ಯಾವುದನ್ನು ಕರೆಯುತ್ತಾರೆ ಅದರಲ್ಲಿ ದುಷ್ಟ ಶಕ್ತಿಗಳು ಸೇರಿರುವುದರಿಂದ ಅದನ್ನು ವಿದ್ಯಾರ್ಥಿ ಚಳುವಳಿ ಎಂದು ಕರೆಯುವುದಕ್ಕೆ ನಾನು ಸಿದ್ಧನಿಲ್ಲ.

ವಿದ್ಯಾರ್ಥಿ ಚಳುವಳಿ ಎಂದು ತಿಳಿದುಕೊಂಡು ಯಾವುದನ್ನು ಕರೆಯಲಾಗುತ್ತಿದೆ. ಅಂಥ ಚಳುವಳಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವ ಒಂದು ವಿಧಾನವನ್ನು ಆ ಒಂದು ಕರಪತ್ರದಲ್ಲಿ ಬರೆದಿರುತ್ತಾರೆ. ಪೋಲೀಸಿನವರು ಜೀಪಿನಲ್ಲಿ ಯಾವುದೇ ಒಂದು ಕಡೆಯಿಂದ ಚಳುವಳಿಗಾರರನ್ನು ಬೆನ್ನಟ್ಟುತ್ತಿರುತ್ತಾರೆ ಆಗ ಅದನ್ನು ಯಾವ ರೀತಿಯಲ್ಲಿ ಉರುಳಿಸಬೇಕು ಎನ್ನುವುದು ಅದರಲ್ಲಿ ಬರೆದಿತ್ತು, ಯಾವುದಾದರೂ ಒಂದು ಸ್ಫೋಟಕ ದ್ರವವನ್ನು ಒಗೆಯತಕ್ಕ ರೀತಿಯನ್ನು, ಯಾವ ರೀತಿ ಬೆಂಕಿ ಹಚ್ಚಬೇಕು ಎನ್ನುವಂಥ ಸಂಗತಿಯನ್ನು ಅದರಲ್ಲಿ ಬರೆಯಲಾಗಿದೆ. ಕರಪತ್ರದ ರೀತಿಯಲ್ಲಿ ಇಷ್ಟೊಂದು ವಿಚಾರಗಳನ್ನು ಹಂಚಿದರೂ ಕೂಡ ಪೋಲೀಸ್ ಖಾತೆಯವರು ಇದರ ಬಗ್ಗೆ ಇಷ್ಟು ನಿರ್ಲಕ್ಷ್ಯ ರೀತಿಯಿಂದ ನಡೆದುಕೊಂಡಿದ್ದಾದರೂ ಏಕೆ? ಇನ್ನು ಈ ಪ್ರಕಾರದ ಪೋಲೀಸ್ ವರ್ತನೆ ಇದ್ದಾಗ, ಪೋಲೀಸರೇ ಈ ಪ್ರಕಾರದ ಚಳುವಳಿ ಆಗಬಹುದು ಎನ್ನುವಂಥ ಅಂದಾಜನ್ನು ನೋಡಿದಾಗ ಅಲ್ಲಿರತಕ್ಕ ಆಡಳಿತದ ವ್ಯವಸ್ಥೆ ಏನು ಇದರ ಬಗ್ಗೆ ವಿಚಾರ ಮಾಡಿತು, ಏನು ಅದರ ಬಗ್ಗೆ ಮುಂಜಾಗ್ರತೆಯನ್ನು ವಹಿಸಿತು, ಈ ಪ್ರಕಾರವಾಗಿ ಭಾಷಾ ಪ್ರಶ್ನೆಯನ್ನು ಒಂದು ಸಂಕುಚಿತ ಭಾವನೆಗೆ ಪರಿವರ್ತನಗೊಳಿಸುವಂಥ ಪ್ರಯತ್ನ ದೇಶದಲ್ಲಿ ನಡೆದಾಗ ಹೊಣೆ ಯಾರ ಮೇಲೆ ಇತ್ತು, ಯಾರ ಮೇಲೆ ಇರಬೇಕು ಎನ್ನುವ ಪ್ರಶ್ನೆ ಬರುತ್ತದೆ. ಇವತ್ತು ಅಖಿಲ ಭಾರತ ಪಕ್ಷದ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರ ಮೇಲೆ ದೊಡ್ಡ ಜವಾಬ್ದಾರಿ ಇದೆ ಎಂದು ಹೇಳಬೇಕಾಗುತ್ತದೆ ಮತ್ತು ಮುಖ್ಯ ಮಂತ್ರಿಗಳಾಗಿ ದೊಡ್ಡ ಜವಾಬ್ದಾರಿ ಅವರ ಮೇಲೆ ಇದೆ. ಮೊಟ್ಟಮೊದಲನೆಯದಾಗಿ ರಾಷ್ಟ್ರ, ರಾಷ್ಟ್ರದ ಕಲ್ಪನೆ, ರಾಷ್ಟ್ರದ ಐಕ್ಯತೆ ಬರಬೇಕಾಗಿದೆ. ರಾಷ್ಟ್ರ ಭಾಷಾ ವಿಚಾರವಾಗಿ ಮಹಾತ್ಮ ಗಾಂಧೀಜಿಯವರ ಕಾಲದಿಂದಲೂ ಹೇಳಿಕೊಂಡು ಬಂದಂಥ ಶಿಸ್ತಿನ ಪಕ್ಷದ ಅಧ್ಯಕ್ಷ ಸ್ಥಾನವನ್ನು ಅವರು ವಹಿಸಿಕೊಂಡು, ಅವರೇ ಇವತ್ತಿನ ದಿವಸ ಹಿಂದಿಯ ಬಗ್ಗೆ ಏನು ಹೇಳಿಕೆಯನ್ನು ಪತ್ರಿಕೆಗಳಿಗೆ ಕೊಟ್ಟಿದ್ದಾರೆ ಅದನ್ನು ಅವರೇ ನೋಡಿಕೊಳ್ಳಬೇಕಾಗಿದೆ ಎಂದು ನನಗನ್ನಿಸುತ್ತದೆ. ಇವತ್ತು ಭಾಷಾ ವಿಷಯದಲ್ಲಿ ಗೊಂದಲವಾಗಿರುವುದಕ್ಕೆ ಅವರು ಕೊಟ್ಟಂಥ ಹೇಳಿಕೆಯಲ್ಲಿಯೇ ಒಂದು ಮಹತ್ವದ ಅಂಶವಿದೆ.

ಪೋಲೀಸರು ಗೋಲೀಬಾರು ಮಾಡುವಾಗ ಅದಕ್ಕೆ ಮುಂಚೆ ಕೆಲವು ಮುಂಜಾಗ್ರತೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಗೋಲಿಬಾರ್ ಮಾಡುವ ಪೂರ್ವದಲ್ಲಿ ಯಾವ ರೀತಿಯ ಮುನ್ಸೂಚನೆಗಳನ್ನು ಕೊಡಬೇಕೆಂದು ನಿಯಮವಿದೆಯೆಂದರೆ, ಜನರಿಗೆ ಹೊರಟು ಹೋಗಲಿಕ್ಕೆ ವಿನಂತಿ ಮಾಡಿಕೊಳ್ಳಬೇಕು, ಜನರನ್ನು ಚದುರಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಇದೆ. ಆದರೆ ಜನರನ್ನು ಬೆನ್ನಟ್ಟಿ, ಜನರನ್ನು ಕೊಂದು, ಜನರನ್ನು ಹಿಂಸಿಸಿ ತೊಂದರೆ ಮಾಡಬೇಕೆಂದಿಲ್ಲ. ಪೋಲೀಸರು ಗುಂಡು ಹಾರಿಸಿದಾಗ ಪೇಟೆಗೆ ಹೋಗುತ್ತಿದ್ದ ಹೆಣ್ಣು ಮಗಳಿಗೆ ಗುಂಡು ಬಡಿದು ಆಕೆ ಸತ್ತಳು, ಏನೂ ಅರಿಯದಂಥ ಜನ, ಯಾವುದೂ ತಿಳಿಯದಂಥ ಜನರಿಗೆ ಈ ರೀತಿ ತೊಂದರೆಯಾಗಬೇಕಾದರೆ ಅದಕ್ಕೆ ಜವಾಬ್ದಾರರು ಯಾರು? ಪರಿಹಾರ ಧನ ಕೊಟ್ಟ ಮಾತ್ರಕ್ಕೆ ಹೋದ ಜೀವ ಬರುವುದಿಲ್ಲ. ಜೀವದ ಎತ್ತರದವರೆಗೆ ಧನ ಕೊಟ್ಟರೂ ಸಹ ಹೋದ ಜೀವ ಮತ್ತೆ ಬರುವದಿಲ್ಲ. ಪೇಟೆಗೆ ಹೋದ ಹೆಣ್ಣು ಮಕ್ಕಳು ಅಥವಾ ರಸ್ತೆಯಲ್ಲಿ ತಿರುಗಾಡುವ ಮಕ್ಕಳು ಪೋಲೀಸರು ಗುಂಡು ಹಾರಿಸುವಾಗ ಅದಕ್ಕೆ ತುತ್ತಾಗಬಹುದು ಎಂಬ ಕಲ್ಪನೆ ಇರುವುದಿಲ್ಲ. ದೊಡ್ಡ ಚಳವಳಿ ಆಯಿತು, ಕೆಲವು ಜೀವಗಳ ಹತವಾಯ್ತು. ಇದಕ್ಕೆ ಕಾರಣ ಹೊರಗಿನವರು ಎಂದು ಹೇಳಿದ್ದಾರೆ. ಅದರ ಸಲುವಾಗಿ ಹೇಳುತ್ತಿರುವುದು. ಇಂದು ಆದಂಥ ಗೋಳಿಬಾರಿನ ಬಗ್ಗೆ ವಿಚಾರಣೆಯಾಗಬೇಕು ಎಂದು ಹೇಳುವಾಗ ಸರಕಾರ ಎಲ್ಲಾ ಕೇಸುಗಳನ್ನೂ ವಿತ್‌ಡ್ರಾ ಮಾಡುವುದಾಗಿ ನಿಜಲಿಂಗಪ್ಪನವರು ಹೇಳಿಕೆ ನೀಡಿದ್ದಾರೆ, ಅವರು ನೊಂದವರಿಗೆ ಪರಿಹಾರ ಕೊಡುತ್ತೇವೆಂದು ಹೇಳುವುದು ಒಂದು ದೃಷ್ಟಿಯಿಂದ ಅಭಿನಂದನೀಯವಾದುದು. ಆದರೆ ಪರಿಹಾರ ಕೊಟ್ಟಮಾತ್ರಕ್ಕೆ ಹೋದ ಜೀವ ಪುನಃ ಬರುವುದಿಲ್ಲ. ಆಡಳಿತ ಶಿಥಿಲವಾಗುತ್ತಿದೆ. ಈ ಚಳವಳಿ ಮಾಡುವುದಕ್ಕೆ ಯಾರು ಪ್ರಚೋದನೆ ಮಾಡಿದರು ಎಂದರೆ ಮುಖ್ಯಮಂತ್ರಿಗಳ ಕಡೆಗೆ ಕೈ ತೋರಿಸಬೇಕಾಗುತ್ತದೆ. ಅವರ ನಿರ್ಲಕ್ಷತನ, ಆಡಳಿತದಲ್ಲಿ ಶಿಥಿಲತೆ, ಪೋಲೀಸರನ್ನು ಬಿಟ್ಟು ಚಳವಳಿಯನ್ನು ಹತೋಟಿಗೆ ತರಲು ಮಾಡಿದ ವಿಧಾನ ಇದೆಲ್ಲಾ ನೋಡಿದರೆ ಅವರು ಒಂದು ರೀತಿಯಿಂದ ಆಟವಾಡಿಸುವುದಕ್ಕೆ ಹೊರಟಿದ್ದಾರೆಂದು ಭಾಸವಾಗುತ್ತದೆ. ಇದು ಸ್ಪಷ್ಟವಾಗಿದೆ. ಈಗ ವಿದ್ಯಾರ್ಥಿಗಳ ಪರೀಕ್ಷೆಗಳ ಕಾಲ ಸಮೀಪಿಸುತ್ತಿದೆ, ಎಲ್ಲಾ ಪರೀಕ್ಷೆಗಳಿಗೂ ಹಣ ಕಟ್ಟಿದ್ದಾರೆ. ಇಂಥ ಕಾಲದಲ್ಲಿ ಕಾಲೇಜು ಬಂದುಮಾಡಿದರೆ ಹೇಗೆ? ಯಾವ ಆಧಾರದಮೇಲೆ ಬಂದು ಮಾಡುವುದು? ಅದಕ್ಕೆ ಯಾವ ಕಾನೂನಿದೆ, ಯಾವ ಅಧಿಕಾರವಿದೆ? ಅದರಿಂದ ಸಾಧಿಸುವುದೇನು ಬಂದುಮಾಡಿ ಹುಡುಗರನ್ನು ಹೊರಗಡೆಗೆ ಕಳಿಸಿದರೆ ಉದ್ಯೋಗವಿಲ್ಲದೆ ಅವರು ರಸ್ತೆಗಳಲ್ಲಿ ತಿರುಗಿ ಚಳವಳಿ ಮಾಡುವುದಕ್ಕೆ ಅವಕಾಶವಾಗುವುದಿಲ್ಲವೇ, ಇದೆಲ್ಲಾ ಯೋಚನೆಮಾಡಬೇಡವೇ! ಇದರಿಂದ ಶಾಂತಿಭಂಗಕ್ಕೆ ಅವಕಾಶವಾಗುವುದಿಲ್ಲವೇ? ರಾಜ್ಯಪಾಲರು ಚರ್ಚೆಮಾಡಿ ಅನೇಕ ವಿಷಯಗಳನ್ನು

(ಶ್ರೀ ಎಸ್. ಎಸ್. ಶೆಟ್ಟರ್)

ತೀರ್ಮಾನವಾಡಬಹುದು ಎಂದು ಹೇಳಿದ್ದಾರೆ. ಅದಕ್ಕೆ ಅವಕಾಶವಾಡಿದಿರಾ ? ಇದೆಲ್ಲಾ ವಾಡದೆ ಇಂದು ಗೋಲೀಬಾರು ಆಗುವ ಪರಿಸ್ಥಿತಿ ಬಂತು. ಚರ್ಚಿಸಿ ಒಂದು ನಿರ್ಣಯಕ್ಕೆ ಬರಲು ಏನು ಕಾರ್ಯಕ್ರಮ ಕೈಗೊಂಡಿರಿ ? ಪ್ರಜಾಪ್ರಭುತ್ವದಲ್ಲಿ ಜನರನ್ನು ರಕ್ಷಣೆವಾಡುವ ಕ್ರಮವು ಇದೇಯೇನು ? ಇದರ ಬಗ್ಗೆ ಸ್ಪಷ್ಟವಾಗಿ ಹೇಳಿಕೆ ಕೊಡಬೇಕು. ಅಫಿಷಿಯಲ್ ಲ್ಯಾಂಗ್ವೇಜ್ ಆಕ್ಟಿನ ಪರಿಶೀಲನೆ ಮಾಡುವಾಗ ಹಿಂದಿಯನ್ನು ಯಾರಮೇಲೂ ಒತ್ತಾಯವಾಗಿ ಹೇರಬೇಕೆಂದಿಲ್ಲ ಎಂದು ಪಂಡಿತ ನೆಹರೂರವರು ಒಂದು ಆಶ್ವಾಸನೆ ಕೊಟ್ಟಿದ್ದರು. ಅದನ್ನು ಪೂರ್ಣವಾಡಿದೆಯೋ ಅಥವಾ ಒತ್ತಾಯವಾಗಿ ಹಿಂದಿ ಎಲ್ಲರವೇಲೂ ಹೇರಲ್ಪಟ್ಟಿದೆಯೇ, ಇಂಗ್ಲೀಷ್ ಬೇಕಾದವರಿಗೆ ಅದಕ್ಕೆ ಅವಕಾಶ ಕೊಡಲು ವ್ಯವಸ್ಥೆಮಾಡಿದೆಯೇ ಅಥವಾ ಅವರ ವಿರುದ್ಧವಾಗಿ ಕಾರ್ಯಾಚರಣೆ ಇದೆಯೇ ಎಂಬುದನ್ನು ವಿಚಾರವಾಡಬೇಕು. ಅದಕ್ಕೆ ವಿರುದ್ಧವಾಗಿ ನಡೆದಿದ್ದಾರೆ. ಈ ವಿಷಯ ದಲ್ಲಿ ಮುಖ್ಯವಾಗಿ ತಪ್ಪಿತಸ್ಥರು ರಾಜ್ಯದ ಮುಖ್ಯಮಂತ್ರಿಗಳು ಮತ್ತು ಅಖಿಲಭಾರತ ಕಾಂಗ್ರೆಸ್ಸಿನ ಅಧ್ಯಕ್ಷರು. ಅದಕ್ಕಾಗಿ ನಿಲುವಳಿ ಸೂಚನೆ ತರಲಾಗಿದೆ. ಈ ದಿವಸ ಎರಡು ಸ್ಥಾನಗಳನ್ನು ಒಬ್ಬರೇ ಆಕ್ರಮಿಸಿಕೊಂಡಿದ್ದಾರೆ. ಇಡೀ ಭಾರತ ದೇಶದ ಜುಟ್ಟು ಅವರ ಕೈಲಿದೆ. ಭಾಷೆಯ ಪ್ರಶ್ನೆ ಇಡೀ ದೇಶಕ್ಕೆ ಸಂಬಂಧಪಟ್ಟಿದೆ. ಅದನ್ನು ಸುಲಭ ರೀತಿಯಿಂದ ಬಿಡಿಸದೆ ಜಟಿಲವಾಡುತ್ತಿ ದ್ದಾರೆ. ಚಳುವಳಿ ಬೇರೆ ಪ್ರಾಂತಗಳಿಗೆ ಹರಡುವ ಭಯವಿದೆ. ಆದುದರಿಂದ ಅವರ ನೀತಿಯನ್ನು ಖಂಡಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಭಾಷೆಯ ಬಗ್ಗೆ ತಂದಿರುವ ನಿಲುವಳಿ ಸೂಚನೆಯ ವಿಚಾರದಲ್ಲಿ ಮಾತನಾಡುತ್ತಾ ಈ ರಾಜ್ಯದಲ್ಲಿ ವಿದ್ಯಾರ್ಥಿಗಳ ಚಳವಳಿ ಪ್ರಚಂಡವಾಗಿ ಗೊಂದಲಮಯವಾಗಿ ನಡೆಯಿತು, ಇದರಿಂದ ನಿರಪರಾಧಿಗಳು ಪೋಲೀಸಿನವರ ಬಂದೂಕಕ್ಕೆ ತುತ್ತಾದರು, ಒಂದು—ಒಂದೂವರೆ ತಿಂಗಳಿನಿಂದ ನಡೆದಿರುವ ದುರಂತ ನೋಡಿದರೆ ನಿಜವಾಗಿಯೂ ಕೂಡ ನಮಗೆ ಸರಕಾರವಿಲ್ಲ ಎಂದು ಹೇಳಬೇಕಾಗಿದೆ. ವಿದ್ಯಾರ್ಥಿಗಳು ಇಷ್ಟು ಗಲಾಟೆ ಮಾಡಿ ತಮಗೆ ಭಾಷೆಯ ಹೊರೆ ಹೆಚ್ಚಾಗಿದೆ ಎಂದು ಹೇಳುವಾಗ, ಅವರು ಹೋರಾಡುತ್ತಿರುವಾಗ ರಾಜ್ಯ ಸರಕಾರದ ಮುಖ್ಯಮಂತ್ರಿಗಳಾಗಲೀ, ವಿದ್ಯಾಶಾಖೆಯ ಮಂತ್ರಿಗಳಾಗಲಿ ಸಂಧಾನವನ್ನು ನಡೆಸಿ, ವಿದ್ಯಾರ್ಥಿಗಳೊಂದಿಗೆ ವಾತನಾಡಿ, ಗೊಂದಲಕ್ಕೆ ಅವಕಾಶವಾಗದಂತೆ ಮಾಡ ಬಹುದಾಗಿತ್ತು. ಆದರೆ ಆಡಳಿತ ಸರಕಾರದಿಂದ ಪೋಲೀಸರ ಕೈಗೆ ಹೋಗಿ ಅಧಿಕಾರ ಅವರಲ್ಲಿ ಕೇಂದ್ರೀಕೃತವಾಗಿದೆ. ರಾಜ್ಯದ ಐ. ಜಿ. ಪಿ. ಕೈಲಿ ಆಡಳಿತವೆಲ್ಲಾ ಹೋಗಿ ಸೇರಿದೆ. ಅವರನ್ನು ಕೇಳುವವರೇ ಇಲ್ಲ. ಅವರು ಯಾರನ್ನು ಯಾವ ಘಳಿಗೆಯಲ್ಲಿ ಬೇಕಾದರೂ ಬಂದೂಕದಿಂದ ಹೊಡೆಯ ಬಹುದು, ಇಂದು ಸಾಮಾನ್ಯ ಮನುಷ್ಯನಿಗೆ ಬೆಲೆ ಇಲ್ಲ, ಅವನು ಯಾವ ನಿಮಿಷದಲ್ಲಿ ಬೇಕಾದರೂ ಒಬ್ಬ ಪೋಲೀಸಿನವನಿಂದ ಕೊಲ್ಲಲ್ಪಡಬಹುದು. ಪರಿಸ್ಥಿತಿ ಹೀಗಿರುವುದರಿಂದ ಸರಕಾರ ರಾಜೀನಾಮೆ ಕೊಡಬೇಕಾದ್ದು ಅವಶ್ಯಕ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ನಿಜಲಿಂಗಪ್ಪನವರು ಮೈಸೂ ರಿಗೆ ಹೋದಾಗ ಅಲ್ಲೊಂದು ಹೇಳಿಕೆ ಕೊಡುವುದು, ಕಾಮರಾಜರ ಹತ್ತಿರ ಮಾತನಾಡಿದಾಗ ಒಂದು ಹೇಳಿಕೆ ಕೊಡುವುದು, ಬೆಂಗಳೂರಿನಲ್ಲಿ ಮತ್ತೊಂದು ರೀತಿ ಹೇಳಿಕೆ ಕೊಡುವುದು—ಹೀಗೆ ಭಿನ್ನಭಿನ್ನ ವಾಗಿ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಒಂದು ಸ್ಪಷ್ಟವಾದ ಹೇಳಿಕೆ ಕೊಟ್ಟು ವಿದ್ಯಾರ್ಥಿಗಳ ಮನಸ್ಸಿನಲ್ಲಿರುವ ಅನುಮಾನ ಪರಿಹಾರ ಮಾಡಿ ಅವರು ಮುಷ್ಕರ ನಿಲ್ಲಿಸಲು ಅವಕಾಶವಾಡ ಬೇಕಾಗಿತ್ತು. ಹಾಗೆ ಮಾಡದಿದ್ದರೆ ಮುಂದೆ ಸೂಕ್ತ ಕ್ರಮ ಕೈಕೊಳ್ಳಬೇಕಾಗುತ್ತದೆ. ಈ ಕಾರ್ಯದಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ವಿಫಲರಾಗಿದ್ದಾರೆಂದು ಹೇಳಿದರೆ ತಪ್ಪಾಗ ಲಾರದು.

ಈ ದಿನ ಇಷ್ಟು ಗಂಡಾಂತರವಾಗಿದೆ. ಎಲ್ಲಿ ವಿದ್ಯಾರ್ಥಿಗಳು ಚಳವಳಿಯನ್ನು ಪ್ರಾರಂಭಿಸಿ ದ್ದಾರೆ, ಈ ಚಳವಳಿ ಹೆಚ್ಚಾಗಿ ಬೆಳೆಯುವುದಕ್ಕೆ ಕಾರಣರು ರಾಜ್ಯದ ಪೋಲೀಸಿನವರು. ಅವರು ನಡೆಸಿದಂತಹ ದೌರ್ಜನ್ಯ, ಅವರು ನಡೆಸಿದಂತಹ ಪೋಲೀಸ್ ರಾಜ್ಯದ ಅಧಿಕಾರ, ಅವರು ನಡೆಸಿದಂತಹ ಗೂಂಡಾಗಿರಿ ಇವತ್ತಿನದಿವಸ ಈ ರಾಜ್ಯದಲ್ಲಿ ವಿದ್ಯಾರ್ಥಿಗಳ ಚಳುವಳಿ ಇಷ್ಟು ಉಗ್ರ ರೂಪವನ್ನು ತಾಳಲು ಕಾರಣವಾಗಿದೆ. ಇವತ್ತಿನ ದಿವಸ ಈ ಚಳುವಳಿಗೆ ಒಂದು ನಾಂದಿ ಎಂದರೆ ನಮ್ಮ ರಾಜ್ಯ ಇದು ಕರ್ನಾಟಕ ರಾಜ್ಯ, ಕನ್ನಡ ರಾಜ್ಯ, ಕನ್ನಡ ಜನ ಇರತಕ್ಕ ರಾಜ್ಯ ನಮಗೆ ಒಂದು ಕನ್ನಡ ಭಾಷೆ ಇದೆ ಎಂದು ತಿಳಿದುಕೊಂಡಿರತಕ್ಕ ಜನ ಇಂತಹ ಸಂದರ್ಭದಲ್ಲಿ ಕನ್ನಡ ಭಾಷೆ ಯನ್ನು ಅಧಿಕೃತವಾಗಿ ಎಲ್ಲಾ ಮಟ್ಟದಲ್ಲೂ ತರುವುದರಲ್ಲಿ ಈ ಸರ್ಕಾರ ವಿಫಲವಾಗಿರುವುದೇ ಇವತ್ತಿನ ಚಳುವಳಿಗೆ ಮೊದಲ ಕಾರಣ, ಮುಖ್ಯ ಕಾರಣ ಎಂಬ ಮಾತನ್ನು ಘಂಟಾಘೋಷವಾಗಿ

ಹೇಳುತ್ತೇನೆ. ಇವತ್ತು ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಮಾಡಬೇಕೆಂದು ಬಾಯಲ್ಲಿ ಹೇಳತಕ್ಕ ನಮ್ಮ ರಾಜ್ಯಸರ್ಕಾರ ಕನ್ನಡ ಭಾಷೆಯ ಅಭಿವೃದ್ಧಿಗೆ ಕೃತಿಯಲ್ಲಿ ಯಾವ ಕಾರ್ಯಕ್ರಮವನ್ನೂ ಕೈಕೊಳ್ಳುತ್ತಿಲ್ಲ ಎಂದು ಘಂಟಾಘೋಷವಾಗಿ ಒತ್ತಾಯವಾಗಿ ಹೇಳುತ್ತಾ ಇದ್ದೇನೆ. ಅವರ ಅಧಿಕಾರ ಯಾವ ರೀತಿ ವಿಫಲವಾಗಿದೆ ಎಂದರೆ, ನನ್ನ ಒಂದು ಕ್ಷೇತ್ರವಾದ ಚಿಕ್ಕಪೇಟೆ ಕ್ಷೇತ್ರದಲ್ಲಿ ಒಬ್ಬ ಹೆಂಗಸಿನ ಮರಣದ ಒಂದು ದಾರಣ ವಾರ್ತೆ, ಹನ್ನೆರಡು ಜನ ಮಕ್ಕಳು ಇದ್ದಾರೆ ಇವತ್ತು. ಅವಳಿಗೆ ಭಾಷೆ ಬೇಕಾಗಿಲ್ಲ, ಸರ್ಕಾರ ಬೇಕಾಗಿಲ್ಲ, ಪ್ರಭುತ್ವ ಬೇಕಾಗಿಲ್ಲ ಯಾವುದೂ ಬೇಕಾಗಿಲ್ಲ. ತನ್ನ ಗಂಡನಿಗಾಗಿ ಟೀ ಸೊಪ್ಪು ತರುವುದಕ್ಕೆ ಅಂಗಡಿಗೆ ಬಂದಂತಹ ಒಬ್ಬ ಹೆಂಗಸನ್ನು ಈ ಸರ್ಕಾರದ ಪೋಲೀಸ್‌ನವರು ನಡು ಬೀದಿಯಲ್ಲಿ ಗುಂಡಿಟ್ಟು ಕೊಂದರು. ಆ ದಾರುಣ ಸನ್ನಿವೇಶ ವನ್ನು ನೀವು ನೋಡಿದ್ದರೆ, ಖಂಡಿತವಾಗಿಯೂ ನಿಮ್ಮ ಹೃದಯ ಕಠೋರವಾಗಿಲ್ಲದೇ ಇದ್ದರೆ ನಿಮ್ಮ ಕಣ್ಣಿನಲ್ಲಿ ನೀರು ಬರುತ್ತಾ ಇತ್ತು ಎಂದು ಹೇಳುತ್ತೇನೆ. ಸತ್ತಿರತಕ್ಕವರ ಬಗ್ಗೆ, ಮೃತಹೊಂದಿರ ತಕ್ಕವರ ಬಗ್ಗೆ ನಿಮ್ಮ ಸರ್ಕಾರದ ನಿಲುವು ಇವತ್ತಿನವರೆಗೂ ಗೊತ್ತಿಲ್ಲ ಒಂದು ಮಾತನ್ನೂ ಕೂಡ ಆಡಿಲ್ಲ. ಸತ್ತಿರುವವರ ಬಗ್ಗೆ, ಮೃತರಾಗಿರುವವರಿಗೆ ಪರಿಹಾರ ಕೇಳತಕ್ಕ ಕೂಗು ಹೋರಾಟ ನಡೆಸತಕ್ಕ ವಿಷಯ ತಮ್ಮ ಗಮನಕ್ಕೆ ಬಂದಿದೆ. ಆದರೂ ಇವತ್ತಿನ ದಿವಸದವರೆಗೂ ಆ ಬಗ್ಗೆ ಸರ್ಕಾರದ ನೀತಿಯನ್ನು ಹೇಳಿಲ್ಲ, ನಿರ್ದಿಷ್ಟವಾದ ಕಾರ್ಯಕ್ರಮವನ್ನಾಗಲೀ ತೆಗೆದುಕೊಂಡಿಲ್ಲ. ನಾನಾದರೂ ಒಬ್ಬ ಚಳುವಳಿಗಾರನಾಗಿ ಹೇಳುತ್ತೇನೆ : ಈ ಚಳುವಳಿ ಮಾಡುವವರನ್ನು ನಿಲ್ಲಿಸಿ ಎಂದು ಹೇಳದಿದ್ದರೆ ಮಾಡತಕ್ಕ ಚಳುವಳಿ ರಾಷ್ಟ್ರಕ್ಕೆ ದ್ರೋಹವಾಗುತ್ತದೆ. ಚಳುವಳಿ ನಡೆಯಲಿ ಎಂದು ಹೇಳತಕ್ಕ ಮನುಷ್ಯ ನಾನು ; ಆದರೆ ಚಳುವಳಿಯಲ್ಲಿ ನ್ಯಾಯ, ಧರ್ಮ ಇವತ್ತು ಇರಬೇಕಾ ಗುತ್ತದೆ. ಇವತ್ತು ಯಾರೋ ಚಳುವಳಿ ಮಾಡುತ್ತಾರೆ ಅಂತ ಗಲಾಟೆಯಾದ ತಕ್ಷಣ ಕಾಲೇಜುಗಳನ್ನು ಮುಚ್ಚಿದ್ದಾರೆ. ಇದರಿಂದ ಇವತ್ತಿನ ದಿವಸ ಯಾರಿಗೆ ನಷ್ಟವಾಗಿದೆ; ನಮ್ಮ ರಾಜ್ಯದ ಬಡ ವಿದ್ಯಾರ್ಥಿಗಳಿಗೆ. ಅಂಥಾದ್ದರಲ್ಲಿ ನಾನು ಈ ಸಭೆಯಲ್ಲಿ ವಿದ್ಯಾರ್ಥಿಗಳನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಿಮ್ಮ ಪರೀಕ್ಷೆ ಕಾಲ ಸನ್ನಿಹಿತವಾಗುತ್ತಾ ಇದೆ. ಆದ್ದರಿಂದ ತಾವುಗಳೆಲ್ಲಾ ಕಾಲೇಜುಗಳಿಗೆ ಹೋಗಿ, ನಿಮ್ಮ ಯಾವುದೇ ಬೇಡಿಕೆ ಇದ್ದರೂ ಅದನ್ನು ನೋಡಿಕೊಳ್ಳುವುದಕ್ಕೆ ಇಲ್ಲಿ ಶಾಸನ ಸಭೆ ಇದೆ, ಮತ್ತು ಹಿರಿಯರು ಇದ್ದಾರೆ, ಅವರಿಗೆ ಬಿಡಿ. ತಾವು ನಡೆಸತಕ್ಕ ಚಳುವಳಿಗೆ ಇವತ್ತಿನ ದಿವಸ ನೆರೆ ರಾಜ್ಯವಾದ ಮದ್ರಾಸಿನ ಡಿ.ಎಂ.ಕೆ. ಸರ್ಕಾರ ಬೆಂಬಲ ನೀಡಿದಂತೆ ಇದೆ ಎಂದು ಘಂಟಾಘೋಷವಾಗಿ ಹೇಳುತ್ತಾ ಇದ್ದೇನೆ. ಡಿ.ಎಂ.ಕೆ. ಸರ್ಕಾರ ತಮ್ಮ ಈ ಒಂದು ಬೆಂಬಲವನ್ನು ಪಡೆದುಕೊಳ್ಳುವುದಕ್ಕೆ ಅಳವಡಿಸುತ್ತಾ ಇದ್ದಾರೆ, ಅದಕ್ಕೆ ಮಾರ್ಗ ಮಾಡಿಕೊಡಬೇಡಿ ಎಂದು ಹೇಳುತ್ತಾ ಇದ್ದೇನೆ. ಡಿ.ಎಂ.ಕೆ. ಅವರಿಂದ ನನಗೆ ಒಂದು ಪತ್ರ ಬಂದಿದೆ, ನೀವು ಡಿ.ಎಂ.ಕೆ. ಅವರನ್ನು ವಿರೋಧ ಮಾಡುತ್ತಾ ಇದ್ದೀರಿ ನಿಮ್ಮನ್ನು ಕೊಲೆ ಮಾಡುತ್ತೇವೆ ಅಂತ ಬರೆದಿದ್ದಾರೆ. ನಡು ಮಧ್ಯಾಹ್ನದಲ್ಲಿ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಆ ಪಾರ್ಟಿ ಲೀಡರ್ ಕಾಟ್ಪಾಡಿಯಿಂದ ಬರೆದಿದ್ದಾರೆ. ಇವತ್ತು ಮತ್ತೊಂದು ಕಾಗದ ಬಂದಿದೆ. ಅವರು ಏನು ಹೇಳಿದ್ದಾರೆ ಎಂದರೆ : ಪಾಲಿಟೀಷಿಯನ್ ರಾಜಾಜಿಯವರು, ಕೋದಂಡರಾಯರು, ಜನರಲ್ ಕರಿಯಪ್ಪನವರು ಇವರೆಲ್ಲರೂ ನಿಮ್ಮವರೇ, ನಮ್ಮ ಚಳುವಳಿಗೆ ನೆರವು ಕೊಡದಿದ್ದರೆ ನಿಮ್ಮನ್ನು ನೇಣು ಹಾಕುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ.

ಇದೇ ರೀತಿ ಮೊನ್ನೆ ಮತ್ತೊಂದು ಪತ್ರ ಬಂದಿದೆ. ಈ ರೀತಿ ಡಿ.ಎಂ.ಕೆ. ಪಾರ್ಟಿಯವರು ಕೊಲೆ ಬೆದರಿಕೆ ಹಾಕುತ್ತಾ ಇದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳೂ ಕೂಡ ಹೊರಗಿನವರ ಕೈವಾಡ ಇದೆ ಎಂದು ಹೇಳಿದರು, ಯಾರೋ ಹೊರಗಿನವರ ಕೈವಾಡ ಇದರಲ್ಲಿ ಇದೆ. ಆದರೆ ಅವರು ಯಾರು, ಎಲ್ಲಿಂದ ಬಂದಿರತಕ್ಕವರು ಎಂಬುದನ್ನು ವಿವರವಾಗಿ ಜನತೆಗೆ ಅವರು ಸ್ಪಷ್ಟಪಡಿಸಿಲ್ಲ. ಅದಕ್ಕೆ ಏನು ಕಾರಣವೋ ನನಗೆ ಅರ್ಥವಾಗಲಿಲ್ಲ. ಇವತ್ತು ಹೇಳುತ್ತಾ ಇದ್ದೇನೆ. ವಿದ್ಯಾರ್ಥಿಗಳಿಗೆ ಒಂದು ಆದರ್ಶವಾದ ನಿಲುವನ್ನು ತಾವು ಕೊಡಿ, ತಮ್ಮ ಆದರ್ಶವಾದ ಒಂದು ಹೇಳಿಕೆಯನ್ನು ನೀಡಿ, ಇವತ್ತು ವಿದ್ಯಾರ್ಥಿಗಳ ಮನಸ್ಸು ಕಲುಷಿತವಾಗಿದೆ. ಅವರ ಮನಸ್ಸಿಗೆ ಸಂತೋಷವನ್ನುಂಟು ಮಾಡತಕ್ಕ ದೃಷ್ಟಿಯಿಂದ ನಿಮ್ಮ ಹೇಳಿಕೆಯನ್ನು ನೀಡಿ. ನಿಮ್ಮ ಈ 3-4 ತರಹ ಹೇಳಿಕೆಗಳನ್ನು ಕೊಡುವ ರೀತಿಯನ್ನು ಬಿಟ್ಟು ಒಂದೇ ಒಂದು ಹೇಳಿಕೆಯನ್ನು ಕೊಡಿ. ಮೈಸೂರಿನಲ್ಲಿ ಕೊಡುವುದು ಒಂದು ಹೇಳಿಕೆ, ಮದ್ರಾಸಿನಲ್ಲಿ ಕೊಡುವುದು ಒಂದು ಹೇಳಿಕೆ, ದೆಹಲಿಯಲ್ಲಿ ಕೊಡುವುದು ಒಂದು ಹೇಳಿಕೆ ಇದು ಬೇಡಿ, ಎಲ್ಲಾ ಹೇಳಿಕೆ ಒಂದೇ ರೀತಿಯದಾಗಿರಲಿ. ನೀವು ನಡೆಸತಕ್ಕ ಕಾರ್ಯ ಸುಗಮವಾಗಲಿ ಎಂದು ಹೇಳುತ್ತಾ ಇದ್ದೇನೆ. ಒಂದೂವರೆ ತಿಂಗಳಿನಿಂದ ನಡೆಯುತ್ತಾ ಇರತಕ್ಕ ಈ ಪ್ರಚಂಡವಾದ ಚಳುವಳಿಯನ್ನು ತಾವು ಗಮನಿಸಬೇಕು. ರಾಜ್ಯಸರ್ಕಾರ ಇವತ್ತಿನದಿವಸ ಕಣ್ಣುಮುಚ್ಚಿ ಕುಳಿತಿರತಕ್ಕ ನೀತಿಯನ್ನು ನೋಡಿದಾಗ ನಮಗೆ ಬಹಳ ವ್ಯಥೆಯಾಗುತ್ತಾ ಇದೆ. ಇನ್ನುಮುಂದೆ ಈ ರೀತಿ ಬೇಜವಾಬ್ದಾರಿಯಿಂದ ನನಗೂ ಇದಕ್ಕೂ ಸಂಬಂಧವಿಲ್ಲ ಎಂಬ ದೃಷ್ಟಿಯಿಂದ

(ಶ್ರೀ ವಾಟಾಳ್ ನಾಗರಾಜ್)

ನೀವು ಕುಳಿತುಕೊಳ್ಳುವುದಾದರೆ ಅದರ ಪರಿಣಾಮ ಬಹಳ ವಿಕೋಪಕ್ಕೆ ಹೋಗುತ್ತದೆ, ನಾಳೆ ನೀವು ಬಹಳ ಕಷ್ಟದಲ್ಲಿ ನಿಮ್ಮ ಅಧಿಕಾರವನ್ನು ನಡೆಸಬೇಕಾಗುತ್ತದೆ, ಬಹಳ ದಿವಸ ನಿಮ್ಮ ಕೈಯಲ್ಲಿ ಬಂದೂಕ ಇದೆ ಅಂತ ಆಡಳಿತ ನಡೆಸುವುದಕ್ಕಾಗುವುದಿಲ್ಲ, ನಿಮ್ಮ ಬಂದೂಕಗಳನ್ನು ಜನ ಬಹಿಷ್ಕರಿಸಿ ನುಗ್ಗತಕ್ಕ ಕಾಲ ಬರುತ್ತದೆ ಎಂಬ ಮಾತನ್ನು ಕಟ್ಟಕಡೆಯದಾಗಿ ಎಚ್ಚರಿಕೆ ನೀಡಿ, ಇವತ್ತು ಸರಿಯಾದ ಮಾರ್ಗದಲ್ಲಿ ಆದರ್ಶವನ್ನು ನೀಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

† ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಸನ್ಮಾನ್ಯಸಭಾಧ್ಯಕ್ಷರೇ, ಈ ದಿನ ದೇಶದ ಮುಂದೆ ಬಹಳ ಗಂಭೀರವಾದಂತಹ ಒಂದು ಪರಿಸ್ಥಿತಿಯನ್ನು ಸರ್ಕಾರ ಉಂಟುಮಾಡಿದೆ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಸುಮಾರು ಎರಡೂವರೆ ತಿಂಗಳಕಾಲ ರಾಜ್ಯದ ಅನೇಕ ಭಾಗಗಳಲ್ಲಿ ಬೆಂಗಳೂರು, ಮಂಗಳೂರು ಮತ್ತು ಇತರ ಅನೇಕ ಕಡೆಗಳಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಭಾಷಾ ಶಾಸನದ ವಿರುದ್ಧ ಪ್ರಚಂಡ ಚಳವಳಿಯನ್ನೆಬ್ಬಿಸಿದ್ದರೂ ಅದನ್ನು ಸರ್ಕಾರದವರು ಕಂಡರೂ ಕಾಣದಂತೆ, ನಮ್ಮವರೇ ಆದ ಆ ಮಕ್ಕಳಮೇಲೆ ಶಸ್ತ್ರ ಸಜ್ಜಿತರಾದ ಪೋಲೀಸರನ್ನು ಬಿಟ್ಟು ಅವರನ್ನು ದಮನ ಮಾಡಿಸಿದ್ದು ಖಂಡನೀಯ, ಆ ಮಕ್ಕಳು ಹಿಂದೆ ನಮ್ಮ ಇಡೀ ಭಾರತ ದೇಶಕ್ಕೆ ಹೇಗೆ ಸ್ವಾತಂತ್ರ್ಯವನ್ನು ತಂದು ಕೊಟ್ಟರು, ಅದರ ಬಗ್ಗೆ ಅವರು ಎಷ್ಟು ಹೋರಾಟ ಮಾಡಿದರೆಂಬುದನ್ನು ನಾವೆಲ್ಲರೂ ಅರಿತಿದ್ದೇವೆ. ಸರ್ಕಾರದವರು ಆ ಬಾಲಕರು ಒಂದು ಶಾಂತ ವಾತಾವರಣದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕೆ ಒಂದು ಸುಗಮವಾದ ಹಾದಿಯನ್ನು ಹುಡುಕತಕ್ಕ ಮಾರ್ಗವನ್ನು ಬಿಟ್ಟು ದೇಶದಲ್ಲಿ ಒಂದು ಅಲ್ಲೋಲಕಲ್ಲೋಲ ಪರಿಸ್ಥಿತಿಯುಂಟಾಗುವುದಕ್ಕೆ ಅವಕಾಶವನ್ನುಂಟುಮಾಡಿದ್ದರ ಆಗುಹೋಗುಗಳ ಜವಾಬ್ದಾರಿಯನ್ನು ಆಡಳಿತನಡೆಸತಕ್ಕ ಸರ್ಕಾರ ಹೊರಲೇಬೇಕು. ಬೆಂಗಳೂರಿನ ವಿಶ್ವವಿದ್ಯಾನಿಲಯದ ಆವರಣದೊಳಗೆ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಅಪ್ಪಣೆಯನ್ನು ಪಡೆಯದೆ, ಅವರ ಒಪ್ಪಿಗೆಯನ್ನು ಪಡೆಯದೆ ಅಕ್ರಮವಾಗಿ ಆವರಣದೊಳಗೆ ನುಗ್ಗಿ ರೂಮುಗಳಲ್ಲಿದ್ದ ವಿದ್ಯಾರ್ಥಿಗಳನ್ನು ಹೊಡೆದುದೇ ಅಲ್ಲದೆ, ರೂಮಿನಲ್ಲಿದ್ದ ಅಧಿಕಾರಿಗಳನ್ನೂ ಸಹಾ ತಳಿಸಿದ್ದಾರೆ ಪೋಲೀಸಿನವರು. ಹೀಗೆಲ್ಲಾ ಮಾಡಿ ಅನಿವಾರ್ಯ ಪ್ರಸಂಗ ಬಂದುದರಿಂದ ಅಕ್ರಮ ಪ್ರವೇಶ ಮಾಡಬೇಕಾಗಿ ಬಂದಿತೆಂದು ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಮುಖ್ಯ ಮಂತ್ರಿಗಳಿರತಕ್ಕ ಸ್ಥಳದಲ್ಲಿ ಕಾನೂನನ್ನು ಪರಿಪಾಲನೆ ಮಾಡಲು ಬದ್ಧರಾಗಿರತಕ್ಕ ಪೋಲೀಸಿನವರೇ ಕಾನೂನನ್ನು ಭಂಗಮಾಡಿ ಎಲ್ಲ ಅನಾಹುತಗಳಿಗೂ ಅವರೇ ಮೂಲ ಕಾರಣರಾಗಿರತಕ್ಕ ಸಂದರ್ಭದಲ್ಲಿ ಶಾಂತಿಯನ್ನು ಕಲಕಿರತಕ್ಕ ಬಗ್ಗೆ ಸರ್ಕಾರದವರು ಯಾವ ರೀತಿ ಉತ್ತರ ಕೊಡುತ್ತಾರೆಂಬುದನ್ನು ನಾನು ಕಾದು ನೋಡಬೇಕಾಗಿದೆ.

ಇನ್ನು ನಮ್ಮ ವಿದ್ಯಾರ್ಥಿಗಳು ಕಳೆದ ಎರಡು ತಿಂಗಳಿಂದಲೂ ನಡೆಸಿದ ಆ ಚಳುವಳಿಯ ಪರಿಣಾಮವೇನು ಎಂಬುದನ್ನು ನಾವೀಗ ಪರಿಶೀಲನೆ ಮಾಡಬೇಕಾಗಿದೆ. ವಿದ್ಯಾರ್ಥಿಗಳು ಯಾವಾಗ ಭಾಷಾ ವಿಚಾರವಾಗಿ ಒಂದು ಚಳುವಳಿಯನ್ನುಂಟು ಮಾಡಿದರೆಂದು ಸರ್ಕಾರಕ್ಕೆ ವರದಿ ಬಂದಿತೋ ಆ ಕೂಡಲೆ ಅವರು ಅದರ ಪರಿಹಾರಕ್ಕೆ ಒಂದು ಸೂಕ್ತವಾದ ಮಾರ್ಗವನ್ನು ಊಹಿಸಬೇಕಾಗಿತ್ತು; ಅದರ ಬಗ್ಗೆ ಸರ್ಕಾರದವರು ಒಂದು ನಿರ್ದಿಷ್ಟವಾದ ತೀರ್ಮಾನಕ್ಕೆ ಬಾರದೆ ಆ ಸಮಸ್ಯೆಯನ್ನು ಹೇಗೆ ಸುಗಮವಾಗಿ ಪರಿಹರಿಸಬೇಕೆಂಬುದನ್ನು ಕಾಣದೆ ಅನೇಕ ನಿರ್ದೋಷಿ ವಿದ್ಯಾರ್ಥಿಗಳ ಮೇಲೆ ಗುಂಡಿನ ಮಳೆಗರೆದಿದ್ದು ಸರ್ಕಾರದವರಲ್ಲಿರತಕ್ಕ ಚಾಣಾಕ್ಷ್ಮೆಯ ದಿವಾಳಿತನವನ್ನು ಸೂಚಿಸುತ್ತದೆ ಆ ಪ್ರಸಂಗ. ಆಗಲೇ ಶ್ರೀ ವಾಟಾಳ್ ನಾಗರಾಜ್ ಅವರು ಹೇಳಿದಂತೆ ಆ ದುರಂತದಲ್ಲಿ ಅನೇಕ ನಿರ್ದೋಷಿಗಳ ಹತ್ಯೆ ನಡಿದಿದೆ. ಬೆಂಗಳೂರಲ್ಲಿ ನಡೆದ ಚಳವಳಿಯನ್ನು ಸರ್ಕಾರದವರು ಶಾಂತ ರೀತಿಯಲ್ಲಿ ನಡೆಯುತ್ತಿದ್ದ ಚಳುವಳಿಗೆ ಭಂಗತಂದು ವಿದ್ಯಾರ್ಥಿಗಳ ಮೇಲೆ ಪೋಲೀಸರನ್ನು ಹಚ್ಚಿ ಕತ್ತಿ, ಮದ್ದು, ಗುಂಡುಗಳನ್ನು ಉಪಯೋಗಿಸುವಂತೆ ಪ್ರೇರೇಪಿಸಿದ್ದರಿಂದ ಆ ಚಳುವಳಿಯು ಮತ್ತಷ್ಟು ಬಲಹೊಂದಿ ಅದು ಬೆಂಗಳೂರಲ್ಲೇ ಅಲ್ಲದೆ ಮಂಗಳೂರು—ಮೈಸೂರು ಮತ್ತು ರಾಜ್ಯದ ಇನ್ನೂ ಅನೇಕ ಪಟ್ಟಣಗಳಲ್ಲಿ ಹರಡುವುದಕ್ಕೆ ಅವಕಾಶವಾಯಿತು. ಸರ್ಕಾರದವರು ಇಂಥಾ ಒಂದು ಅಧಿಕಾರ ಧೋರಣೆಯನ್ನು ಏಕೆ ತಾಳಿದರೋ ನನಗೆ ಅದು ತಿಳಿಯದಾಗಿದೆ. ಭಾಷಾ ವಿಚಾರದಲ್ಲಿ ನಮ್ಮ ಮುಖ್ಯ ಮಂತ್ರಿಗಳು ಒಂದೊಂದು ಕಡೆ ಒಂದೊಂದು ರೀತೀಯಾಗಿ ಹೇಳಿಕೆಗಳನ್ನು ಕೊಟ್ಟಿದ್ದಾರೆ. ದೇಶದಲ್ಲಿ ಒಂದು ಅಶಾಂತಪರಿಸ್ಥಿತಿಯುಂಟಾಗುವುದಕ್ಕೆ ಇದೆ ಮೂಲ ಕಾರಣ. ಅಷ್ಟೇ ಅಲ್ಲದೆ ನಮ್ಮ ಮುಖ್ಯ ಮಂತ್ರಿಗಳು ಈ ಚಳುವಳಿಯಲ್ಲಿ ನಮ್ಮ

ವಿದ್ಯಾರ್ಥಿಗಳು ಸೇರಿಲ್ಲ, ಅವರು ಈ ಚಳುವಳಿಯನ್ನು ಮಾಡುತ್ತಿಲ್ಲ ಯಾರೋ ಹೊರಗಿನವರು ಇಲ್ಲಿ ಬಂದು ಚಳುವಳಿಯನ್ನು ನಡೆಸುತ್ತಿದ್ದಾರೆಂಬುದಾಗಿ ಬೇರೆ ಹೇಳಿದ್ದಾರೆ, ಆದರೆ ಈ ದಿವಸ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳಿಗೆ ತಮ್ಮ ಮುಂದಿನ ಭವಿಷ್ಯ ಜೀವನದ ರೂಪರೇಷೆಗಳನ್ನು ಆಲೋಚಿಸಲು—ಅರಿಯಲು ಅವರಿಗೆ ಅಷ್ಟೂ ಬುದ್ಧಿ ಇಲ್ಲವೇನು ! ಅವರಿಗೆ ಅಷ್ಟು ಬುದ್ಧಿಯಿಲ್ಲ ಎನ್ನುವುದಾದರೆ ಆ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕೇನು ಬೆಲೆಯಿದೆ? ವಿದ್ಯಾರ್ಥಿಗಳು ಶಾಂತ ರೀತಿಯಿಂದ ತಮ್ಮ ಪ್ರತಿಭಟನೆಯನ್ನು ಮುಂದುವರಿಸುತ್ತಿದ್ದಾಗಲೇ ಅವರನ್ನು ಕರೆಸಿಕೊಂಡು ಅವರಲ್ಲಿ ತಲೆದೋರಿರತಕ್ಕ ಅಸಮಾಧಾನಗಳಿಗೆ ಕಾರಣವೇನು ಎಂಬುದನ್ನು ತಿಳಿದುಕೊಂಡು ಅದಕ್ಕೆ ಉಚಿತವಾದ ಒಂದು ಪರಿಹಾರಮಾರ್ಗವನ್ನು ಹುಡುಕದೆ, ಆ ನಿರಪರಾಧಿಗಳಾದ ವಿದ್ಯಾರ್ಥಿಗಳ ಮೇಲೆ ಸರ್ಕಾರ ತನ್ನ ಬಲಪ್ರದರ್ಶನ ಮಾಡಿದ್ದು ಬಹಳ ಹೀನಾಯವಾದ ಕೃತ್ಯ ಹಾಗೆ ಪೋಲೀಸರ ಬಲಪ್ರದರ್ಶನಕ್ಕೆ ತುತ್ತಾದ ವಿದ್ಯಾರ್ಥಿಗಳ ಮನಸ್ಸು ಕಲಕಿ ಹೋಗಿದೆ. ಅವರು ತಮ್ಮ ವಿದ್ಯಾಭ್ಯಾಸದ ವರ್ಷದ ಕೊನೆಯಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಲು ಅವರಿಗೆ ಉತ್ಸಾಹವೆಲ್ಲಾ ಕುಗ್ಗಿ ಹೋಗಿದೆ. ನಮ್ಮ ಇಂದಿನ ಮಕ್ಕಳು ದೇಶದ ಮುಂದಿನ ಪ್ರಜೆಗಳು. ಇಂದಿನ ಸರ್ಕಾರದಲ್ಲಿ ನಮ್ಮ ಮಕ್ಕಳಿಗೆ ಒಂದು ನಂಬಿಕೆ ವಿಶ್ವಾಸಗಳು ಇಲ್ಲದಂತಾದರೆ ಮುಂದಿನ ದೇಶಾಡಳಿತದಲ್ಲಿ ಜನರಿಗೆ ವಿಶ್ವಾಸವೇ ಇಲ್ಲದಂತಾಗುವುದು. ಈ ಚಳುವಳಿಯನ್ನುಂಟುಮಾಡಿದ ಆ ಮಕ್ಕಳಾದರೂ ಯಾರು? ಅವರೆಲ್ಲರೂ ನಮ್ಮ ಮಕ್ಕಳೇ ಅಲ್ಲವೇ ! ಅವರನ್ನು ಕರೆದು ನಿಮ್ಮ ಅನಾನುಕೂಲಗಳೇನು ನಿಮ್ಮ ಅನುಮಾನಗಳೇನು ಕಾರಣ ಎಂಬುದನ್ನು ಪರಿಶೀಲಿಸದೆ, ಆ ವಿದ್ಯಾರ್ಥಿಗಳ ಮುಖಂಡರನ್ನು ಅವರ ಪೋಷಕರು, ತಂದೆ ತಾಯಿಗಳನ್ನು ಹಾಗೂ ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು ಬರುಮಾಡಿಕೊಂಡು ಹಾಗೂ ಅವರ ಜೊತೆಗೆ ದೇಶದ ಮುಖಂಡರನ್ನೂ ಮತ್ತು ವಿರೋಧ ಪಕ್ಷಗಳ ಮುಖಂಡರನ್ನೂ ಕರೆಸಿಕೊಂಡು ಭಾಷಾ ಗೊಂದಲದ ಬಗ್ಗೆ ಉಂಟಾಗಿರತಕ್ಕ ಅಶಾಂತಿಯನ್ನು ನಿವಾರಣೆ ಮಾಡಲು ಒಂದು ಸೂಕ್ತ ಮಾರ್ಗವನ್ನು ಹುಡುಕದೆ ಅಧಿಕಾರದಲ್ಲಿರತಕ್ಕ ಜನರು ತಮ್ಮ ಕೈಲಿ ಪೋಲೀಸಿನವರಿದ್ದಾರೆಂದು ಇವರು ಬಲಪ್ರದರ್ಶನಕ್ಕೆ ಹೊರಟ್ಟಿದ್ದರಿಂದ ಆ ವಿದ್ಯಾರ್ಥಿಗಳು ಇವರಿಗೆ ಚೆನ್ನಾಗಿ ಬುದ್ಧಿಯನ್ನು ಕಲಿಸಿದರು. ದೇಶದ ಆಡಳಿತ ಜವಾಬ್ದಾರಿಯನ್ನು ಹೊತ್ತಿರತಕ್ಕ ಜನರು ತಮ್ಮನ್ನು ಬಿಟ್ಟರೆ ದೇಶದಲ್ಲಿ ಇನ್ನಾರು ಬುದ್ಧಿವಂತರೇ ಇಲ್ಲ, ದಕ್ಷರಿಲ್ಲ, ವಿವೇಕಸ್ಥರಿಲ್ಲ ಎಂಬ ದುರಭಿಮಾನಕ್ಕೆ ತುತ್ತಾಗದೆ ದೇಶಕ್ಕೆ ಒಂದು ಕಲ್ಯಾಣವಾದರೆ ಸಾಕು ಅನ್ನತಕ್ಕ ಆಶೆ ಇವರಲ್ಲಿದ್ದಿದ್ದರೆ, ಇವರು ಕೂಡಲೆ ವಿರೋಧ ಪಕ್ಷಗಳ ಸದಸ್ಯರನ್ನು ಕರೆಸಿಕೊಂಡು ಸಮಾಲೋಚನೆ ಮಾಡಿ ಈ ದುರಂತಗಳನ್ನೆಲ್ಲಾ ತಪ್ಪಿಸಿ ದೇಶಕ್ಕೆ ಕಲ್ಯಾಣವನ್ನು ಉಂಟುಮಾಡಬಹುದಾಗಿತ್ತು. ಆದರೆ ಅಂಥ ಒಂದು ವಿವೇಚನಾ ಶಕ್ತಿ ಅಧಿಕಾರಷಾಹಿಯಲ್ಲಿ ಶೂನ್ಯವಾದ್ದರಿಂದ ಸರಸ್ವತಿಯ ದೇಗುಲದಲ್ಲಿ ರಕ್ತದ ಕೋಡಿ ಹರಿಸುವುದಕ್ಕೆ ಕಾರಣವಾಯಿತು. ಆದುದರಿಂದ ಈ ಎಲ್ಲ ದುರಂತಗಳಿಗೂ ಸರ್ಕಾರದವರೇ ಕಾರಣ ಎಂದು ಹೇಳದೆ ವಿಧಿಯಿಲ್ಲ. ದೇಶದಲ್ಲಿರತಕ್ಕ ಬಾಲಕರಿಗೆ ಸಂಬಂಧಪಟ್ಟ ಒಂದು ಭಾಷಾ ಸಮಸ್ಯೆಯ ಬಗ್ಗೆ ನಮ್ಮ ರಾಜ್ಯ ತನ್ನ ಒಂದು ನಿರ್ದಿಷ್ಟ ನಿಲುವೇನು ಎಂಬುದನ್ನು ವ್ಯಕ್ತಪಡಿಸದೆ ಇದೇ ಅನಿಶ್ಚಿತ ಸ್ಥಿತಿ ಮುಂದುವರೆದರೆ ದೇಶದ ಮುಂದಿನ ಭವಿಷ್ಯದ ಬೆಳಕೇನೆಂಬುದನ್ನು ಕಾಣದಿದ್ದ ಯುವಕ ಜನಾಂಗದಲ್ಲಿ ಒಂದು ಅಶಾಂತಿ ಮಾಡಿದ್ದರಲ್ಲಿ ಆಶ್ಚರ್ಯವೇನಿದೆ? ನಮ್ಮ ಬಳಿ ಅನೇಕ ಜನ ವಿದ್ಯಾರ್ಥಿಗಳು, ಅವರ ತಂದೆತಾಯಿಗಳೂ ಮತ್ತು ಇತರೇ ನಾಗರೀಕರೂ ಬಂದು 'ಏನು ಸ್ವಾಮಿ ನಮ್ಮ ಮಕ್ಕಳ ಅಹವಾಲವನ್ನು ಕೇಳತಕ್ಕವರು ಯಾರೂ ಇಲ್ಲವೇ ದೇಶದಲ್ಲಿ ಶಾಂತ ರೀತಿಯಿಂದ ನಡೆಯಬೇಕಾದ ವಿದ್ಯಾಭ್ಯಾಸದ ಬಗ್ಗೆ ಇಷ್ಟು ಅಶಾಂತಿ ವಾತಾವರಣವಿದ್ದಿದ್ದಾಗ್ಯೂ ಅದನ್ನು ಕೇಳತಕ್ಕವರೇ ಇಲ್ಲವಲ್ಲ, ಎಂದು ಅವರು ತಮ್ಮ ಬೇಸರವನ್ನು ನಮ್ಮಲ್ಲಿ ವ್ಯಕ್ತಪಡಿಸಿದ್ದಾರೆ. ಜವಾಬ್ದಾರಿಯನ್ನರಿತ ಜನರು ದೇಶದ ಆಡಳಿತ ಸ್ಥಾನದಲ್ಲಿದ್ದರೆ ಹೀಗಾಗುತ್ತಿರಲಿಲ್ಲ. ದೇಶದ ಆಡಳಿತವನ್ನು ಸುಗಮವಾಗಿ ಮಾಡತಕ್ಕ ದಕ್ಷತೆ ಅವರಲ್ಲಿ ಇಲ್ಲದಿದ್ದರೆ ಅವರು ಆಡಳಿತವನ್ನು ಬಿಟ್ಟು ಕೊಡಲಿ. ದೇಶದಲ್ಲಿ ದಕ್ಷರಾದ ಜನರು ಇನ್ನೂ ಇದ್ದಾರೆ ಅವರು ಇದನ್ನೆಲ್ಲಾ ಸರಿಪಡಿಸುತ್ತಾರೆ. ಈಗಲಾದರೂ ನಮ್ಮ ಸರ್ಕಾರದವರು ಭಾಷಾ ವಿಚಾರದಲ್ಲಿ ಒಂದು ಸೂಕ್ತ ಪರಿಹಾರವನ್ನು ಕಂಡು ಹಿಡಿಯಲು ವಿರೋಧ ಪಕ್ಷದವರ ಸಹಕಾರ ಬೇಕಾಗಿದ್ದರೆ ಅದನ್ನು ನೀಡುವುದಕ್ಕೆ ನಾವು ಸಿದ್ಧವಾಗಿದ್ದೇವೆ. ಆ ರೀತಿ ಸರ್ಕಾರ ಎಲ್ಲರ ಸಹಕಾರ ಸಲಹೆಗಳನ್ನು ಪಡೆದು ಈ ಭಾಷಾ ಗೊಂದಲವನ್ನು ಆದಷ್ಟು ಬೇಗ ತೀವ್ರವಾಗಿ ಪರಿಹರಿಸುತ್ತಾರೆಂದು ನಂಬಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಅಧ್ಯಕ್ಷರೆ, ಈ ಭಾಷಾ ಗೊಂದಲ ಮತ್ತು ನಮ್ಮ ರಾಜ್ಯದಲ್ಲಿ ಇಲ್ಲಿಯ ವರೆಗೆ ಆಗಿರತಕ್ಕ ಸಾವು ನೋವು ನಷ್ಟಗಳಿಗೆಲ್ಲಾ ಪೂರ್ಣ ಹೊಣೆಗಾರರಾಗಿರತಕ್ಕವರು ಯಾರು

(ಶ್ರೀ ಟಿ. ಆರ್. ಶಾಮಣ್ಣ)

ಎಂದರೆ ಅದು ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರೇ ಎಂದು ಹೇಳದೆ ವಿಧಿಯಿಲ್ಲ. ತಮಗೆಲ್ಲರಿಗೂ ತಿಳಿದಿರುವ ಹಾಗೆ ಕೇವಲ ಒಂವೇ ಒಂದು ಓಟಿನ ಬಲದಿಂದ ಈ ಹಿಂದಿ ಭಾಷೆ ರಾಜ್ಯಾಂಗದಲ್ಲಿ ಆಡಳಿತ ಭಾಷೆಯಾಗಬೇಕು ಅನ್ನುವ ಸ್ಥಾನವನ್ನು ಗಳಿಸಿತು ಅನ್ನುವುದು, ತಮಗೆಲ್ಲರಿಗೂ ತಿಳಿದೆ ಇದೆ. ಈ ತೀರ್ಮಾನವನ್ನು ಒಂದು ನೇರವಾದ ಕಾರ್ಯಕ್ರಮವನ್ನಾಗಿ ತರದೆ ಶ್ರೀ ನೆಹರೂ ಅವರು ಮತ್ತು ಶ್ರೀ ಶಾಸ್ತ್ರಿಯವರು ಎಲ್ಲಿಯವರಿಗೆ ದಕ್ಷಿಣ ಭಾರತೀಯರು ಇಷ್ಟಪಡುತ್ತಾರೋ ಅಲ್ಲಿಯವರೆಗೂ ಇಂಗ್ಲಿಷನ್ನು ಮುಂದುವರಿಸಿಕೊಂಡು ಹೋಗಬಹುದು ಎಂಬುದಾಗಿ ಭರವಸೆ ಕೊಟ್ಟರು. ಆಗಲೇ ಈ ಹಿಂದಿ ಜನಗಳ ಒಂದು ಒತ್ತಡಕ್ಕೆ.........

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಹೇಳುವುದರಲ್ಲಿ ತಪ್ಪುಭಾವನೆ ಇದೆ. ಒಂವೇ ಓಟಿನಿಂದ ಹಿಂದಿ ರಾಷ್ಟ್ರಭಾಷೆಯಾಗಲಿಲ್ಲ. ಹಿಂದಿ ಇರಬೇಕೇ ಅಥವಾ ಇಂಗ್ಲಿಷ್ ಇರಬೇಕೇ ಎಂದಾಗ ಒಂದೇ ಓಟಿನಿಂದ ಇಂಗ್ಲಿಷ್ ಇರಬೇಕು ಎಂದು ಆಯಿತು.

ಶ್ರೀ ಟಿ. ಆರ್. ಶಾಮಣ್ಣ.—ಹಿಂದಿ ಅಫಿಷಿಯಲ್ ಲಾಂಗ್ವೇಜ್ ಆಗಬೇಕೆಂಬುದೂ ಸಹ ಒಂದೇ ಓಟಿನಿಂದ ಆಯಿತು ಎಂಬುದಾಗಿ ನಾನು ಹೇಳುತ್ತಿದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಅದು ಅವರ ಅಭಿಪ್ರಾಯವಷ್ಟೇ.

ಶ್ರೀ ಟಿ. ಆರ್. ಶಾಮಣ್ಣ.—ಹಿಂದಿ ಇಲ್ಲಿ ಜಾರಿಗೆ ಬರಬೇಕು ಎಂದು ಹೇಳಿದಾಗ ತಕ್ಷಣವೇ ಅದರ ಬಗ್ಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳುವುದಿಲ್ಲವೆಂದು ಅನೇಕರು ಭರವಸೆ ಕೊಟ್ಟರು. ಎಲ್ಲಿಯವರೆಗೆ ದಕ್ಷಿಣ ಇಂಡಿಯಾದಲ್ಲಿ ಇಂಗ್ಲೀಷ್ ಇರಬೇಕೆಂದು ಜನ ಹೇಳುತ್ತಾರೋ ಅಲ್ಲಿಯವರೆಗೂ ಇರುವುದೆಂದು ಭರವಸೆ ಕೊಟ್ಟರು. ಮೊನ್ನೆಯಿಂದ ಈ ಹಿಂದಿ ಆಡಳಿತಭಾಷೆಯಾಗಿ ದಕ್ಷಿಣದವರಲ್ಲಿ ಇರಬೇಕು ಎಂದು ಉತ್ತರದವರು ಒತ್ತಾಯ ಮಾಡುತ್ತಿರುವುದರಿಂದ ಅವರ ಒಂದು ಒತ್ತಡಕ್ಕೆ ಮನ್ನಣೆ ಕೊಟ್ಟು ಒಂದು ದೊಡ್ಡ ಬಾಲಂಗೋಸಿಯ ಹಾಗೆ ಇಲ್ಲಿ ಒಂದು ನಿರ್ಣಯವನ್ನು ತರುವುದು ಕಾಂಗ್ರೆಸ್ ಸರ್ಕಾರದ ದಿವಾಳಿತನವೇ ಮುಖ್ಯ ಕಾರಣವೆಂದು ನಾನು ಹೇಳಬೇಕಾಗಿದೆ. ಹಿಂದಿ ಆಡಳಿತಭಾಷೆಯಾಗಬೇಕು ಎಂದು ಹೇಳಿದಾಗ ಎಲ್ಲಾ ಕಡೆಯೂ ಹಿಂದಿನ ಒಂದು ಆಶ್ವಾಸನೆಗೆ ವಿರೋಧವಾದ ತೀರ್ಮಾನ ತೆಗೆದುಕೊಂಡಂತಾಗಿದೆ. ಎರಡನೆಯದಾಗಿ ನಮ್ಮ ರಾಜ್ಯಕ್ಕೆ ಸಂಬಂಧ ಪಟ್ಟಹಾಗೆ ಮಾನ್ಯ ಮುಖ್ಯ ಮಂತ್ರಿಗಳು ಕಾಂಗ್ರೆಸ್ ಅಧ್ಯಕ್ಷರಾಗದೆ ಹೋಗಿದ್ದರೆ ಈ ಸಮಸ್ಯೆ ಇಷ್ಟು ಉಗ್ರವಾಗಿ ಆಗುತ್ತಿರಲಿಲ್ಲ. ಏಕೆಂದರೆ ಇವರು ಹಿಂದಿಯನ್ನು ವಿರೋಧಮಾಡಿದರೆ ಅಲ್ಲಿ ಕಲ್ಲಿನ ಏಟು ಬೀಳುತ್ತದೆ. ಇಲ್ಲಿ ಹಿಂದಿ ಇರಬೇಕೆಂದು ಹೇಳಿದರೆ ಗಲಾಟೆಮಾಡುತ್ತಾರೆ. ಇವರು ಇಂತಹ ಕಷ್ಟಕ್ಕೆ ಸಿಕ್ಕಿಹಾಕಿಕೊಂಡು ಒಂದೊಂದು ಕಡೆ ಒಂದೊಂದು ರೀತಿಯ ಸ್ಟೇಟ್‌ಮೆಂಟ್ ಕೊಡುವ ಪರಿಸ್ಥಿತಿ ಇವರಿಗೆ ಬಂತು. ಇಷ್ಟು ಕಷ್ಟ ಆಯಿತು.

ದೇಶದಲ್ಲಿ ಈ ಸಮಸ್ಯೆ ಬಂದಮೇಲೆ ಉತ್ತರದವರ ಹಿಂದಿ ಭಾಷೆಗೂ ದಕ್ಷಿಣದವರ ಭಾಷೆಗೂ ಒಂದು ತಾರತಮ್ಯವಿದೆ. ತೀವ್ರವಾದ ಕ್ರಮ ತೆಗೆದುಕೊಂಡು ತ್ರಿಭಾಷ ಸೂತ್ರವನ್ನು ಎಲ್ಲಾ ಕಡೆಯೂ ಅನ್ವಯ ಮಾಡುತ್ತೇವೆಂದು ಮೊದಲೇ ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟು ಅದರ ಬಗ್ಗೆ ಒಂದು ನಿಲುವನ್ನು ತಳೆದಿದ್ದರೆ ಚೆನ್ನಾಗಿತ್ತು. ಒಂದುವೇಳೆ ಹಾಗೆ ಯಾರಾದರೂ ತ್ರಿಭಾಷಾ ಸೂತ್ರಕ್ಕೆ ಒಪ್ಪದೇ ನಮ್ಮ ಇಷ್ಟಪ್ರಕಾರ ನಾವು ನಡೆಯುತ್ತೇವೆಂದು ಹೇಳಿದರೆ ಆ ಕಡೆ ಅವರನ್ನು ಒಲಿಸಿಕೊಳ್ಳಬೇಕು, ಈ ಕಡೆ ನಮ್ಮನ್ನು ಒಲಿಸಿಕೊಳ್ಳಬೇಕು. ಈ ಕಷ್ಟಕ್ಕೆಲ್ಲಾ ಮಾನ್ಯ ಶ್ರೀ ನಿಜ ಲಿಂಗಪ್ಪನವರು ಹೊಣೆಗಾರಿಕೆ ಹೊರಬೇಕು. ಇದನ್ನು ಅವರು ಎಂದಿಗೂ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಎರಡನೆಯದಾಗಿ ಕನ್ನಡ ರಾಜ್ಯಭಾಷೆ ಆಡಳಿತ ಭಾಷೆಯಾಗುವುದಕ್ಕೆ ಸರ್ಕಾರದವರು ಯಾ ಕ್ರಮವನ್ನೂ ಇದುವರೆಗೆ ತೆಗೆದುಕೊಂಡಿಲ್ಲ. ಬೆಂಗಳೂರು ನಗರ ಕಾರ್ಪೊರೇಷನ್ನಿನಲ್ಲಿ ಕನ್ನಡ ಆಡಳಿತಭಾಷೆಯಾಗಬೇಕು ಎಂಬುದಾಗಿ ತೀರ್ಮಾನ ತೆಗೆದುಕೊಂಡರೂ ಇವತ್ತು ಅಲ್ಲಿ ಒಬ್ಬ ಅಡ್ಮಿನಿಸ್ಟ್ರೇಟರನ್ನು ನೇಮಕಮಾಡಿಕೊಂಡಿದ್ದರೂ ಸುಮಾರು 10 ಕನ್ನಡ ಟೈಪ್‌ರೈಟರುಗಳನ್ನು ರಿಕಾರ್ಡ್ಸ್ ರೂಂನಲ್ಲಿ ಹಾಕಿದ್ದಾರೆ. ಇನ್ನೂ ಅವುಗಳ ಧೂಳನ್ನು ಸಹ ಹೊಡೆದಿಲ್ಲ ಆಡಳಿತ ನಡೆಸುವವರು ಕೊಂಡುಕೊಂಡಿರತಕ್ಕ 100 ಕನ್ನಡ ಟೈಪ್‌ರೈಟರುಗಳ ಪೈಕಿ ಇನ್ನೂ 88 ಟೈಪ್‌ರೈಟರುಗಳು ಸ್ಟೇಷನರಿ ಇಲಾಖೆಯಲ್ಲಿಯೇ ಬಿದ್ದಿವೆ. ಕನ್ನಡ ಪಾಠ ಹೇಳತಕ್ಕ ಉಪಾಧ್ಯಾಯರುಗಳನ್ನು ಸರಿಯಾಗಿ ತಯಾರುಮಾಡಿ ಕನ್ನಡದಲ್ಲಿಯೇ ಹೆಚ್ಚಿಗೆ ವಿದ್ಯೆ ಕಲಿಸಬೇಕು. ಸ್ವಾತಂತ್ರ್ಯ ಬಂದು ಇಪ್ಪತ್ತೊಂದು ವರ್ಷಗಳಾದರೂ ಇವರು ಏನು ಮಾಡಿದ್ದಾರೆ ಎನ್ನುವುದನ್ನು ಯೋಚನೆಮಾಡಿ. ಇವರು

ಕನ್ನಡ ಕಲಿಸಲಿಲ್ಲ, ಇಂಗ್ಲೀಷ್ ಬರುವುದಿಲ್ಲ. ಹಿಂದಿ ಭಾಷೆಯನ್ನು ವಿದ್ಯಾರ್ಥಿಗಳಮೇಲೆ ಹೇರುವುವುದಕ್ಕೆ ಹೊರಟಿದ್ದಾರೆ. ಹೀಗಾಗಿ ಈ ದೇಶದ ಪರಿಸ್ಥಿತಿಯನ್ನು ಹದಗೆಡಿಸುತ್ತಿದ್ದಾರೆ. ಇಂತಹ ಒಂದು ದೊಡ್ಡ ಹೊಣಗಾರಿಕೆ ಇವತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ಇವೆಯೆಂದು ಶ್ರೀಮಾನ್ ನಿಜಲಿಂಗಪ್ಪನವರಿಗೆ ಹೇಳಬೇಕಾಗಿದೆ. ಇವರು ಈ ದೇಶದ ಸಮಸ್ಯೆಗಳ ಪೈಕಿ ಯಾವುದಾದರೂ ಒಂದು ಸಮಸ್ಯೆಯನ್ನಾದರೂ ಚಳುವಳಿ ಇಲ್ಲದೆ ಬಗೆಹರಿಸಿದ್ದೇವೆಂದು ಒಂದು ದಿಟ್ಟತನದಿಂದ ಹೇಳುವುದಕ್ಕೆ ಸಾಧ್ಯವೇ ?

ಇನ್ನು ನೀರಿನ ಸಮಸ್ಯೆ ಬಗ್ಗೆ ನಾನು ಸರ್ಕಾರದಲ್ಲಿ ಎಷ್ಟೋ ಸಾರಿ ಬಂದು ಹೇಳಿದ್ದೇನೆ. ಬೆಂಗಳೂರು ಬಂದ್ ಸಹ ಅನೇಕ ಸಾರಿ ಆಗಿದೆ. ಮೆರವಣಿಗೆಗಳೂ ನಡೆದಿವೆ. ಇದರ ಬಗ್ಗೆ ಮೆಮೊರ್ಯಾಂಡಂ ಸಹ ಕೊಟ್ಟಿದ್ದೇವೆ. ಯಾವುದೇ ಸಮಸ್ಯೆಯನ್ನು ಚಳುವಳಿ ಇಲ್ಲದೆ ಬಗೆಹರಿಸಿದ್ದೀರಾ ? ವಿದ್ಯಾರ್ಥಿಗಳ ಫೀಸ್ ಸಹ ಹೆಚ್ಚುಮಾಡಿದರು. ಆಗ ವಿದ್ಯಾರ್ಥಿಗಳೇ ಗಲಾಟೆಮಾಡಿದರು. ಅವರ ಒಂದು ಗಲಾಟೆಗೆ ಮನ್ನಣೆ ಕೊಟ್ಟು ಫೀಸನ್ನು ಹೆಚ್ಚಿಸುವುದಿಲ್ಲವೆಂದು ತೀರ್ಮಾನ ಮಾಡಿದರು. ಮೊನ್ನೆ ಎನ್. ಜಿ. ಓ. ಗಳು ತಮ್ಮ ತುಟ್ಟಿಭತ್ಯದ ವಿಷಯವಾಗಿ ಗಲಾಟೆಮಾಡಿದರು ಇಂತಹ ಬಹಳ ಸಮಸ್ಯೆಗಳು ಇನ್ನೂ ಇವೆ. ಯಾವುದಾದರೂ ಒಂದನ್ನು ಚಳುವಳಿ ಹಾಗೂ ಗಲಾಟೆ ಇಲ್ಲದೆ ಬಗೆಹರಿಸಿದ್ದೀರಾ ಎಂಬುದನ್ನು ಹೇಳಬೇಕು. ಆದ್ದರಿಂದ ನೀವು ಕಾಂಗ್ರೆಸ್ ಪಕ್ಷದಲ್ಲಿರುವುದಕ್ಕೆ ಲಾಯಕ್ಕೇ, ಮುಖ್ಯ ಮಂತ್ರಿಯಾಗಿರುವುದಕ್ಕೆ ಲಾಯಕ್ಕೆ ಎಂದು ನಾನು ಕೇಳುತ್ತೇನೆ. ನೀವು ಒಳ್ಳೆಯ ಮಾತಿನಲ್ಲಿ ಜಗ್ಗುತ್ತೀರಾ ಎಂದು ನಾನು ಕೇಳುತ್ತೇನೆ. ಸರಿಯಾದ ರೀತಿಯಲ್ಲಿ ಅವರು ಪಾಠ ಹೇಳಿದರೆ ನೀವು ಕೇಳುತ್ತೀರಿ. ಆ ಮಾರ್ಗವನ್ನು ನೀವೇ ಅವರಿಗೆ ತೋರಿಸಿದ್ದೀರಿ. ವಿದ್ಯಾರ್ಥಿಗಳನ್ನು ರಾಜಕೀಯಕ್ಕೆ ಬಳಸಿಕೊಂಡವರು ಯಾರು ? ಅವರು ತಾಯಿ ತಂದೆಗಳ ಮಾತು ಕೇಳುವುದಿಲ್ಲ, ಉಪಾಧ್ಯಾಯರ ಮಾತುಗಳನ್ನು ಕೇಳುವುದಿಲ್ಲ. ಅವರನ್ನು ರಾಜಕೀಯಕ್ಕೆ ಎಳೆದು ಅವರ ಡಿಸಿಪ್ಲಿನ್ನನ್ನು, ಶಿಸ್ತನ್ನು ಕೆಡಿಸಿರುವುದರಿಂದ ಅವರ ಮೇಲಿನ ಪೂರ್ಣ ಜವಾಬ್ದಾರಿ ನಿಮ್ಮಮೇಲೆ ಇದೆ. ಆ ಜವಾಬ್ದಾರಿಯನ್ನು ಬಗೆಹರಿಸುವುದೂ ಸಹ ನಿಮ್ಮಮೇಲೆಯೇ ಇದೆ. ಇದರಿಂದ ಖಂಡಿತವಾಗಿಯೂ ನೀವು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಈಗ ಉತ್ತರ ಇಂಡಿಯಾಕ್ಕೆ ಹೋಗಿ ಅಲ್ಲಿನ ರೈಲ್ವೆ ಸ್ಟೇಷನ್ನಿನಲ್ಲಿ ಒಂದು ಟಿಕೆಟ್ ತೆಗೆದುಕೊಳ್ಳಬೇಕಾದರೆ ಅಲ್ಲಿ ಹಿಂದಿಯಲ್ಲಿಯೇ ಮಾತನಾಡಬೇಕು. ಇಲ್ಲದಿದ್ದರೆ ಅವರು ತಲೆ ಕೂಡ ಎತ್ತಿ ನೋಡುವುದಿಲ್ಲ, ಟಿಕೆಟ್ ಕೊಡುವುದೂ ಇಲ್ಲ. ಇನ್ನೊಂದು ವಿಷಯ. ನನ್ನ ನೆಂಟರ ಪೈಕಿ ಒಬ್ಬರು ಉತ್ತರಪ್ರದೇಶದಲ್ಲಿ ಇದ್ದಾರೆ. ಅವರ ಕಾರಿಗೆ ಇಂಗ್ಲಿಷ್‌ನಲ್ಲಿ ಬೋರ್ಡ್ ಇದ್ದುದರಿಂದ ಅದನ್ನು ಪುಡಿಪುಡಿ ಮಾಡಿದ್ದಾರೆಂದು ನನಗೆ ಕಾಗದ ಬರೆದಿದ್ದಾರೆ. ದೇಶದಲ್ಲಿ ಇಷ್ಟು ಅಚಾತುರ್ಯವುಳ್ಳವರು ಇರುವುದರಿಂದ ನಾವು ಹಿಂದಿಗೆ ಏಕೆ ಪುರಸ್ಕಾರ ಕೊಡಬೇಕು ತಾವು ಹೇಳಿ. ಈಗ ತ್ರಿಭಾಷೆ ಇರಬೇಕು, ಹಿಂದಿ ಕಲಿಯಬೇಕು ಎಂದು ಹೇಳುತ್ತೀರಿ. ಆದರೆ ವಿಧ್ಯಾರ್ಥಿಗಳು ಕೇಳುವುದನ್ನು ಗಮನಿಸಬೇಕು. ಇಂಗ್ಲಿಷ್ ಹಿಂದಿ ಮತ್ತು ದಕ್ಷಿಣ ಇಂಡಿಯಾದ ಯಾವುದಾದರೊಂದು ಭಾಷೆ ಉತ್ತರ ಇಂಡಿಯಾದವರು ಕಲಿಯಬೇಕು. ಅವರು ಆ ರೀತಿ ಮಾಡುವುದು ಬೇಡ ಬರೀ ಹಿಂದಿ ಒಂದು ಭಾಷೆ ಇದ್ದರೆ ಸಾಕು ಎಂದು ಹೇಳುವುದು ಸರಿಯೇ ? ಆದರೆ ದಕ್ಷಿಣ ಇಂಡಿಯಾದವರು ಇಂಗ್ಲಿಷ್, ಕನ್ನಡ, ಹಿಂದಿ ಈ ಮೂರು ಭಾಷೆಗಳನ್ನು ಕಲಿಯಬೇಕು ಅಂದರೆ ನ್ಯಾಯವೇ ? ಮುಸಲ್ಮಾನ್ ಆಗಿರುವವನು ಉರ್ದು ಭಾಷೆ ಕಲಿಯಲೇಬೇಕು. ಹಾಗೆಯೇ ಟೆಮಿಲಿಯನ್ ಆಗಿರುವವನು ತಮಿಳು ಭಾಷೆ ಕಲಿಯಲೇಬೇಕು. ಏಕೆಂದರೆ ಅವು ಅವರವರ ಮಾತೃಭಾಷೆಯಾಗಿರುತ್ತವೆ. ಹೀಗಾಗಿ ಅವರಿಗೆ ಅನ್‌ಈಕ್ವಲ್ ಬರ್ಡನ್ ಇದೆ. ಈಗ ಒಂದು ಕಡೆ ಹಿಂದಿ ಕಲಿಯಬೇಕು ಎಂದು ಹೇಳುತ್ತಾರೆ. ಹಿಂದಿಯಲ್ಲಿ ಸೊನ್ನೆ ಬಂದರೆ ಪಾಸ್ ಕೊಡುತ್ತಾರೆ. ಯಾವುದಾದರೂ ಸ್ಕೂಲಿನಲ್ಲಿ ಹಿಂದಿ ಪಾಠ ಸರಿಯಾಗಿ ಆಗುತ್ತಿದೆಯೇ ಅಂದರೆ ಅದೇನೂ ಇಲ್ಲ. ಹಿಂದಿ ಬೋಗಸ್ ಎಗ್ಸಾಮಿನೇಷನ್. ಆದರಿಂದಲೇ ಹಿಂದಿ ಸಾಕಷ್ಟು ಇಲ್ಲಿ ಅಭಿವೃದ್ಧಿಯಾಗಿಲ್ಲ. ಹಿಂದಿಗೆ ಇಲ್ಲಿ ಖರ್ಚುಮಾಡುವಂಥ ದುಡ್ಡು ಎಲ್ಲಾ ಶುದ್ಧ ಮೋಸ. ಆದರಿಂದ ಒಂದು ಚೂರೂ ಪ್ರಯೋಜನವಿಲ್ಲ. ಈ ದೇಶದಲ್ಲಿ ಹಿಂದಿ ನ್ಯಾಷನಲ್ ಲ್ಯಾಂಗ್ವೇಜ್ ಆಗಿ ಇರಬೇಕೆಂದು ಹೇಳುವವರು ನೀವು. ಆದರೆ ಅದನ್ನು ಒತ್ತಾಯ ಪೂರ್ವಕವಾಗಿ ವಿದ್ಯಾರ್ಥಿಗಳ ಮೇಲೆ ಹೇರಿ ಒಂದು ರೀತಿಯಲ್ಲಿ ಅನ್ಯಾಯಮಾಡಿ 'ಒಂದು ಕಣ್ಣಿಗೆ ಬೆಣ್ಣೆ ಮತ್ತು ಒಂದು ಕಣ್ಣಿಗೆ ಸುಣ್ಣ' ಇಡುತ್ತಿದ್ದೀರಿ. ಇದು ಖಂಡಿತವಾಗಿ ನ್ಯಾಯವಲ್ಲ. ಆದರೆ ನಾನು ನ್ಯಾಷನಲ್ ಲ್ಯಾಂಗ್ವೇಜ್ ಬೇಡ ಎಂದು ಹೇಳುವುದಿಲ್ಲ. ಎಲ್ಲರಿಗೂ ಸಮಾನವಾದ ಹಕ್ಕು; ಸಮಾನವಾದ ನ್ಯಾಯ ದೊರಕುವವರೆಗೂ ಮತ್ತು ಎಲ್ಲಿಯವರೆಗೆ ಸರಿಯಾದ ರೀತಿಯಲ್ಲಿ ಈ ವಿಚಾರದ ಬಗ್ಗೆ ಈ ಸರ್ಕಾರ ನಡೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳ ದ್ವಿಭಾಷಾಸೂತ್ರವನ್ನು ಮಾತ್ರ ಅನ್ವಯ ಮಾಡುತ್ತೇವೆಂದು ನೀವು ಹೇಳಬೇಕು. ಈ ಸಮಸ್ಯೆ ಸಮಾನವಾಗಿ ಇಡೀ ಇಂಡಿಯಾ

(ಶ್ರೀ ಟಿ. ಆರ್. ಶಾಮಣ್ಣ)

ದೇಶದಲ್ಲಿ ಹಂಚಿಕೆ ಆಗದೇ ಹೋದರೆ ನಿಮ್ಮ ಜೊತೆಯಲ್ಲಿ ನಾನು ಸಹಕರಿಸುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ದಿಟ್ಟತನದಿಂದ ಒಂದು ನಿಲುವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಖಂಡಿತ ಈ ಸಮಸ್ಯೆ ಬಗೆಹರಿಯುವುದಿಲ್ಲ. ಕಾಂಗ್ರೆಸ್ ಅಧ್ಯಕ್ಷರಾಗಿದ್ದರೂ ನೀವು ಹಿಂದುಮುಂದು ನೋಡದೆ ಇದರ ಬಗ್ಗೆ ಯಾವುದಾದರೂ ಒಂದು ನಿಲುವು ತೆಗೆದುಕೊಂಡು ಇಲ್ಲಿ ಹೇಳಬೇಕು. ಇದರಿಂದ ನಿಮಗೆ ಕಾಂಗ್ರೆಸ್ ಅಧ್ಯಕ್ಷಪದವಿ ಹೋದರೂ ಪರವಾಇಲ್ಲ. ನ್ಯಾಯವಾದ ರೀತಿಯಲ್ಲಿ ನಾನು ನಡೆದುಕೊಳ್ಳುತ್ತಿದ್ದೇನೆಂದು ಹೇಳಿ. ಅಕಡೆ ಒಂದು ಕಾಲು, ಈ ಕಡೆ ಒಂದು ಕಾಲು ಇಟ್ಟುಕೊಂಡು ಅಲ್ಲೊಂದು ಮಾತು ಇಲ್ಲೊಂದು ಮಾತು ಆಡುತ್ತಿದ್ದರೆ ನಿಜವಾಗಿ ಈ ಸಮಸ್ಯೆ ಬಗೆ ಹರಿಯುವುದಿಲ್ಲ. ನಿಮ್ಮಮೇಲೆ ಇದರ ಜವಾಬ್ದಾರಿ ಹೆಚ್ಚಾಗಿದೆ. ಇದರಿಂದಾಗತಕ್ಕ ಅನಾಹುತಗಳಿಗೆ ನೀವೇ ಕಾರಣರಾಗುತ್ತೀರಿ. ಒಂದು ವಿಷಯ. ನಿಜವಾಗಿ ಈ ಸಮಸ್ಯೆ ಜಾಗ್ರತೆಯಾಗಿ ಬಗೆಹರಿಯ ಬೇಕಾದರೆ, ಹಿಂದಿ ರಾಜ್ಯಗಳಿಗೆ ಸರಿಯಾದ ರೀತಿಯಲ್ಲಿ ನೀವು ಸವಾಲು ಹಾಕಬೇಕು. ನೀವು ಕೂಡ ಸರಿಯಾದ ರೀತಿಯಲ್ಲಿ ನಡೆಯಿರಿ ನಾವು ಕೂಡ ದೇಶದ ಹಿತದೃಷ್ಟಿಯಿಂದ ನ್ಯಾಯವಾದ ಮಾರ್ಗದಲ್ಲಿ ನಡೆಯುತ್ತೇವೆಂದು ಕೇಂದ್ರದವರಿಗೆ ನೀವು ಹೇಳಬೇಕು. ಒಂದುವೇಳೆ ಇದರಲ್ಲಿ ವ್ಯತ್ಯಾಸ ಮಾಡಿದರೆ ನಾನು ನಿಮ್ಮ ಜೊತೆಯಲ್ಲಿ ಸಹಕರಿಸುವುದಿಲ್ಲವೆಂದು ಹೇಳಬೇಕು. ಇದರ ಬಗ್ಗೆ ಮದ್ರಾಸ್ ಮತ್ತು ಆಂಧ್ರದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡರೂ ನೀವು ಇಲ್ಲಿ ಆ ರೀತಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಹಿಂದು ಮುಂದು ನೋಡುತ್ತಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳಾಗಿ ನೀವೇ ಆ ಬಗ್ಗೆ ಒಂದು ನಿರ್ಣಯ ಇಲ್ಲಿ ಮಾಡಿ. ಬೇರೆಯವರ ಮೂಲಕ ಆ ಬಗ್ಗೆ ನಿರ್ಣಯ ಮಾಡಿಸುವುದಾದರೆ ಅದು ಸರಿಯಲ್ಲ. ಮಾನ್ಯ ಮುಖ್ಯ ಮಂತ್ರಿಗಳಾಗಿ ನೀವೇ ಒಂದು ನಿರ್ಣಯವನ್ನು ಇಲ್ಲಿ ಮಂಡಿಸಿ ಈ ಸಮಸ್ಯೆ ನ್ಯಾಯವಾಗಿ ಬಗೆಹರಿಯಬೇಕಾದರೆ ದಿಟ್ಟತನದಿಂದ ನ್ಯಾಯವಾಗಿ ಯುವಕರ ಹಿತದೃಷ್ಟಿಯಿಂದ ಆಗತಕ್ಕ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಆದರೆ ಈಗ ತಾವು ಮಾಡಿರತಕ್ಕ ನಿರ್ಣಯ ಬಗ್ಗೆ ಈ ಭಾಷಾ ಸಮಸ್ಯೆಯ ಪ್ರಕಾರ ಕನ್ನಡ ಪರಿಪಕ್ವವಾಗುವ ರೀತಿಯಲ್ಲಿ ಇನ್ನೂ ಯಾವ ತೀರ್ಮಾನವನ್ನೂ ಕೂಡ ತೆಗೆದುಕೊಂಡಿಲ್ಲ.

ಇಂಗ್ಲೀಷು ಇರಲೇಬೇಕೆಂದು ಮತ್ತೊಂದು ಸಾರಿ ಹೇಳಿದ್ದಾರೆ. ಕನ್ನಡ ಬೆಳವಣಿಗೆ ಆಗ ಬೇಕು ಎಂದು ಹೇಳುತ್ತಾರೆ. ಮತ್ತೊಂದು ಸಾರಿ ಹಿಂದಿ ಇರಲೇಬೇಕೆಂದು ಹೇಳುತ್ತಾರೆ. ಸರಿಯಾದ ರೀತಿಯಲ್ಲಿ ತ್ರಿಭಾಷಾ ಸೂತ್ರವನ್ನು ಹಾಕಬೇಕಾದರೆ ಎಲ್ಲರಿಗೂ ಅನ್ವಯಿಸಬೇಕು. ಒಂದೇ ಭಾಷೆಯ ನಿಲುವು ತಾಳಬಾರದು. ಇವರು ದಿಟ್ಟತನದ ನಿಲುವನ್ನು ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಕಾಂಗ್ರೆಸ್ ಅಧ್ಯಕ್ಷರಾಗಿರುವಾಗ ಇವರು ಈ ನಿಲುವನ್ನು ತೆಗೆದುಕೊಳ್ಳು ವುದಕ್ಕೆ ಸಾಧ್ಯವಿಲ್ಲ ಎನ್ನುವ ಅಪನಂಬಿಕೆ ಇದೆ. ಆದ್ದರಿಂದ ನಾನು ಹೆಚ್ಚು ಮಾತನಾಡುವ ಅವಶ್ಯಕ ವಿಲ್ಲ. ನಿಜವಾಗಿಯೂ ತಮ್ಮ ಬಾಯಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅವರ ಹಿತವನ್ನು ಕಾಪಾಡತಕ್ಕ ಒಂದು ಸರಿಯಾದ ನಿಲುವನ್ನು ತೆಗೆದುಕೊಳ್ಳುತ್ತಾರೆಂದು ನಂಬಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri H. SIDDAVEERAPPA.—If you are closing by 6 P.M. it will be talked over.

Mr. CHAIRMAN.—The time to be allotted will not be less than 2 hours. So, if it goes beyond 6 P.M. that does not matter. Rule 56 reads thus:

> "The Speaker may, if he is satisfied that there has been adequate debate, put the question at 6 P M. or at such other hour not being less than two hours from the time of commencement of the debate."

Therefore if anybody wants to participate in this discussion even beyond 6 O'Clock, we have to sit here till 7 O'Clock. That is the position. I cannot shut out any Hon'ble Member from participating.

Sri S. SIVAPPA.—What we want is it should not be talked over. There should be a reply from the Government.

Mr. CHAIRMAN.—The Leader of the House will reply.

Sri H. SIDDAVEERAPPA.—I agree. It is not my intention that Mr. Krishnan should be shut out. What I am anxious is, in view of the lacuna in the Governor's Address also, nothing is said about the language or the Government's intention in the matter. We can sit late. There is nothing wrong.

Mr. CHAIRMAN.—It is for the Government to intervene at any time. Of course, the Chair cannot compel anybody to participate in the debate. I think the Chief Minister will probably like to reply after hearing all the speakers. I do not know what his idea is. In the meanwhile, let Mr. Krishnan begin his speech.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾಪತಿಗಳೇ, ನಮ್ಮ ರಾಜ್ಯದಲ್ಲಿ ಕಳೆದ ಒಂದೂವರೆ ಎರಡು ತಿಂಗಳಿಂದ ವಿದ್ಯಾರ್ಥಿಗಳ ಪ್ರಚಂಡ ಆಂಧೋಳನ ನಡೆಯುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಇವರ ಬಗ್ಗೆ ನಮ್ಮ ಸ್ನೇಹಿತರು ಮಾತನಾಡಿ ಇದರ ಕಾರಣವೇನು, ಮತ್ತು ಸಮಸ್ಯೆ ಏನು ಇದನ್ನು ಯಾವ ರೀತಿ ಬಗೆಹರಿಸಬೇಕು ಎನ್ನುವ ಬಗ್ಗೆ ಸ್ವಲ್ಪ ಮಾತನಾಡಿದ್ದಾರೆ. ನಾನಾದರೂ ಮೊದಲೇ ಸರ್ಕಾರದ ಗಮನಕ್ಕೆ ಅದರಲ್ಲೂ ಮಾನ್ಯಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾದ್ದು ಇಷ್ಟೇ. ಈ ದಿನ ವಿದ್ಯಾರ್ಥಿಗಳ ಚಳುವಳಿ ಎಲ್ಲಿಯತನಕ ಹೋಗಿದೆ. ಎಂದರೆ ಅನೇಕ ವಿದ್ಯಾರ್ಥಿಗಳು ಪ್ರಾಣವನ್ನು ಕಳೆದುಕೊಂಡಿದ್ದಾರೆ. ಒಟ್ಟಾರೆ ಮೈಸೂರು ರಾಜ್ಯದಲ್ಲಿ 9-10 ಜನ ವಿದ್ಯಾರ್ಥಿಗಳು ಪೋಲೀಸಿನವರ ಗುಂಡಿಗೆ ತುತ್ತಾಗಿದ್ದಾರೆಂದು ಪತ್ರಿಕೆಗಳ ವರದಿಗಳಿಂದ ತಿಳಿದುಬರುತ್ತದೆ. 13ಕ್ಕಿಂತ ಹೆಚ್ಚು ಜನ ಸಾವಿಗೆ ಈಡಾಗಿದ್ದಾರೆ, ಪೋಲೀಸಿನವರ ಗುಂಡಿಗೆ ಈಡಾಗಿದ್ದಾರೆಂದು ನಮಗೆ ತಿಳಿದುಬಂದಿದೆ. ನೂರಾರು ಜನಗಳು ಲಾಠಿ ಏಟನ್ನು ತಿಂದಿದ್ದಾರೆ. ಅಶ್ರುವಾಯು ಪ್ರಯೋಗದಿಂದ ಬೇಕಾದಷ್ಟು ಜನ ನೊಂದಿದ್ದಾರೆ. ಅವ್ಯಾಹತವಾಗಿ ಎರಡು ತಿಂಗಳಿಂದ ಪೋಲೀಸಿನವರ ದೌರ್ಜನ್ಯ, ದಬ್ಬಾಳಿಕೆ, ಅತ್ಯಾಚಾರ, ಅನ್ಯಾಯ ಜನತೆಯಮೇಲೆ ನಡೆದಿದೆ. ವಿದ್ಯಾರ್ಥಿಗಳ ಮೇಲೆ ನಡೆದಿದೆ. ಇತರರ ಮೇಲೆ ನಡೆದಿದೆ, ಮುಖ್ಯವಾಗಿ ಒಂದಂಶವನ್ನು ಈ ಸಭೆಯ ಗಮನಕ್ಕೆ ತರುವುದು ಏನೆಂದರೆ, ವಿದ್ಯಾರ್ಥಿಗಳು ಬೀದಿಯಲ್ಲಿ ಮೆರವಣಿಗೆಯನ್ನು ನಡೆಸಿದರು. ಆದ್ದರಿಂದ ಹೊಡೆದೆವು, ಗಲಾಟೆ ಮಾಡಿದ್ದಾರೆ, ಆದ್ದರಿಂದ ಹೊಡೆದೆವು ಎನ್ನುವುದು ಮಾತ್ರವಲ್ಲದೆ ವಿಶ್ವವಿದ್ಯಾಲಯದ ಪವಿತ್ರತೆಗೆ ಭಂಗ ಬರುವ ರೀತಿಯಲ್ಲಿ ಪೋಲೀಸಿನವರು ವರ್ತಿಸುವುದಕ್ಕೆ ಅವಕಾಶವನ್ನು ಸರ್ಕಾರಮಾಡಿಕೊಟ್ಟಿದೆ. ಇದು ಬಹಳ ಗಂಭೀರವಾದ ಪರಿಸ್ಥಿತಿ ಇದೆ. ಇದನ್ನು ನಾವು ಸ್ವಲ್ಪ ಯೋಚನೆ ಮಾಡಬೇಕು. ಪೋಲೀಸಿನವರು ವಿಶ್ವವಿದ್ಯಾನಿಲಯದ ಒಳಗಡೆ ನುಗ್ಗಿ ವಿದ್ಯಾರ್ಥಿಗಳನು ಹೊಡೆದರು ಎಂದು ಪತ್ರಿಕೆಯಲ್ಲಿ ಬಂದಿದೆ. ಪ್ರಜಾವಾಣಿ ಪತ್ರಿಕೆಯಲ್ಲಿ ಮಾರ್ಚಿ 23-24ನೇ ತಾರೀಖಿನ ಎರಡು ಪತ್ರಿಕೆಗಳಲ್ಲೂ ಕೂಡ ಬಹಳ ದೀರ್ಘವಾಗಿ, ಸವಿಸ್ತಾರವಾಗಿ ಯಾವ ರೀತಿ ಪೋಲೀಸಿನವರು ವಿದ್ಯಾರ್ಥಿಗಳನ್ನು ಬೀದಿಯಲ್ಲಿ ಅಟ್ಟಿಸಿಕೊಂಡು ಹೋಗಿ ಹೊಡೆದರು, ಹಾಸ್ಟಲುಗಳಲ್ಲಿ ಹೊಡೆದರು, ಕ್ಲಾಸ್ ರೂಮಿನಲ್ಲಿ ಹೊಡೆದರು ಎಂದು ತಿಳಿದುಬಂದಿದೆ. ವಿಶ್ವವಿದ್ಯಾನಿಲಯದ ಪವಿತ್ರತೆಗೆ, ವಿದ್ಯಾಭ್ಯಾಸದ ಪವಿತ್ರತೆಗೆ ಕಳಂಕ ತಂದಿದೆ.

ಇನ್ನೊಂದು ವಿಷಯ ನಮ್ಮ ಗಮನಕ್ಕೆ ತರಬೇಕಾದ್ದು ಏನೆಂದರೆ, ವಿಶ್ವವಿದ್ಯಾನಿಲಯದ ಪ್ರಿನ್ಸಿಪಾಲರನ್ನೂ ಕೂಡ ಪೋಲೀಸಿನವರು ಬಿಡಲಿಲ್ಲ. ಪ್ರಿನ್ಸಿಪಾಲ್ ಷಡಕ್ಷರಯ್ಯನವರನ್ನೂ ಕೂಡ ಪೋಲೀಸಿನವರು ಲಾಠಿಯಿಂದ ಹೊಡೆದರು ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಮಾನ್ಯ ವಿದ್ಯಾಮಂತ್ರಿಗಳಾದ ಶಂಕರಗೌಡರು ಕಾಲೇಜಿನ ಷಡಾಕ್ಷರಸ್ವಾಮಿ ಪೋಲೀಸಿನವರು ಹೊಡೆದದ್ದು ಸುಳ್ಳು. ಅವರನ್ನು ಹೊಡೆದದ್ದು ನಿಜವಾದರೆ ನಾನು ರಾಜಿನಾಮೆಯನ್ನು ಕೊಡುತ್ತೇನೆ ಎಂದು ಮೇಲ್ಮನೆಯಲ್ಲಿ ಹೇಳಿದ್ದಾರೆ. ಅದು ಪತ್ರಿಕೆಯಲ್ಲಿ ಬಂದಿದೆ. ಈಗ ಅವರು ತಕ್ಷಣ ರಾಜಿನಾಮೆಯನ್ನು ಕೊಡತಕ್ಕ ಪರಿಸ್ಥಿತಿ ಬರುತ್ತದೆ. ಪ್ರಿನ್ಸಿಪಾಲರನ್ನು ಹೊಡೆದ ವಿಚಾರವನ್ನು ಪತ್ರಿಕೆಗಳವರು ಮಾತ್ರ ಹೇಳಲಿಲ್ಲ; ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಶ್ರೀಮಾನ್ ಗೋಕಾಕ್ ಅವರೂ ಸಹ ಹೇಳಿದ್ದಾರೆ. ಶ್ರೀಮಾನ್ ಗೋಕಾಕ್ ರವರೂ ಬಹಳ ಉದ್ವೇಗದಿಂದ ಮಾತನಾಡಿದ್ದು 24ನೇ ತಾರೀಖಿನ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಪೋಲೀಸಿನವರು ವಿಶ್ವವಿದ್ಯಾನಿಲಯದ ಆವರಣವನ್ನು ಉಪಕುಲಪತಿಗಳ ಅಪ್ಪಣೆ ಇಲ್ಲದೆ ಪ್ರವೇಶ ಮಾಡಿದ್ದು ಅಷ್ಟೇ ಅಲ್ಲ. ಪ್ರಿನ್ಸಿಪಾಲರನ್ನು ಹೊಡೆದದ್ದನು. ನಾನು ಕಣ್ಣಾರೆ ಕಂಡೆ ಎಂದು ಹೇಳಿದ್ದಾರೆ ಇದು ಒಂದೇ ಸಾಕ್ಷಿ ಸಾಕು. ಯಾವ ರೀತಿ ಪೋಲೀಸಿನವರು ವರ್ತಿಸಿದ್ದಾರೆ, ದಬ್ಬಾಳಿಕೆಯನ್ನು ನಡೆಸಿದ್ದಾರೆ ಎಂಬುವಕ್ಕೆ ಕಾಲೇಜಿನ ಪ್ರಿನ್ಸಿಪಾಲರನ್ನೂ ಕೂಡ ಬಿಡಲಿಲ್ಲ.

(ಶ್ರೀ ಎಂ. ಎಸ್. ಕೃಷ್ಣನ್)

ಶ್ರೀ ಎಸ್. ನಿಜಲಿಂಗಪ್ಪ.—ಪ್ರಿನ್ಸಿಪಾಲರನ್ನು ಹೊಡೆದರು ಎಂದು ಯಾರು ಹೇಳಿದ್ದಾರೆ?

ಶ್ರೀ ಎಂ.ಎಸ್. ಕೃಷ್ಣನ್.—ಶ್ರೀಮಾನ್ ಗೋಕಾಕ್ ಅವರೇ ಹೇಳಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ.—ಏನು ನಡೆದಿದೆ ಎಂದು ಹೇಳಿದ್ದಾರೆ?

ಶ್ರೀ ಎಂ. ಎಸ್. ಕೃಷ್ಣನ್.—ಅವರು ಏನು ಹೇಳಿದ್ದಾರೆಂಬುದನ್ನು ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ. ಅದನ್ನು ಓದುವುದಕ್ಕೆ ನಾನು ತಯಾರಾಗಿದ್ದೇನೆ. 24ನೇ ತಾರೀಖಿನ ಪ್ರಜಾವಾಣಿ ಪತ್ರಿಕೆಯಲ್ಲಿ ಈ ರೀತಿ ಹೇಳಿದ್ದಾರೆ. ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರನ್ನು ಅವರ ಕೊಣೆಯೊಳಗೆ ನುಗಿ ಥಳಿಸಿದರು ಎಂದೂ ಉಪಕುಲಪತಿಗಳು ನನ್ನ ಅನುಮತಿಯಿಲ್ಲದೆ ಪೋಲೀಸಿನವರು ವಿಶ್ವವಿದ್ಯಾನಿಲಯದ ಆವರಣವನ್ನು ಪ್ರವೇಶಿಸಬಾರದಾಗಿತ್ತು, ಇದನ್ನು ನಾನು ಒಳಾಡಳಿತ ಸಚಿವರ ಗಮನಕ್ಕೆ ಸೆಳೆಯುತ್ತಿದ್ದೇನೆಎಂದು ತಿಳಿಸಿದರು. ಈ ಸಮಾಚಾರವನ್ನು ಶ್ರೀಮಾನ್ ಗೋಕಾಕ್ ಅವರೇ ಕೊಡುತ್ತಿದ್ದಾರೆ. ಪ್ರಿನ್ಸಿಪಾಲರನ್ನು ಥಳಿಸಿದರು ಎಂದರೆ ಹೊಡೆದರು ಎಂದು ಅರ್ಥವಾಗುತ್ತದೆ. ಈ ರೀತಿ ಇರಬೇಕಾದರೆ ನನಗೆ ಅನ್ನಿಸುತ್ತದೆ ಶಂಕರೇ ಗೌಡರೇ ಮೊದಲು ರಾಜೀನಾಮೆ ಕೊಡಬೇಕು. ಈ ಸಭೆಯ ಸದಸ್ಯರ ಮಾತಿಗೆ ಬೆಲೆ ಕೊಡದೇ ಹೋದರೂ ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಮಾತಿಗೆ ಬೆಲೆ ಕೊಡಲೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಬಹಳ ಮುಖ್ಯವಾದ ವಿಷಯ. ಪೋಲೀಸಿನವರ ದಬ್ಬಾಳಿಕೆ ವಿದ್ಯಾರ್ಥಿಗಳ ಮೇಲೆ ಮಾತ್ರ ನಡೆಯುತ್ತಿಲ್ಲ. ಎಲ್ಲ ವರ್ಗದ ಜನಗಳ ಮೇಲೂ ನಡೆಯುತ್ತಿದೆ. ಮೈಸೂರು ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಕಾರ್ಮಿಕರ ಮೇಲೆ ನಡೆಯುತ್ತಿದೆ. ಮಧುಗಿರಿ ಪ್ರಕರಣ ಎಲ್ಲರಿಗೂ ಗೊತ್ತಿರುವ ವಿಷಯ. ಎಲ್ಲಾ ಕಡೆಗಳಲ್ಲಿಯೂ ಪೋಲೀಸಿನವರ ದಬ್ಬಾಳಿಕೆ ನಡೆದು ಒಂದು ಸಂದಿಗ್ಧ ಪರಿಸ್ಥಿತಿ ಬಂದಿದೆ. ಇನ್ನೂ ನಮ್ಮ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಇದೆಯೆ, ಎನ್ನುವ ಪ್ರಶ್ನೆ ಬಂದಿದೆ. ಶ್ರೀಮಾನ್ ನಿಜಲಿಂಗಪ್ಪನವರು ಬೇರೆ ಕಡೆಗಳಿಗೆ ಹೋಗಿ ಉದ್ವೇಗವಾದ ಭಾಷಣಗಳನ್ನು ಮಾಡಿದ್ದಾರೆ. ಮೊನ್ನೆ ಕೇರಳಕ್ಕೆ ಹೋಗಿ ಬಂದರು. ಅಲ್ಲಿ ಅವರು ಕಾನೂನು ಪರಿಪಾಲನೆ ಇಲ್ಲದೇ ಇರುವುದರಿಂದ ಆ ಸರ್ಕಾರವನ್ನು ಉರುಳಿಸಬೇಕು ಎಂದು ಹೇಳಿದ್ದಾರೆ. ಇದು ಪತ್ರಿಕೆಯಲ್ಲಿ ವರದಿಯಾಗಿದೆ. ಇದು ನಿಜವಾದ ಪಕ್ಷದಲ್ಲಿ, ಈ ವರ್ತನೆ ಘಟನಾವಳಿಗೇ ವಿರೋಧವಾಗಿದೆ. ರಾಜ್ಯರಾಜ್ಯಗಳೊಡನೆ ತಿಕ್ಕಾಟ ತರುವಂತಹ ವೈಮನಸ್ಯ ಉಂಟುಮಾಡುವಂತಹ ವರ್ತನೆಯಾಗಿದೆ. ಈ ಒಂದು ಕಾರಣಕ್ಕಾಗಿಯೇ ಮಾನ್ಯ ನಿಜಲಿಂಗಪ್ಪನವರು ರಾಜಿನಾಮೆ ಕೊಡಬೇಕು.

6-00 P.M.

ಬೇರೆ ದಾರಿಯಿಲ್ಲ. ದಯವಿಟ್ಟು ತಾವು ರಾಜಿನಾಮೆ ಕೊಡಬೇಕು. ಇವತ್ತಿನ ದಿವಸ ಜನಗಳನು ಸಿಕ್ಕಾಪಟ್ಟೆ ಹೊಡೆದು ಹಿಂಸೆ ಕೊಡುತ್ತಿದ್ದಾರೆ ಈ ಪೋಲೀಸಿನವರು. ಮೊನ್ನೆ ವೈಯಾಲಿಕಾವಲಿನ ಪೋಲೀಸ್ ಸ್ಟೇಷನ್ನಿನಲ್ಲಿ ಒಬ್ಬರನ್ನು ಹೊಡೆದು ಕೊಂದರು ಎಂದು ದೂರು ಬಂದಿದೆ. ನಂತರ ಮೂರು ಜನ ಸತ್ತರು ಎಂದು ಪತ್ರಿಕೆಯಲ್ಲಿ ಬಂತು. ನಿಮ್ಮ ರಾಜ್ಯದಲ್ಲಿ ಇವತ್ತು ಏನಾಗುತ್ತಿದೆ ಎಂದು ನೋಡಿ. ನೀವು ರಾಜಿನಾಮೆ ಕೊಡುವುದಿಲ್ಲವೆಂದು ನನಗೆ ಗೊತ್ತು. ಈ ದಿನ ನೀವು ಕಾಂಗ್ರೆಸ್ ಅಧ್ಯಕ್ಷರಾದರೂ ಮಂತ್ರಿಪದವಿಗೆ ರಾಜಿನಾಮೆ ಕೊಡುವುದಿಲ್ಲವೆಂದು ಜನತೆಗೂ ಗೊತ್ತುಂಟು. ಈ ವರ್ತನೆಗೆ ರಾಜ್ಯಪಾಲರು ಈ ಮಂತ್ರಿಮಂಡಲವನ್ನು ವಜಾ ಮಾಡಬಹುದು. ಆದರೆ ರಾಜ್ಯಪಾಲರು ನಿಮ್ಮನ್ನು ವಜಾಮಾಡುವುದಿಲ್ಲವೆಂದು ಎಲ್ಲರಿಗೂ ತಿಳಿದಿದೆ. ಇವತ್ತು ರಾಜ್ಯಪಾಲರು ನಿಮ್ಮ ಕೈಗೊಂಬೆಯಾಗಿ ವರ್ತಿಸುತ್ತಿದ್ದಾರೆ. ಬಂಗಾಳದಲ್ಲಿ ಧರ್ಮವೀರರು ಅದೇ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ನಿಮ್ಮನ್ನು ವಜಾ ಮಾಡುವುದು ಈಗ ಮೂಲಭೂತವಾದ ಪ್ರಶ್ನೆ. ಲಾ ಅಂಡ್ ಆರ್ಡರ್ ಪ್ರಶ್ನೆ ದೇಶದಲ್ಲಿ ಏಕೆ ಉಂಟಾಯಿತು? ವಿದ್ಯಾರ್ಥಿಗಳು ಆಂದೋಳನ ಏಕೆ ಮಾಡಿದರು? ಇದಕ್ಕೆ ನಿಜಲಿಂಗಪ್ಪನವರು ಪತ್ರಿಕೆಯಲ್ಲಿ ಹೇಳಿದರು, ಇದೆಲ್ಲಾ ಹೊರಗಿನವರ ಪ್ರಚೋದನೆಯಿಂದ ಆಗಿದೆ ಎಂದು. ಆವಾಗ ಪತ್ರಿಕಾ ಕರ್ತರರುಗಳಿದ್ದಾರೆ—ಹೊರಗಿನವರು ಯಾರು? ಡಿ. ಎಂ. ಕೆ. ಯವರೇ? ಅದಕ್ಕೆ "ನನಗೆ ಗೊತ್ತಿಲ್ಲ" ಎಂದು ಇವರು ಹೇಳಿದ್ದಾರೆ. ನಮ್ಮ ರಾಜ್ಯದ ಮುಖ್ಯ ಮಂತ್ರಿಯಾಗಿರುವವರು ಈ ತರಹ ಮಾತನಾಡುವುದು ಬಹಳ ಶೋಚನೀಯ ಮತ್ತು ಅಪಾಯಕರವಾದುದು. ಇದು ಪರಸ್ಪರ ಕಲಹಗಳನ್ನು ಮಾಡಲು ದಾರಿ ಮಾಡಿಕೊಡುತ್ತದೆ. ಈ ವಿಚಾರದಲ್ಲಿ ಶ್ರೀ ವಾಟಾಳ್ ನಾಗರಾಜರವರು ಹೇಳುವುದನ್ನು ನಾನು ಒಪ್ಪುವುದಿಲ್ಲ. ನಮಗೂ ಡಿ. ಎಂ. ಕೆ. ಪಕ್ಷಕ್ಕೂ ಭಿನ್ನಾಭಿಪ್ರಾಯಗಳಿವೆ. ಆದರೆ ಅವರೇ ಗಲಾಟೆ ಮಾಡಿಸಿದವರು ಎಂದು ಹೇಳುವುದು ಸರಿಯಲ್ಲ, ಪತ್ರಿಕೆಯಲ್ಲಿ 16 ಜನ ತೆಲುಗು ಹುಡಗರು ಬಂದರು, ಅವರನ್ನು ರೈಲ್ವೆ

ನಿಲ್ದಾಣದಲ್ಲಿ ಕೈದು ಮಾಡಿದರು ಎಂದು ಎಲ್ಲಾ ಬಂತು. ಇದು ನಿಜಾಂಶವನ್ನು ಬದಿಗಿಡಲು ಹೇಳಿರುವುದು. ಈ ಒಂದು ಭಾಷೆಯ ವಿಚಾರದಲ್ಲಿ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಬಹಳ ನೋವು ಉಂಟಾಗಿದೆ. ಏತಕ್ಕೋಸ್ಕರ ಹಿಂದಿಯನ್ನು ನಮ್ಮ ಜನರ ಮೇಲೆ ಹೊರಿಸುತ್ತಿದ್ದಾರೆ ಎಂಬುದು ನನ್ನ ಮೊದಲನೆಯ ಪ್ರಶ್ನೆ. ಎರಡನೆಯದು, ಅದರ ಜೊತೆಯಲ್ಲಿ ಉದ್ಯೋಗದ ಪ್ರಶ್ನೆ. ಇದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಭಾಷಾನೀತಿ, ಅವರು ಪಾರ್ಲಿಮೆಂಟಿನಲ್ಲಿ ಪಾಸ್ ಮಾಡಿರತಕ್ಕ ನಿರ್ಣಯದಿಂದ ಈ ಎಲ್ಲಾ ಗೊಂದಲಗಳು, ಗಲಭೆಗಳು ಉಂಟಾದುವು. ಅದರಲ್ಲಿ ಸ್ಪಷ್ಟವಾದ, ಸರಿಯಾದ ನಿಲುವನ್ನು ತಾಳದೆ ಹಿಂದಿಯನ್ನು ಒತ್ತಾಯ ಮಾಡಬೇಕೆಂದು ಹೇಳುತ್ತಿದ್ದಾರೆ. ಉದ್ಯೋಗ ಹಿಂದಿ ಕಲಿತರೆ ಮಾತ್ರ, ಇಲ್ಲದಿದ್ದರೆ ಇಲ್ಲ. ಅದರಲ್ಲಿ ಕೆಲವರು ಹಿಂದಿ ಕಲಿಯಬೇಕು, ಕೆಲವರು ಇಂಗ್ಲಿಷ್ ಕಲಿಯಬೇಕು ಎಂದು ಇದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಮುಂದಿನ ಉದ್ಯೋಗಕ್ಕೆ ಚ್ಯುತಿ ಬರುತ್ತದೆ ಎಂಬ ಹೆದರಿಕೆ ಉಂಟಾಗಿ ಈ ಗೊಂದಲ ಉಂಟಾಗಿದೆ.

ಇನ್ನೊಂದು ವಿಚಾರ ಶ್ರೀ ವಾಟಾಳ್ ನಾಗರಾಜರು ಹೇಳಿರುವುದು ಸರಿ. ಮುಖ್ಯವಾಗಿ ನಮ್ಮ ದೇಶದಲ್ಲಿ ಎಲ್ಲಾ ಭಾಷೆಗಳಿಗೆ ಸಮಾನ ಸ್ಥಾನ ಇರಬೇಕಾದುದು ಬಹಳ ಮುಖ್ಯವಾದುದು. ನಾನು ಹೇಳುವುದು ಇಷ್ಟೆ—ಕನ್ನಡ ರಾಜ್ಯದಲ್ಲಿ ಕನ್ನಡ ಭಾಷೆಗೆ ಮೊದಲನೆಯ ಸ್ಥಾನ ಕೊಡಬೇಕು. ಅದೇ ರೀತಿಯಲ್ಲಿ ತಮಿಳು ನಾಡಿನಲ್ಲಿ ತಮಿಳಿಗೆ, ಕೇರಳದಲ್ಲಿ ಮಳಯಾಳಿಗೆ, ಆಂಧ್ರದಲ್ಲಿ ತೆಲುಗಿಗೆ ಪ್ರಥಮ ಸ್ಥಾನ ದೊರಕಬೇಕು. ಇವತ್ತು ಹಿಂದಿಯೇತರ ಜನ ಹಿಂದಿ ಬೇಡ ಎಂದು ಹೇಳುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಹಿಂದಿ ಬೇಡವೇ ಬೇಡ ಎಂದು ನಾನು ಹೇಳದಿದ್ದರೂ ಸಹ ಇಂಗ್ಲಿಷ್‌ಗೆ ಬದಲು ಸಂಪರ್ಕ ಭಾಷೆಯಾಗಿ ಹಿಂದಿ ಬರಬೇಕಾಗಿದ್ದರೂ ಸಹ, ಹಿಂದಿಯನ್ನು ಹಿಂದಿಯೇತರರ ಮೇಲೆ ಕೂಡಲೇ ಹೊರಿಸುವುದು ಸರಿಯಲ್ಲ. ಈಗ ತ್ರಿಭಾಷಾ ಸೂತ್ರದ ಬಗ್ಗೆ ಹೇಳುತ್ತಿದ್ದಾರೆ. ಅದು ಕಾರ್ಯರೂಪಕ್ಕೆ ತರುವುದು ಬಹಳ ಕಷ್ಟ. ಈಗ ಉತ್ತರದವರು ಮೂರು ಭಾಷೆಗಳನ್ನು ಕಲಿಯಬೇಕು ಎಂದು ಹೇಳುತ್ತಿದ್ದಾರೆ. ಇದು ಮೂರ್ಖತನದ ಪರಮಾವಧಿ ಎಂದು ತಿಳಿದುಕೊಂಡಿದ್ದೇನೆ. ಇದು ಕಣ್ಣೊರೆಸುವುದಕ್ಕೆ ಹೇಳಿರುವ ಅಭಿಪ್ರಾಯ. ಅದಕ್ಕೆ ಬದಲು ಸುಮ್ಮನೆ ಇದ್ದು ಬಿಡಬಹುದಿತ್ತು. ಉದ್ಯೋಗಾವಕಾಶದಲ್ಲಿ ಯಾವ ರೀತಿಯ ಅಡಚಣೆಯೂ ಬರಕೂಡದು ಇಲ್ಲಿ. ಆ ನಿರ್ಣಯವೇ ಸರಿಯಾದುದಲ್ಲ. ನಮ್ಮ ಜನರಿಗೂ ಬೇರೆ ರಾಜ್ಯದ ಜನರಿಗೂ ಸಾಮಾನ್ಯವಾಗಿ ಉದ್ಯೋಗಗಳು ದೊರಕಬೇಕು. ಈ ದೆಸೆಯಲ್ಲಿ ನಮ್ಮ ಸರ್ಕಾರ ಮುಂದೆ ಬರುತ್ತದೆಂದು ನಾನು ಧೈರ್ಯ ಇಟ್ಟುಕೊಂಡಿಲ್ಲ. ಕಾಂಗ್ರೆಸ್ ಸರ್ಕಾರ ಇದಕ್ಕೆ ವಿರೋಧವಾಗಿದೆಯೇ ವಿನಾ ಬೇರೇನೂ ಅಲ್ಲ. ಮಾನ್ಯ ಶ್ರೀ ನಿಜಲಿಂಗಪ್ಪನವರು ದೆಹಲಿಯಲ್ಲಿ ಒಂದು ಮಾತನಾಡುತ್ತಾರೆ, ಇಲ್ಲಿಗೆ ಬಂದು ಒಂದು ಹೇಳುತ್ತಾರೆ. ಇದಕ್ಕಾಗಿ ನಿಜಲಿಂಗಪ್ಪನವರಿಗೆ ಏನು ಪ್ರೈಸ್ ಕೊಡಬೇಕೆಂದು ಗೊತ್ತಾಗುವುದಿಲ್ಲ. ಈ ವಿಚಾರಧಲ್ಲೂ ಅದೇ ರೀತಿ ಮಾತಾಡುತ್ತಿದ್ದಾರೆ. ಅದು ಸರಿಯಾದುದಲ್ಲವೆಂಧು ನಾನಾದರೂ ತಿಳಿದುಕೊಂಡಿದ್ದೇನೆ. ಇದನ್ನೆಲ್ಲಾ ಮಾನ್ಯ ಆರ್. ಎಂ. ಪಾಟೀಲರು ಗಮನಿಸಬೇಕು. ಹಿಂದೆ ರಾಮರಾಯರ ಕಾಲದಲ್ಲಿ ಏನೇನೋ ಗೋಳಿಬಾರು, ಗದ್ದಲ, ಗೊಂದಲವೆಲ್ಲಾ ಆಯ್ತು. ಎಷ್ಟೋ ಜನರನ್ನು ಕೊಂದುಹಾಕಿದರು. ಪೋಲಿಸ್ ಆಡಳಿತ ಆ ಹಿಂದಿನ ಮನೋಭಾವವನ್ನು ಬಿಟ್ಟು ಬಿಡಬೇಕು. ಇನ್ನು ನೀವು ಬಂದ ಮೇಲಾದರೂ ಸರಿಯಾಗಿ ನೋಡಿಕೊಂಡು, ಜನಗಳ ಸಂಪರ್ಕ ಬೆಳೆಸಿ ಸರಿಯಾದ, ನೀತಿಯುತವಾದ ಆಡಳಿತವನ್ನು ಜಾರಿಮಾಡುವಂತೆ ಮಾಡಿ, ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವಂತೆ ಮಾಡುವಿರಿ ಎಂದು ತಿಳಿಯುತ್ತೇನೆ. ಇಷ್ಟು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ನಾಗಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಇಲ್ಲಿ ಮಂಡಿಸಿರುವ ಶ್ರೀ ಎಸ್.ಎಸ್. ಶೆಟ್ಟರವರ ನಿಲುವಳಿ ಸೂಚನೆಯನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಮುಖ್ಯ ಮಂತ್ರಿಗಳು ಹೇಳಿಕೆಯಲ್ಲಿ ಹೇಳಿದ್ದಾರೆ, ಇಂಥ ಒಂದು ಪರಿಸ್ಥಿತಿ ಉದ್ಭವವಾಗಬೇಕಾದರೆ, ಅದಕ್ಕೆ ಕಾರಣ ಹೊರಗಿನವರು ಯಾರಾದರೂ ಬಂದು ಮಾಡಿದ್ದರಿಂದಾಗಿ ನಡೆದಿದೆ ಎಂದು. ಆದರೆ ನಾನಾದರೂ ಹೇಳುತ್ತೇನೆ, ಇವತ್ತು ನಿಮ್ಮ ನೀತಿ ಏನು ? ನೀವು ಭಾಷೆಯ ಮೇಲೆ ಯಾವ ನೀತಿ ಇಟ್ಟುಕೊಂಡಿದ್ದೀರಿ ? ನೀವು ಗಡಿ ವಿಚಾರದಲ್ಲಿ ಯಾವ ನೀತಿಯನ್ನು ಇಟ್ಟುಕೊಂಡಿದ್ದೀರಿ ? ಇಂಥ ಯಾವುದೇ ಅಸ್ಪಷ್ಟವಾದ ನೀತಿಗಳನ್ನು ಇಟ್ಟುಕೊಂಡು, ಅದರಲ್ಲಿ ಯಾವ ತರದ ನಿರ್ಣಯವನ್ನು ಮಾಡಲಾರದೆ. ಈ ಚಳವಳಿ ಗದ್ದಲ, ಗಲಭೆಗಳಿಗೆ ಕಾರಣವಾಯ್ತು. ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ನಡೆದಿರತಕ್ಕಂತಹ ಚಳುವಳಿಯ ವಿಚಾರ ಹೇಳುವುದಾದರೆ, ಅದಕ್ಕೆ ಕಾರಣರು ನೀವೇ, ನಿಮ್ಮ ಸ್ಪಷ್ಟವಾದ ನೀತಿ, ನಿಮ್ಮ ಸರ್ಕಾರದ ಎದುರಿಗೆ, ರಾಜ್ಯದ ಜನತೆ ಎದುರಿಗೆ, ಮತ್ತು ರಾಜ್ಯದ ವಿದ್ಯಾರ್ಥಿಗಳ ಎದುರಿಗೆ ಇಟ್ಟರೆ, ಸುಲಲಿತವಾಗಿ ಪರಿಸ್ಥಿತಿ ತನ್ನಷ್ಟಕ್ಕೆ ತಾನೆ ಹತೋಟಿಗೆ

(ಶ್ರೀ ಎಂ. ನಾಗಪ್ಪ)

ಬರುತ್ತದೆ. ನಿಮ್ಮ ಪೋಲೀಸ್ ಬೇಕಾಗಿಲ್ಲ, ಬಂದೂಕಗಳು ಬೇಕಾಗಿಲ್ಲ, ಯಾವುದೂ ಬೇಕಾಗಿಲ್ಲ. ಇದಕ್ಕೆ ನಾನು ಇಲ್ಲಿ ಒಂದು ಉದಾಹರಣೆ ಕೊಡುತ್ತೇನೆ. ಈಗ ತಮಗೆಲ್ಲಾ ತಿಳಿದಿರುವಂತೆ ಆಯುರ್ವೇದದ ಕಾಲೇಜಿನ ವಿದ್ಯಾರ್ಥಿಗಳು ಇಡೀ ದೇಶದಲ್ಲೆಲ್ಲಾ ಕಾಲೇಜುಗಳನ್ನು ಬಂದು ಮಾಡಿ ಚಳುವಳಿ ಮಾಡುತ್ತಿದ್ದಾರೆ. ಮೈಸೂರು ರಾಜ್ಯದ ಎಲ್ಲ ಕೇಂದ್ರಗಳಲ್ಲೂ ಚಳುವಳಿ ನಡೆಸುತ್ತಿದ್ದಾರೆ. ಇದರ ಮೇಲೆ ಕೆಲವರು ಆಮರಣಾಂತ ಉಪವಾಸವನ್ನೂ ಮಾಡುತ್ತಿದ್ದಾರೆ. ಈ ರೀತಿ ಉಪವಾಸ ಮಾಡುತ್ತಿರುವುದರಿಂದ ಕೆಲವು ಜಿಲ್ಲೆಗಳಲ್ಲಿ ತೊಂದರೆಗಳಾಗಬಹುದು. ಇಂತಹ ಮಹತ್ವದ ವಿಚಾರಗಳ ಬಗ್ಗೆ ಸರಕಾರ ವಿಚಾರ ಮಾಡದೇ ಇರುವುದು ಪ್ರಜಾಪ್ರಭುತ್ವದ ನಿಮ್ಮ ನೀತಿಯೆ ? ಇದನ್ನು ವಿರೋಧಿಸುತ್ತಾ ಬರುವುದರಿಂದ ನಿಮಗೆ ಬೆಲೆ ಇಲ್ಲದಂತಾಗಿದೆ. ಇದಕ್ಕೆ ತಾವೇ ಉತ್ತೇಜನ ಕೊಡುತ್ತಿದ್ದೀರಿ. ಇದು ಹೇಗಾಗಿದೆ ಎಂದರೆ ಮೂಗು ಮುಚ್ಚಿದರೆ ಬಾಯಿ ತಾನಾಗಿ ತೆರೆಯುತ್ತದೆ ಅನ್ನುವಂತಾಗಿದೆ. ಇಂತಹ ಒಂದು ವಾತಾವರಣವನ್ನು ದೇಶದಲ್ಲೆಲ್ಲಾ ಉಂಟುಮಾಡುತ್ತಿದ್ದೀರಿ. ಇದರ ಬಗ್ಗೆ ಯಾವ ರೀತಿಯಾಗಿ ವಿಚಾರ ಮಾಡಲು ಹೊರಟಿದ್ದೀರಿ ? ಇದಕ್ಕೆಲ್ಲಾ ಕಾರಣರು ಯಾರು ? ಇಂತಹ ಪರಿಸ್ಥಿತಿ ಉದ್ಭವಿಸಿದ ಮೇಲೆ ಅಲ್ಲೇನಾದರೂ ಗೊಂದಲಗಳಾದರೆ ಅಲ್ಲಿಗೆ ಪೋಲೀಸರು ಬಂದು ಗುಂಡಿಕ್ಕಿ ಜನರನ್ನು ಕೊಲ್ಲುವುದು. ಹೀಗೆ ಮಾಡಿದರೆ ಜನತೆಯ ಜೀವನವನ್ನು ರಕ್ಷಣೆ ಮಾಡಿದಂತಾಗುತ್ತದೆಯೇ ? ಯಾವ ರೀತಿ ಬಡಜನರಿಗೆ ರಕ್ಷಣೆ ಕೊಡುತ್ತೀರಿ ? ಸರಕಾರದವರು ಜನರ ಆಸ್ತಿ ರಕ್ಷಣೆ ಮಾಡಿದಂತಾಗುತ್ತದೆಯೆ ? ಸರಕಾರ ಜನರ ರಕ್ಷಣೆ ಮಾಡುವುದನ್ನು ಬಿಟ್ಟು ಈ ರೀತಿ ಗುಂಡು ಹಾಕಿ ಕೊಲ್ಲುವುದಕ್ಕೆ ಯಾರು ಕಾರಣರು ನೀವೆ ಅಲ್ಲವೇ ಎಂದು ನಾನು ಇಲ್ಲಿ ತಮ್ಮನ್ನು ಕೇಳುತ್ತೇನೆ. ಗುಂಡಿಕ್ಕಿ ಕೊಲ್ಲುವುದರಿಂದ ದೇಶದ ಜನರ ಹಾಗೂ ಆಸ್ತಿಯ ರಕ್ಷಣೆ ಮಾಡಿದಂದಾಗುತ್ತದೆಯೆ ? ದೇಶದಲ್ಲಿ ಗುಂಡಿಕ್ಕಿ ಕೊಲೆ ಮಾಡುವುದು ಬರಬರುತ್ತಾ ಜಾಸ್ತಿಯಾಗುತ್ತಿದೆಯೇ ಹೊರತು ಇನ್ನು ಮುಂದೆ ಜನರು ಅವರ ದೇಹವನ್ನು ಎತ್ತಿಕೊಂಡು ಬಜಾರಿಗೆ ಹೋಗಿ ಬರುವುದೇ ಕಷ್ಟವಾಗುವಂತಹ ಪರಿಸ್ಥಿತಿ ಬಂದು ಒದಗಿದೆ. ಪೋಲೀಸರು ಜನರ ರಕ್ಷಣೆ ಮಾಡುವುದಕ್ಕೆ ಬದಲಾಗಿ ರಾಜಕೀಯ ಮಾಡುತ್ತಿದ್ದಾರೆ. ಈಚೆಗೆ ದೀನದಯಾಳು ಉಪಾಧ್ಯಾಯರ ಕೊಲೆಯಾಗಿದೆ ಎಂದು ತಿಳಿದರೂ ಇನ್ನೂ ಅವರನ್ನು ಕೊಲೆ ಮಾಡಿದವರು ಯಾರು ಎನ್ನುವುದನ್ನು ಪತ್ತೆ ಹಚ್ಚಲು ಕೇಂದ್ರ ಸರಕಾರಕ್ಕೆ ಆಗಲಿಲ್ಲ. ಇದರಿಂದ ನಿಮ್ಮ ಪೋಲೀಸರಲ್ಲಿ ಶಕ್ತಿ ಇಲ್ಲ ಎಂದು ನಾವು ಭಾವಿಸಬೇಕಾಗಿದೆ. ಈಗ ನಾವು ಕೇಳುವುದು ಯಾವುದಾದರೂ ಕಾರಣಕ್ಕಾಗಿ ಎಲ್ಲಿಯಾದರೂ ಗೊಂದಲವಾದರೆ ಅಲ್ಲಿಗೆ ಹೋಗಿ ಜನರ ಮೇಲೆ ಗುಂಡು ಹಾರಿಸುವವರು ಯಾರು ? 1966ನೇ ಇಸವಿಯಿಂದ ಆಯುರ್ವೇದ ವಿದ್ಯಾರ್ಥಿಗಳ ಬೇಡಿಕೆಯಂತೆ ಡಿಪ್ಲೊಮಾ ಕೋರ್ಸನ್ನು ಡಿಗ್ರಿ ಕೋರ್ಸಾಗಿ ಮಾಡುತ್ತೇವೆ ಎಂದು ಸರಕಾರದವರೇ ಒಂದು ನೋಟಿಫಿಕೇಷನನ್ನು ಹೊರಡಿಸಿದ್ದರು. ಇದನ್ನು ಹಿಂದೆ ಇದ್ದ ಮಂತ್ರಿಗಳು ಮಾಡಿದ್ದರು ಎಂದು ಈಚೆಗೆ ಬಂದ ಆರೋಗ್ಯ ಮಂತ್ರಿಗಳು ಒಬ್ಬರಿಗೊಬ್ಬರಿಗೆ ಹೊಂದಾಣಿಕೆ ಇಲ್ಲದಂತೆ ಈಗ ಬದಲಾವಣೆ ಮಾಡುತ್ತಿರುವುರಿಂದ ಇಂತಹ ಗೊಂದಲಗಳನ್ನು ಎಲ್ಲ ಕಡೆಯಲ್ಲಿರುವ ಆಯುರ್ವೇದದ ಕಾಲೇಜಿನ ವಿದ್ಯಾರ್ಥಿಗಳು ಮಾಡುತ್ತಿದ್ದಾರೆ. ಇದರಿಂದಾಗಿ ರಾಜ್ಯದಾದ್ಯಂತ ಹುಡುಗರು ಅವರ ಕಾಲೇಜುಗಳನ್ನು ಬಂದು ಮಾಡಿಕೊಂಡು ಇಲ್ಲಿ ಚಳುವಳಿ ಮಾಡುತ್ತಿದ್ದಾರೆ. ಇದರ ಬಗ್ಗೆ ಸರಕಾರ ಏನೂ ಮಾಡುತ್ತಿಲ್ಲ. ಮತ್ತು ಸರಕಾರದ ಮಂತ್ರಿಗಳು ಅಧಿಕಾರಿಗಳ ಕೈ ಗೊಂಬೆಗಳಾಗಿದ್ದಾರೆ ಮತ್ತು ಇಲ್ಲದ ಗೊಂದಲಗಳನ್ನು ಎಬ್ಬಿಸಲು ಅವರೇ ಕಾರಣರಾಗಿರುತ್ತಾರೆ. ಇಂತಹ ಸಂದರ್ಭದಲ್ಲಿ ಕಾಯಿದೆಗೆ ವಿರೋಧವಾಗಿ ಗೊಂದಲಗಳಾದರೆ ಆ ಕೂಡಲೇ ಪೋಲೀಸಿನವರು ನುಗ್ಗಿ ಗುಂಡಿಕ್ಕಿ ಕೊಲ್ಲುತಾರೆ. ಇದನ್ನು ಯಾವ ರೀತಿ ಬಗೆಹರಿಸಬೇಕು ಎನ್ನುವುದನ್ನೂ ಇದುವರೆಗೂ ಯಾರೂ ಯೋಚನೆ ಮಾಡಲಿಲ್ಲ. ಇದಕೆಲ್ಲಾ ಯಾರು ಕಾರಣರು ಎನ್ನುವುದನ್ನು ಯಾರಾದರೂ ನಿಮ್ಮಲ್ಲಿ ಯೋಚನೆ ಮಾಡಿದ್ದೀರಾ ? ಇದಕ್ಕಾಗಿ ನಾನು ಹೇಳುವುದು ಸರಕಾರದ ಈಗಿನ ನೀತಿಯಿಂದಾಗಿ ಇಲ್ಲಿದ ಗೊಂದಲಗಳಿಗೆ ಕಾರಣವಾಗಿದೆ. ಇದನ್ನು ತೀವ್ರವಾಗಿ ಗಮನಕ್ಕೆ ತೆಗೆದುಕೊಂಡು ಇದನ್ನು ನಿವಾರಿಸಬೇಕು. ಇಲ್ಲದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ನಿಮ್ಮ ಸರಕಾರದಲ್ಲಿ ಒಬ್ಬರಿಗೊಬ್ಬರಿಗೆ ಯಾವ ಹೊಂದಾಣಿಕೆಯೂ ಇಲ್ಲ. ಸಹಕಾರವೂ ಇಲ್ಲ. ಮಂತ್ರಿ ಮಂಡಲದವರು ಅಧಿಕಾರಿಗಳ ಕೈಗೊಂಬೆಗಳಾಗಿದ್ದಾರೆ ಎನ್ನುವುದಕ್ಕೆ ಒಂದೇ ಒಂದು ಉದಾಹರಣೆ ಕೊಡುತ್ತೇನೆ. ಹಿಂದೆ ಇಲ್ಲಿ ಗೃಹ ಮಂತ್ರಿಗಳಾಗಿದ್ದ ಮಾನ್ಯ ರಾಮರಾಯರು ಮಧುಗಿರಿ ಪ್ರಕರಣ ನಡೆದಾಗ ಇಲ್ಲಿ ಪ್ರಸ್ತಾಪ ಬಂತು. ಇದರ ಬಗ್ಗೆ ಅವರು ಇಲ್ಲಿ ಹೇಳುವಾಗ ನಮ್ಮ ಸೆಕ್ರಟರಿಯವರ ಕಡೆಯಿಂದ ಬಂದಿರುವ ರಿಪೋರ್ಟಿನಂತೆ ಇಲ್ಲಿ ಓದಿದೆ ಎಂದು ಹೇಳಿದರು. ಆದರೆ ವಾಸ್ತವಾದ ವಿಚಾರಗಳನ್ನು ಇಲ್ಲಿ ತಿಳಿಸಿದಾಗ ಇವು ಒಂದೂ ನನಗೆ ಗೊತ್ತಿಲ್ಲ ಎಂದು ಹೇಳಿದರೆ ಇವರು ಅಧಿಕಾರಿಗಳ ಕೈಗೊಂಬೆಗಳಾಗಿ ವರ್ತಿಸಿ

ದ್ದಾರೆ ಎನ್ನುವುದು ನಮಗೆ ಚೆನ್ನಾಗಿ ಗೊತ್ತಾಗುತ್ತದೆ. ಹೀಗಾದರೆ ಜನತೆಯ ಜೀವನವನ್ನು ರಕ್ಷಣೆ ಮಾಡಿದಂತಾಗುತ್ತದೆಯೆ ? ಜನತೆಯ ಆಸ್ತಿಗಳನ್ನು ರಕ್ಷಣೆ ಮಾಡಿದಂತಾಗುತ್ತದೆಯೇ ? ನಾನು ಹೇಳುವುದು ನಿಮ್ಮಲ್ಲಿರತಕ್ಕದ್ದು ಪೋಲೀಸು ರಾಜ್ಯವೇ ಹೊರತು ಕಾಂಗ್ರೆಸ್ಸು ರಾಜ್ಯವಲ್ಲ ಎಂದು ಹೇಳಬೇಕಾಗಿದೆ. ದೇಶದಲ್ಲಿರುವ ಪೋಲೀಸರು ಜನರ ಜೀವವನ್ನು ಹಾಗೂ ಆಸ್ತಿಯನ್ನು ರಕ್ಷಣೆ ಮಾಡಬೇಕೆಂದಿರುವಾಗ ಇಲ್ಲಿ ಪೋಲೀಸು ರಾಜ್ಯವಾಗುತ್ತಿದೆ. ಜನರ ಮೇಲೆ ಗುಂಡಿಕ್ಕಿ ಅವರನ್ನು ಕೊಲ್ಲುತ್ತಿದ್ದಾರೆ. ಪೋಲೀಸರಿಂದ ಜನರ ಪ್ರಾಣ ಮಾನ ಹಾನಿಯಾಗುತ್ತಿದೆ. ಎಲ್ಲಿ ನೋಡಿದರೂ ಪೋಲೀಸರ ರಾಜ್ಯವೇ ಕಾಣುತ್ತದೆ. ಈಚೆಗೆ ಪೋಲೀಸು ಠಾಣೆಗೆ ಎಲ್ಲಿಯಾದರೂ ಡಕಾಯಿತಿ ಆಗಿದೆ ಎಂದು ಜನ ವರದಿ ಕೊಡಲು ಬಂದರೆ ಅವರನ್ನೇ ಹೊಡೆದು ಸಾಯಿಸುವ ಪ್ರವೃತ್ತಿ ಕಂಡು ಬರುತ್ತಿದೆ. ಈಚೆಗೆ ರಾಯಚೂರಿನಲ್ಲಿ ಒಂದು ಡಕಾಯಿತಿ ಕೇಸಾಗಿದೆ ಎಂದು ಸೂಚನೆ ಕೊಡಲು ಪೋಲೀಸನವರಿಗೆ ಬಂದು ಹೇಳಿದರೆ ಅವರು ಅದನ್ನು ಕೇಳದೆ ಸುದ್ದಿ ಕೊಡಲು ಬಂದವರನ್ನೇ ಹೊಡೆದು ತೊಂದರೆ ಮಾಡಿದರು. ಅದರಿಂದಾಗಿ ಅರ್ಜಿಕೊಡಲು ಬಂದವನೇ, ಉರುಲು ಹಾಕಿ ಕೊಂಡು ಪ್ರಾಣವನ್ನು ಕೊಟ್ಟನು. ಅದೇ ರೀತಿ ಈಚೆಗೆ ಬೆಂಗಳೂರಿನಲ್ಲಿ ಟಾಕ್ಸಿ ಹಾಗೂ ಆಟೋ ರಿಕ್ಷಾದ ಪ್ರಕರಣದಲ್ಲಿ ಇಲ್ಲದ ಜನರನ್ನು ಗುಂಡಿಟ್ಟು ಕೊಲ್ಲಲಾಯಿತು. ಹೀಗಾದರೆ ದೇಶದಲ್ಲಿ ಪೋಲೀಸಿನವರಿಂದ ಜನರ ರಕ್ಷಣೆ ಮಾಡಿದಂತಾಯಿತೇ ? ಜನರ ಜೀವನ ರಕ್ಷಣೆ ಮಾಡಿದಂತಾಯಿತೇ ? ಇದನ್ನು ಯಾರೂ ಯೋಚನೆ ಮಾಡಿದಂತೆ ಕಾಣುವುದಿಲ್ಲ. ಇಂತಹ ಪರಿಸ್ಥಿತಿಗಳು ಈಗ ಉದ್ಭವಿಸಿವೆ. ಇಲ್ಲಿ ಎಲ್ಲಿ ನೋಡಿದರೂ ಅಲ್ಲಿ ಐ.ಜಿ.ಪಿ. ರಾಜ್ಯವೇ ಆಗಿಹೋಗಿದೆ ಎಂದು ಹೇಳಿದರೆ ಅದು ತಪ್ಪಾಗ ಲಾರದು. ಆದುದರಿಂದ ಇಲ್ಲಿ ತಂದಿರುವ ನಿಲುವಳಿ ಸೂಚನೆಯನ್ನು ಸಮರ್ಥಿಸಿ ನನಗೆ ಇಷ್ಟು ಮಾತಾಡಲು ಅವಕಾಶ ಕೊಟ್ಟು ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ವಿದ್ಯಾರ್ಥಿಗಳ ಆಂದೋಲನದ ಬಗ್ಗೆ ಶ್ರೀಮಾನ್ ಶೆಟ್ಟರವರು ಇಲ್ಲಿ ತಂದರುವ ನಿಲುವಳಿ ಸೂಚನೆಯನ್ನು ಬೆಂಬಲ ಸುತ್ತಾ ಒಂದೆರಡು ಮಾತುಗಳನ್ನು ಇಲ್ಲಿ ಹೇಳುತ್ತೇನೆ.

ನಮ್ಮ ಸುಂದರ ಕನ್ನಡ ನಾಡಿನಲ್ಲಿ ಸುಮಾರು ಒಂದು ಒಂದೂವರೆ ತಿಂಗಳಿಂದಲೂ ನಮ್ಮ ರಾಜ್ಯದ ವಿದ್ಯಾರ್ಥಿಗಳು ಅಹೋರಾತ್ರಿ ಚಳುವಳಿಯನ್ನು ಮಾಡಲು ಹೊರಟಿದ್ದಾರೆ. ಇದರ ಪರಿ ಣಾಮವಾಗಿ ಸುಮಾರು ಹತ್ತಾರು ವಿದ್ಯಾರ್ಥಿಗಳು ತಮ್ಮ ಪ್ರಾಣವನ್ನೂ ಕಳೆದುಕೊಂಡಿದ್ದಾರೆ. ಇದರಿಂದ ಹಿಂದಿಗೆ ವಿರೋಧವಾಗಿ ನಮ್ಮ ಕನ್ನಡ ನಾಡಿನಲ್ಲಿ ಎಷ್ಟು ವಿರೋಧವಿದೆ ಎನ್ನುವುದು ನಮಗೆ ಸೂಕ್ಷ್ಮವಾಗಿ ವ್ಯಕ್ತವಾಗುತ್ತಿದೆ. ಇಷ್ಟೇ ಅಲ್ಲ, ಇದಕ್ಕೆ ವಿರೋಧವಾಗಿ ತಮ್ಮ ಪ್ರಾಣ ವನ್ನೂ ತ್ಯಾಗಮಾಡಿದ್ದಾರೆ. ಆದರೂ ಇದರ ಸಲುವಾಗಿ ಸರಕಾರ ಇನ್ನೂ ಯಾವ ನಿರ್ಧಾರವನ್ನೂ ಕೈಗೊಂಡಿಲ್ಲ. ವಿದ್ಯಾರ್ಥಿಗಳಂತೂ ಬಹಳ ಪ್ರಬಲವಾದ ಸತ್ಯಾಗ್ರವನ್ನು ಬೆಂಗಳೂರು ಪಟ್ಟಣದಲ್ಲೇ ಆಗಲೀ ಮೈಸೂರು ಪಟ್ಟಣದಲ್ಲೇ ಆಗಲೀ ಇತರ ಕಡೆಗಳಲ್ಲೇ ಆಗಲೀ ಚಳುವಳಿಗಳೂ ನಡೆಯುತ್ತಿ ದ್ದರೂ ಇದರ ಬಗ್ಗೆ ಸರಕಾರ ತೀವ್ರ ಗಮನ ತೆಗೆದುಕೊಂಡು ಸೂಕ್ತವಾದ ಯಾವ ಕಾರ್ಯಕ್ರಮ ವನ್ನೂ ಕೈಗೊಳ್ಳಲಿಲ್ಲ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳ ಚಳುವಳಿ ಒಂದು ಉಗ್ರ ಸ್ವರೂಪ ವಾಗಿ ಇಲ್ಲಿಯವರೆಗೆ ಬಂದಿದೆ, ಇದೇ ಕಾಲದಲ್ಲಿ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ನಾನು ಸರಿ ಯಾದ ಮಾರ್ಗವನ್ನು ಮಾಡಿ ಅವರಿಗೆ ಅನುಕೂಲ ಮಾಡಿಕೊಡುತ್ತೇನೆ ಎಂದು ಒಂದು ಸ್ಟೇಟ್ ಮೆಂಟನ್ನೂ ಕೊಟ್ಟಿದ್ದಾರೆ. ಆದರೆ ಅವರು ಕೊಟ್ಟಿರುವ ಸ್ಟೇಟ್‌ಮೆಂಟು ಹೇಗಿದೆ ಎಂದರೆ, ಆಡ್ಡ ಗೋಡೆಮೇಲೆ ದೀಪ ಇಟ್ಟಂತಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಸಮಾಧಾನವಾಗಲಿಲ್ಲ ಮತ್ತು ಸರ್ಕಾರದವರೂ ಕೂಡ ಇದರ ಬಗ್ಗೆ ಒಂದು ಸರಿಯಾದ ಧೋರಣೆಯನ್ನು ತಾಳಲಿಲ್ಲ. ಆದುದರಿಂದ ಇಂತಹ ವಿದ್ಯಾರ್ಥಿಗಳ ಚಳುವಳಿಗೆ ಅವಕಾಶ ಮಾಡಿಕೊಟ್ಟದ್ದು ನಿಜವಾಗಿಯೂ ಬಹು ದುಃಖಕರ ವಾದ ಸಂಗತಿ. ಇಷ್ಟೇ ಅಲ್ಲ. ವಿದ್ಯಾರ್ಥಿಗಳು ನಾಳಿನ ಕನ್ನಡ ರಾಜ್ಯದ ಆಡಳಿತಗಾರರಾಗು ವಂತಹವರು ಮತ್ತು ಮುಂದಿನ ಜನಾಂಗಕ್ಕೆ ಭಾವಿನಾಯಕರುಗಳು ಆಗುವಂತಹವರಿಗೆ ಇಲ್ಲದ ತೊಂದರೆ ಅಡ್ಡಿ ಆತಂಕಗಳನ್ನು ತರುವುದು ಸರಿಯಲ್ಲ. ಇವರು ನಮ್ಮ ರಾಷ್ಟ್ರದಲ್ಲಿ ಗೌರವಯುತವಾಗಿ ಬಾಳಲು ವಿದ್ಯಾಭ್ಯಾಸಮಾಡಿ ನಮ್ಮ ಸುಂದರ ನಾಡಿನಲ್ಲಿ ಮುಂದಕ್ಕೆ ಬರುವ ಭಾವಿ ಪ್ರಜೆಗಳಾಗಿರು ತ್ತಾರೆ. ಇಂತಹ ಜನಕ್ಕೆ ಹಾನಿಯಾಗುವಂತೆ ಮಾಡಿದರೆ ಮಕ್ಕಳ ಪೋಷಣೆ ಮಾಡುವ ಚಿಂತನೆ ಅದರ ಪಾಲಕರಿಗೆ ಬಹಳ ಗುರುತರವಾಗುತ್ತದೆ. ಇಂದಿನ ಯುವಕರು ನಾಳೆ ರಾಜ್ಯದ ಆಡಳಿತದಲ್ಲಿ ಬರುವ ಮುಖ್ಯ ಪ್ರಜೆಗಳು. ಮತ್ತು ಆಡಳಿತದ ಹೊಣೆಯನ್ನು ಹೊತ್ತುಕೊಂಡು ಹೋಗುವಂತಹ ಪ್ರಜೆಗಳಾಗುವರು. ಇಂತಹವರ ವಿದ್ಯಾಭ್ಯಾಸದಲ್ಲಿ ಶಿಕ್ಷಣದ ಹೊಂದಾಣಿಕೆ ಇಲ್ಲದೇ ಇದ್ದರೆ ಅವರು ವಿದ್ಯಾಭ್ಯಾಸ ಮಾಡುವುದು ಕಷ್ಟವಾಗುತ್ತದೆ. ಹಿಂದಿಗೆ ನಮ್ಮ ರಾಜ್ಯದಲ್ಲಿ ಬಹಳವಾದ ವಿರೋಧ ವಿದೆ. ಆದರೆ ಹಿಂದಿಗೆ ಉತ್ತರ ಭಾರತದಲ್ಲಿ ಒಪ್ಪಿಗೆ ಇದೆ ಎಂದು ಹಿಂದೆ ಒಂದು ಕಾಲದಲ್ಲಿ ಭಾರತ

(ಶ್ರೀ ಎಸ್. ಎಸ್. ಅರಕೇರಿ)

ದೇಶದಲ್ಲಿ ಹಿಂದಿಗೆ ದಕ್ಷಿಣ ಭಾಗದಲ್ಲಿ ಪೂರ್ಣ ವಿರೋಧವಿರುವುದರಿಂದ ಉತ್ತರ ಹಾಗೂ ದಕ್ಷಿಣ ಭಾಗ ಎಂದು ಇಬ್ಭಾಗವಾಗುವ ಬಿಕ್ಕಟ್ಟು ಒಂದು ಸಾರಿ ನಿರ್ಮಾಣವಾಗಿತ್ತು. ಆ ಕಾಲಕ್ಕೆ ಹಿಂದಿ ರಾಷ್ಟ್ರ ಭಾಷೆ ಆಗಬೇಕು ಎಂದು ಹೇಳಿದಾಗ ಅದಕ್ಕೆ ಅನೇಕ ವಿಧವಾದ ವಿರೋಧಗಳೂ ಬಂದಿದ್ದವು. ಆದರೆ ಇದರ ಬಗ್ಗೆ ನಿರ್ಣಯವನ್ನು ವೋಟಿಗೆ ಹಾಕುವಾಗ ಹಿಂದಿಗೆ 48 ಮತ್ತು ಇಂಗ್ಲೀಷಿಗೆ 49 ಎಂದು ಒಂದು ಸಾರಿ ಬಂತು ಮತ್ತು ಆ ನಂತರದಲ್ಲಿ ಇನ್ನೊಂದು ಸಂದರ್ಭದಲ್ಲಿ ನಿರ್ಣಯವನ್ನು ವೋಟಿಗೆ ಹಾಕಿದಾಗ ಹಿಂದಿಗಾಗಿ 48 ಮತ್ತು ಇಂಗ್ಲಿಷಿಗಾಗಿ 48 ವೋಟುಗಳು ಬಾದು ಒಂದು ವೋಟಿನಿಂದಾಗಿ ಅದು ಉಳಿದುಕೊಂಡಿದೆ ಎಂದು ಡಾಕ್ಟರ್ ಅಂಬೇಡ್ಕರ್‌ರವರು ಬರೆದಿರುವ 'Thoughts on Linguistic States' ಎನ್ನುವ ಕಿರುಹೊತ್ತಿಗೆಯಿಂದ ನಮಗೆ ಗೊತ್ತಾಗುತ್ತದೆ. ಕೇವಲ ಒಂದೇ ಒಂದು ವೋಟಿನಿಂದ ಹಿಂದಿ ರಾಷ್ಟ್ರದ ಆಡಳಿತ ಭಾಷೆಯಾಗಬೇಕು ಎಂದು ಅದಾಗ ಉತ್ತರ ಹಿಂದೂಸ್ಥಾನ ಹಾಗೂ ದಕ್ಷಿಣ ಹಿಂದೂಸ್ಥಾನ ಎಂದು ಇಬ್ಭಾಗವಾಗುವ ಒಂದು ಸಂದರ್ಭವೂ ಕೂಡ ಬಂದಿತ್ತು. ಇದರ ಸಲುವಾಗಿ ಹಿಂದಿಯನ್ನು ಆಡಳಿತ ಭಾಷೆಯಾಗಿ ಮಾಡದೇ ಇದ್ದರೆ ದೇಶದ ಒಗ್ಗಟ್ಟಿಗೆ ಇದರಿಂದ ಹಾನಿಯಾಗುತ್ತದೆ ಎನ್ನುವ ಅಭಿಪ್ರಾಯವನ್ನು ಕೆಲಜನ ಆಗ ಕೊಟ್ಟಿದ್ದರು. ಅಂತೂ ದಕ್ಷಿಣ ಹಿಂದೂಸ್ಥಾನದಲ್ಲಿ ಹಿಂದೀ ಭಾಷೆಗೆ ವಿರೋಧವಿದೆ. ಅದರ ಸಲುವಾಗಿ ನಮ್ಮ ರಾಜ್ಯದ ವಿದ್ಯಾರ್ಥಿಗಳು ಹಿಂದಿಯನ್ನು ತೆಗೆದುಹಾಕಬೇಕೆಂದು ನೇರವಾದ ನಿಲುವನ್ನು ತೆಗೆದುಕೊಂಡಿದ್ದಾರೆ. ಚಳುವಳಿ ಮಾಡಿದ್ದಾರೆ, ಸತ್ಯಾಗ್ರಹ ಮಾಡಿದ್ದಾರೆ. ನಮ್ಮ ದಕ್ಷಿಣ ಹಿಂದೂಸ್ಥಾನದಲ್ಲಿ ಇಂಗ್ಲೀಷನ್ನು ಅಫಿಷಿಯಲ್ ಲಾಂಗ್‌ವೇಜ್ ಮಾಡಬೇಕು. ಇವತ್ತಿನದಿವಸ ಇಡೀ ದೇಶಕ್ಕೆ ಮಾದರಿಯಾಗಿರಬೇಕಾದ ಪ್ರಧಾನಮಂತ್ರಿಗಳು ತಮ್ಮ ಮಗನನ್ನು ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡ್‌ಗೆ ಕಳಿಸಿದ್ದಾರೆ. ಶ್ರೀಮಂತರಿಗಾದರೆ ಇಂಗ್ಲೀಷ್, ಬಡವರಿಗಾದರೆ ಹಿಂದಿ, ಈ ರೀತಿ ತಾರತಮ್ಯವಿರಬಾರದು. ಈ ಭಾಷಾ ವಿಚಾರದಲ್ಲಿ ಯಾವ ನಿಲುವನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ನಮ್ಮ ವಿದ್ಯಾರ್ಥಿಗಳು ಮಾರ್ಗದರ್ಶನ ಮಾಡಿಕೊಟ್ಟಿದ್ದಾರೆ. ಅದನ್ನು ಸರ್ಕಾರದವರು ಬಹಳ ಗಂಭೀರವಾಗಿ ಆಲೋಚನೆ ಮಾಡಿ ಮುಂದಿನ ಹೆಜ್ಜೆ ಇಡಬೇಕು. ಮುಂದೆ ದೇಶವನ್ನು ನಿರ್ಮಾಣ ಮಾಡತಕ್ಕಂಥ ವಿದ್ಯಾರ್ಥಿಗಳಿಗೆ ನಾವು ತಕ್ಕ ಪ್ರೋತ್ಸಾಹ ಕೊಡಬೇಕಾಗಿದೆ. ಇಂಗ್ಲೀಷ್‌ನ್ನು ಅಫಿಷಿಯಲ್ ಲ್ಯಾಂಗ್‌ವೇಜ್ ಮಾಡಿದರೆ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಉಂಟಾಗುವುದಕ್ಕೆ ಅವಕಾಶವಾಗುತ್ತದೆ. ನಮ್ಮ ರಾಜ್ಯದ ಪೋಲೀಸ್ ಖಾತೆ ಯಮನ ಖಾತೆಯೆಂದು ಹೆಸರು ಪಡೆದಿದೆ. ಈ ಪೋಲೀಸರ ಕಣ್ಣಿಗೆ ಹೆಂಗಸರು, ಮಕ್ಕಳು, ಕುರುಡರು, ಕುಂಟರು, ಹೆಳವರು ಎಲ್ಲರೂ ಒಂದೇ ಆಗಿದ್ದಾರೆ. ನ್ಯಾಯವಾಗಿ ಪೋಲೀಸ್ ಖಾತೆ ಎಂಬುದು ನ್ಯಾಯ ದೇವತೆಯಂತಿರಬೇಕು. ಪೋಲೀಸ್ ಖಾತೆ ನಮ್ಮನ್ನು ರಕ್ಷಣೆ ಮಾಡದಿದ್ದರೆ ಇನ್ನು ಯಾರು ಮಾಡುತ್ತಾರೆ? ಶ್ರೀ ರಾಮರಾಯರು ಮಂತ್ರಿಗಳಾಗಿದ್ದಾಗ ನಮ್ಮ ರಾಜ್ಯದಲ್ಲಿ ಅನೇಕ ದೌರ್ಜನ್ಯಗಳು ನಡೆದಿವೆ. ಗುಂಡಿನೇಟಿನಿಂದ ಅನೇಕ ಜನರು ಸತ್ತಿದ್ದಾರೆ. ಇವತ್ತಿನ ಪತ್ರಿಕೆಯಲ್ಲಿ ಪೋಲೀಸ್ ಖಾತೆಯನ್ನು ಶ್ರೀ ಆರ್. ಎಂ. ಪಾಟೀಲರು ವಹಿಸಿಕೊಳ್ಳುತ್ತಾರೆಂದು ಸುದ್ದಿ ಬಂದಿದೆ. ಇನ್ನು ಮುಂದೆ ಇವರ ಅಧಿಕಾರದಲ್ಲಿ ಪೋಲೀಸ್ ಖಾತೆ ಚೆನ್ನಾಗಿ ನಡೆಯುತ್ತದೆಂದು ಭಾವಿಸಿದ್ದೇನೆ. ಜನರಿಗೆ ನ್ಯಾಯ ಮತ್ತು ರಕ್ಷಣೆ ಸಿಗುತ್ತದೆಂದು ನಂಬಿದ್ದೇನೆ. ಭಾಷಾ ವಿಚಾರದಲ್ಲಿ ಅನೇಕ ವಿದ್ಯಾರ್ಥಿಗಳು ಪ್ರಾಣ ಕೊಟ್ಟಿದ್ದಾರೆ. ಸರ್ಕಾರದವರು ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿ ಒಂದು ಸ್ಪಷ್ಟವಾದ ನಿಲುವನ್ನು ತಳೆದು ಕೇಂದ್ರಸರ್ಕಾರಕ್ಕೆ ತಿಳಿಸಬೇಕು. ನಮ್ಮ ರಾಜ್ಯದವರು ಹಿಂದಿಗೆ ವಿರೋಧವಾಗಿದ್ದಾರೆ ಎನ್ನುವುದನ್ನು ಮುಖ್ಯಮಂತ್ರಿಗಳು ಧೈರ್ಯವಾಗಿ ಕೇಂದ್ರದವರಿಗೆ ತಿಳಿಸಬೇಕು. ಆ ರೀತಿ ಮಾಡಿದರೆ ಕನ್ನಡ ನಾಡಿಗೆ ಮತ್ತು ಇಡೀ ದಕ್ಷಿಣ ಹಿಂದೂಸ್ಥಾನಕ್ಕೆ ಉಪಕಾರ ಮಾಡಿದಂತಾಗುತ್ತದೆ. ಒತ್ತಾಯದಿಂದ ನಮ್ಮ ವಿದ್ಯಾರ್ಥಿಗಳಿಗೆ ಹಿಂದಿಯನ್ನು ಕಲಿಸುವುದು ಸರಿಯಲ್ಲ. ಹಿಂದಿ ಬೇಡ ಎನ್ನುವ ಬಗ್ಗೆ ಈಗಾಗಲೆ ವಿದ್ಯಾರ್ಥಿಗಳು ಚಳುವಳಿ ಮಾಡಿದ್ದಾರೆ. ಇನ್ನು ಮುಂದೆ ಇನ್ನೂ ಹೆಚ್ಚಿನ ಚಳುವಳಿಯನ್ನು ಅವರು ಮಾಡುವುದಕ್ಕೆ ಅವಕಾಶ ಕೊಡದೆ ಸರ್ಕಾರದವರು ಬಹಳ ಎಚ್ಚರಿಕೆಯಿಂದ ಮತ್ತು ಬಹಳ ಗಂಭೀರವಾದ ನಿಲುವನ್ನು ತಳೆಯಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. CHAIRMAN.—Before I call upon Sri Sharan Gowda I would like to bring to the notice of the House that we are closing at 7 O'clock. We have hardly 35 minutes and I am told the Chief Minister will take about 15 minutes for reply. So, I request hon'ble members

to be brief and take only 4 or 5 minutes each. Now Sri Sharan Gowda may speak.

† ಶ್ರೀ ಶರಣಗೌಡ ಇನಾಂದಾರ್ (ಜೇವರ್ಗಿ).—ಮಾನ್ಯ ಅಧ್ಯಕ್ಷರೇ, ಯಾವಾಗಲೂ ನಾನು ಮಾತನಾಡಲು ನಿಂತುಕೊಂಡಾಗಲೇ ಟೈಮ್ ಲಿಮಿಟ್ ಬರುತ್ತದೆ. ಈಗಿರುವ ವಿಷಯವನ್ನು ನಾಲ್ಕೈದು ನಿಮಿಷಗಳಲ್ಲಿ ಮಾತನಾಡಿ ಮುಗಿಸುವುದಕ್ಕಾಗುವುದಿಲ್ಲ. ಐದು ನಿಮಿಷ ಹೆಚ್ಚು ಬೇಕಾಗುತ್ತದೆ. ಇವತ್ತಿನ ದಿವಸ ನಮ್ಮ ಮುಂದೆ ಇರುವುದು ಕಠಿಣ ಪ್ರಶ್ನೆ. ಭಾಷಾ ದೃಷ್ಟಿಯಿಂದ ನಡೆದಿರುವ ಚಳುವಳಿಯ ಬಗ್ಗೆ ಮತ್ತು ಸರ್ಕಾರದವರು ಆ ವಿಚಾರದಲ್ಲಿ ತಳೆದ ಧೋರಣೆಯ ಬಗ್ಗೆ ವಿಚಾರ ಮಾಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಭಾಷೆ ಯಾವುದು ಇರಬೇಕು ಎನ್ನುವ ಮಾತು ಬೇರೆ. ಆ ವಿಚಾರವನ್ನು ಮುಂದೆ ಭಾಷೆಯ ಪ್ರಶ್ನೆ ಬಂದಾಗ ಮಾತನಾಡುತ್ತೇನೆ. ನಮ್ಮ ರಾಜ್ಯದಲ್ಲಿ ಹಿಂದಿಯ ವಿರುದ್ಧ ಚಳುವಳಿ ನಡೆದಿರುವುದು ಇದು ಮೊದಲನೆಯ ಸಲವಲ್ಲ. ಇದು ಮೂರನೆಯ ಸಲವೆಂದು ನನಗನ್ನಿಸುತ್ತದೆ. ಭಾಷಾ ಶಾಸನದ ತಿದ್ದುಪಡಿಯಾಗುವುದಕ್ಕೆ ಮುಂಚೆ ಅಂದರೆ 1963ರಲ್ಲಿ ದಕ್ಷಿಣ ಹಿಂದೂಸ್ಥಾನದಲ್ಲಿ ಘೋರವಾದ ಚಳುವಳಿ ನಡೆಯಿತು. ಆ ಚಳುವಳಿಯಲ್ಲಿ ಸಾರ್ವಜನಿಕರ ಮತ್ತು ಸರ್ಕಾರದ ಆಸ್ತಿಪಾಸ್ತಿಗಳು ಹಾಳಾಯಿತಲ್ಲದೆ ಅನೇಕ ಖಾಸಗೀ ಜನರು ಮೃತಪಟ್ಟರು. ಆ ರೀತಿ ಚಳುವಳಿಯಾದಾಗ ಆಗಿನ ಪ್ರಧಾನಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರು, ಆ ನಂತರ ಕೆಲಮಟ್ಟಿಗೆ ಸಮಾಧಾನವಾಯಿತು. ಶ್ರೀ ಶಾಸ್ತ್ರಿಗಳು ಪ್ರಧಾನ ಮಂತ್ರಿಗಳಾದಾಗಿನಿಂದ ಇದುವರೆಗೆ ಈ ಭಾಷಾ ಚಳುವಳಿಯ ದೃಶ್ಯ ನಮ್ಮ ದೇಶದಲ್ಲಿ ನಡೆಯುತ್ತಾ ಬಂದಿದೆ. ಈ ರೀತಿ ಚಳುವಳಿಯಾದಾಗಲೆಲ್ಲಾ ಕೆಲವು ಪ್ರಮುಖ ಮುಖಂಡರುಗಳು ಸಮಾಧಾನಕರವಾದಂಥ ಹೇಳಿಕೆಗಳನ್ನು ಕೊಡುತ್ತಾ ಬಂದಿದ್ದಾರೆ. ಇದರಲ್ಲಿ ನನಗನ್ನಿಸುತ್ತದೆ, ಮೊಟ್ಟಮೊದಲು ಶ್ರೀ ನಿಜಲಿಂಗಪ್ಪನವರು ದೆಹಲಿಯಲ್ಲಿ ತ್ರಿಭಾಷಾ ಸೂತ್ರದ ಬಗ್ಗೆ ಒಂದು ಸಮಾಧಾನಕರವಾದಂಥ ಹೇಳಿಕೆಯನ್ನು ಕೊಟ್ಟರು. ಶ್ರೀಮಾನ್ ನಿಜಲಿಂಗಪ್ಪನವರು ಈಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ ಮತ್ತು ಈ ರಾಜ್ಯದ ಮುಖ್ಯಮಂತ್ರಿಗಳೂ ಸಹ ಆಗಿದ್ದಾರೆ. ಮೊದಲು ಇವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರೂ ಸಹ ಆಗಿದ್ದರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಇವರು ಸದಸ್ಯರಾಗಿದ್ದಾಗ ಭಾಷಾ ಸಮಸ್ಯೆಯ ಬಗ್ಗೆ ಒಂದು ನಿರ್ಣಯವನ್ನು ಪಾಸ್ ಮಾಡಿದರು. ಆಗ ಶ್ರೀಮಾನ್ ಕಾಮರಾಜರು ಅಧ್ಯಕ್ಷರಾಗಿದ್ದರು. ಇವರುಗಳು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ತೆಗೆದುಕೊಂಡ ರೆಜಲೂಷನ್‌ಗೂ, ಲೋಕಸಭೆಯಲ್ಲಿ ಪಾಸ್ ಮಾಡಿದ ರೆಜಲೂಷನ್‌ಗೂ ಬಹಳ ವ್ಯತ್ಯಾಸವಿದೆಯೆಂದು ನಾನು ಧೈರ್ಯವಾಗಿ ಈ ಸಭೆಯಲ್ಲಿ ಹೇಳಬಯಸುತ್ತೇನೆ. ದಿವಂಗತ ಪಂಡಿತ್ ಜವಹರ್‌ಲಾಲ್ ನೆಹರೂ ಅವರು ಭಾಷೆಯ ಬಗ್ಗೆ ಕೊಟ್ಟಂತಹ ಒಂದು ಭರವಸೆಯನ್ನು ಕಾನೂನು ಮೂಲಕ ಲೋಕಸಭೆಯಲ್ಲಿ ಪಾಸ್ ಮಾಡಲಾಯಿತು ಎನ್ನುವ ಮಾತನ್ನು ಶ್ರೀಮಾನ್ ಕಾಮರಾಜರು ಹೇಳಿದರು. ಕಾಂಗ್ರೆಸ್ ಪಾರ್ಟಿಯಲ್ಲಿಯೇ ದ್ವಿಭಾಷಾ ಸೂತ್ರದ ಬಗ್ಗೆ ಮತ್ತು ತ್ರಿಭಾಷಾ ಸೂತ್ರದ ಬಗ್ಗೆ ಭಿನ್ನಾಭಿಪ್ರಾಯವಿದ್ದು, ಆ ಬಗ್ಗೆ ಒಂದು ಸರಿಯಾದ ನಿರ್ಣಯ ತೆಗೆದುಕೊಳ್ಳದೆ ಇವತ್ತಿನ ದಿವಸ ವಿದ್ಯಾರ್ಥಿಗಳಿಗೆ ಅನ್ಯಾಯ ಮತ್ತು ಅತ್ಯಾಚಾರವಾಗುತ್ತಿದೆ ಎಂಬುದನ್ನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಈಗ ಇರತಕ್ಕಂಥ ರಾಜಕೀಯ ಪಕ್ಷಗಳು ಮೂಲಭೂತವಾದಂಥ, ವಿಶಿಷ್ಟವಾದಂಥ ಗುರಿಯನ್ನು ಇಟ್ಟುಕೊಂಡು ಹೋಗುತ್ತಿದ್ದರೂ ಕೂಡ ಕೆಲವು ವಿಚಾರಗಳಲ್ಲಿ ಅತಿ ವಿರುದ್ಧವಾದಂತಹ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಈ ಕಾಂಗ್ರೆಸ್ ಸಂಸ್ಥೆ ಪೊಲಿಟಿಕಲ್ ಸಂಸ್ಥೆ. ಭಾಷಾ ಸಮಸ್ಯೆಯ ಬಗ್ಗೆ, ಗಡಿ ಸಮಸ್ಯೆಯ ಬಗ್ಗೆ, ಪಾನನಿರೋಧದ ಬಗ್ಗೆ ಮತ್ತು ಇನ್ನೂ ಅನೇಕ ವಿಷಯಗಳ ಮೇಲೆ ಈ ಕಾಂಗ್ರೆಸ್ ಸಂಸ್ಥೆಯ ಮೇಲೆ ಭಿನ್ನಾಭಿಪ್ರಾಯವಿದೆ. ಈ ಭಿನ್ನಾಭಿಪ್ರಾಯಗಳನ್ನು ಇವರು ಯೋಗ್ಯ ರೀತಿಯಲ್ಲಿ ಸರಿಪಡಿಸುವುದಕ್ಕೆ ಅಸಮರ್ಥರಾಗಿರುವುದರಿಂದ, ದೇಶದಲ್ಲಿ ಇಂತಹ ಗಲಾಟೆಯಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

ಸ್ವಾಮಿ, ಅಧ್ಯಕ್ಷರೇ, ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಏನೆಂದರೆ, ಈ ಗಡಿ ಸಮಸ್ಯೆಯ ಬಗ್ಗೆ ಕಾಂಗ್ರೆಸ್ ಸಂಸ್ಥೆಯ ಮುಖಂಡರೇ ಭಿನ್ನ ಭಿನ್ನವಾದ ಅಭಿಪ್ರಾಯಗಳನ್ನು ಇಟ್ಟುಕೊಂಡು ಬೆಳಗಾಂನಲ್ಲಿ, ಕಾರವಾರದಲ್ಲಿ, ಗುಲ್ಬರ್ಗದಲ್ಲಿ ಮತ್ತು ಹುಬ್ಬಳ್ಳಿಯಲ್ಲಿ ಅನೇಕ ರೀತಿಯಲ್ಲಿ ಚಳುವಳಿಯನ್ನು ನಡೆಸಿದರು. ಇದರಿಂದ ಸಾಮಾನ್ಯ ಜನರ ಮನಸ್ಸಿನ ಮೇಲೆ ಕೆಲವು ದುಷ್ಟ ಪರಿಣಾಮ ಉಂಟಾಯಿತು ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಡಳಿತ ಪಕ್ಷದಲ್ಲಿರುವ ಕೆಲವು ಮುಖಂಡರುಗಳೇ ಭಾಷೆಯ ಬಗ್ಗೆ, ಗಡಿ ಸಮಸ್ಯೆ ಬಗ್ಗೆ ಮತ್ತಿತರ ವಿಷಯಗಳ ಬಗ್ಗೆ ತಮ್ಮ ಒಂದು ವೈಶಿಷ್ಟ್ಯವನ್ನು ಬಲಗೊಳಿಸುವುದಕ್ಕಾಗಿ ಈ ರೀತಿಯಾದಂಥ ಪ್ರಚೋದನೆ ಮಾಡಿಸಿ, ಚಳುವಳಿ ಮಾಡಿಸಿ ದೇಶದಲ್ಲಿರುವ ಶಾಂತಿಯನ್ನು ಹಾಳುಮಾಡುತ್ತಿದ್ದಾರೆ. ಈ ರೀತಿ

(ಶ್ರೀ ಶರಣಗೌಡ ಇನಾಂದಾರ್)

ಚಳುವಳಿ ನಡೆದಾಗಲೆಲ್ಲಾ ಸಾಮಾನ್ಯ ಜನರ ಆಸ್ತಿಪಾಸ್ತಿಗಳು ಮತ್ತು ಜೀವಗಳು ನಷ್ಟವಾಗುತ್ತದೆಂದು ವಿಷಾದದಿಂದ ಹೇಳಬೇಕಾಗುತ್ತಿದೆ.

6-30 P.M.

ಈ ರೀತಿ ಭಾಷೆಯ ವಿಚಾರದಲ್ಲಿ ಕೂಡ ಮುಂಚೆ ಹೋಗಿ ಒಂದು ಮಸೂದೆಯನ್ನು ತಂದರು. ಚೀಫ್ ಮಿನಿಸ್ಟರ್ಸ್ ಕಾನ್‌ಫರೆನ್ಸ್ ಕರೆದು ಈ ಸಮಸ್ಯೆ ವಿಚಾರ ಮಾಡುತ್ತೇವೆ ಎಂದು ಹೇಳಿದ್ದರು. ದಕ್ಷಿಣ ಭಾರತೀಯರು ವಿರೋಧ ಮಾಡತಕ್ಕಂಥ ಅಭಿಪ್ರಾಯ ಇರುವುದರಿಂದ ಇದನ್ನು ಪರಿಶೀಲನೆ ಮಾಡಲು ಚೀಫ್ ಮಿನಿಸ್ಟರ್ಸ್ ಕಾನ್‌ಫರನ್ಸ್ ಕರೆಸಿ ಅವರ ಅಭಿಪ್ರಾಯ ತೆಗೆದುಕೊಂಡು ಮಾಡುತ್ತೇವೆಂದು ಪ್ರೈಮ್ ಮಿನಿಸ್ಟರ್ ಅವರು ಹೇಳಿದ್ದರು. ಇದರ ಬಗ್ಗೆ ಪ್ರತಿಕ್ರಿಯೆ ಏನು ಇದೆ ಎನ್ನುವುದನ್ನು ತಿಳಿದುಕೊಂಡು ಮಾಡಲಿಲ್ಲ. ಬದಲಾವಣೆ ಮಾಡತಕ್ಕಂಥ ಪ್ರಶ್ನೆ ಬಂದಾಗ್ಗೆ ಆಲೋಚನೆ ಮಾಡಿ ಒಂದು ನಿರ್ಣಯಕ್ಕೆ ಬಂದಿದ್ದರೆ ಅನಾಹುತವಾಗುವುದನ್ನು ತಡೆಯಬಹುದಾಗಿತ್ತು. ಇಂಥ ಅನಾಹುತ ತಡೆಯುವುದಕ್ಕೆ ಯೋಗ್ಯ ಬಂದೋಬಸ್ತು ಸರಕಾರ ಮಾಡಬೇಕಾಗಿತ್ತು. ಈ ಜವಾಬ್ದಾರಿ ಸರಕಾರ ಕಳೆದುಕೊಂಡಿದೆ ಎಂದು ವಿಷಾದದಿಂದ ಹೇಳುತ್ತೇನೆ. ಈ ಚಳವಳಿ ನಮ್ಮ ರಾಜ್ಯದಲ್ಲಿ ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕ್ಷೇತ್ರದಲ್ಲಿ ಮಾತ್ರ ನಡೆಯಿತು. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ನಡೆಯಲಿಲ್ಲ. ಗುಲಬುರ್ಗದಲ್ಲಿ ಕೂಡ ಅನೇಕ ಶಿಕ್ಷಣ ಕೇಂದ್ರಗಳಿವೆ. ಧಾರವಾಡ ಬೆಳಗಾಂವನಲ್ಲಿ ಕೂಡ ಇವೆ. ಬೆಂಗಳೂರು ಮತ್ತು ಮೈಸೂರಿನಲ್ಲಿ ಪೋಲೀಸ್ ಬಂದೋಬಸ್ತು ಮಾಡುವುದಕ್ಕೆ ಏತಕ್ಕೆ ಮುಂಜಾಗ್ರತೆ ವಹಿಸಿಕೊಂಡು ವ್ಯವಸ್ಥೆ ಮಾಡಲಿಲ್ಲ ಎಂದು ಸರಕಾರಕ್ಕೆ ಕೇಳುತ್ತೇನೆ, ಮುಂಜಾಗ್ರತೆ ವಹಿಸಿ ವ್ಯವಸ್ಥೆ ಮಾಡಿದ್ದರೆ ಅನಾಹುತವಾಗುವುದು ತಪ್ಪುತ್ತಿತ್ತು. ಇದಲ್ಲದೆ ಈ ಚಳವಳಿ ಮದ್ರಾಸ್ ಮತ್ತು ಆಂಧ್ರ ರಾಜ್ಯಗಳಲ್ಲಿ 15 ದಿವಸ ಮುಂಚೆ ನಡೆದು ಗೋಲೀಬಾರ್ ಆದ ಸಮಾಚಾರ ಗೊತ್ತಿದ್ದರೂ ಕೂಡ ಪೋಲೀಸ್ ಡಿಪಾರ್ಟ್‌ಮೆಂಟ್ ಏತಕ್ಕೆ ಮೊದಲೇ ಪ್ರಿಕಾಷನ್ಸ್ ತೆಗೆದುಕೊಂಡಿರಲಿಲ್ಲ? ಸರಕಾರಕ್ಕೆ ಈ ಜವಾಬ್ದಾರಿ ಇದೆ ಎಂದು ಹೇಳುತ್ತೇನೆ. ಸರಕಾರಕ್ಕೆ ಮೊದಲೇ ಇನ್‌ಫರ್‌ಮೇಷನ್ ಸಿಕ್ಕುತ್ತದೆ. ಆದುದರಿಂದ ಅನಾಹುತ ತಡೆಯುವುದಕ್ಕೆ ಅನುಕೂಲವಿದೆ. ಸರಕಾರ ಅಲಕ್ಷ್ಯ ಮಾಡಿದರೆ ದುರಂತವಾಗುತ್ತದೆ. ಮುಂಜಾಗ್ರತೆಯಿಂದ ಕ್ರಮ ತೆಗೆದುಕೊಂಡರೆ ದುರಂತ ತಪ್ಪಿಸುವುದಕ್ಕೆ ಬರುತ್ತದೆ. ಇದು ಹಠಾತ್ತನೆ ಆಗಿರಲಿಲ್ಲ ಮದ್ರಾಸ್ ಆಂಧ್ರದಲ್ಲಿ ನಡೆದದ್ದು ಎಂಟು ಹತ್ತು ದಿವಸ ಮೊದಲೇ ತಿಳಿದಿತ್ತು. ಸೂಕ್ತ ಕ್ರಮ ತೆಗೆದುಕೊಳ್ಳಲು ಸರಕಾರ ಅಸಮರ್ಥವಾಗಿದೆ ಎನ್ನುವ ಜವಾಬ್ದಾರಿ ಸರಕಾರದ ಮೇಲೆ ಬೀಳುತ್ತದೆ. ಎರಡನೆಯದಾಗಿ ಗೋಲೀಬಾರ್ ಆಗುವುದಕ್ಕೆ ಮುಂಚೆ ಸರಕಾರ ಯಾವ ಪ್ರಿಕಾಷನ್ಸ್ ತೆಗೆದುಕೊಳ್ಳದೇ ಇರುವುದರಿಂದ ಹಾದಿಯಮೇಲೆ ಹೋಗತಕ್ಕಂಥ ನಿರಪರಾಧಿ ಜನ ಗೋಲೀಬಾರಕ್ಕೆ ಬಲಿಯಾಗಿದ್ದಾರೆ. ಒಂದು ರೀತಿಯಿಂದ ಈ ಬಗ್ಗೆ ಸರಕಾರದ ಮೇಲೆ ಜವಾಬ್ದಾರಿ ಇದೆ. ಅದು ಹೇಗೆ ಅಂದರೆ, ಹಿಂದೀ ವಿರೋಧವಾಗಿ ಒಂದು ಮೆರವಣಿಗೆ ನಡೆಯುತ್ತದೆ ಎಂದು ಸರಕಾರಕ್ಕೆ ಗೊತ್ತಾಗಿತ್ತು. ಆಸ್ತಿಪಾಸ್ತಿಗೆ ಜನಸಂಚಾರಕ್ಕೆ ರಕ್ಷಣೆ ಕೊಡಬೇಕಾದುದು ಸರಕಾರದ ಜವಾಬ್ದಾರಿ. ಮೆರವಣಿಗೆ ಬರುವ ಮಾರ್ಗದಲ್ಲಿ ಟ್ರಾಫಿಕ್ ಕಂಟ್ರೋಲ್ ಮಾಡಿ ವ್ಯವಸ್ಥೆ ಮಾಡತಕ್ಕದ್ದು ಸರಕಾರದ ಪೋಲೀಸ್ ಡಿಪಾರ್ಟಮೆಂಟಿನ ಕರ್ತವ್ಯವಾಗಿತ್ತು. ಯಾವ ಮುಂಜಾಗ್ರತೆ ಕ್ರಮ ಸರಕಾರ ತೆಗೆದುಕೊಳ್ಳಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಇಂಥ ದುರಂತ ತಪ್ಪಿಸಲಿಕ್ಕೆ ಸಾಧ್ಯವಿತ್ತು. ಆದುದರಿಂದ ಈ ಜವಾಬ್ದಾರಿ ಸರಕಾರದ ಮೇಲೆ ಇದೆ. ಇದನ್ನು ಸರಕಾರ ಗಮನಕ್ಕೆ ತೆಗೆದುಕೊಳ್ಳಬೇಕು. ನಾಳೆಯಿಂದ ಅಂದರೆ 23 ನೇ ತಾರೀಖಿನಿಂದ ಕಾಲೇಜುಗಳನ್ನು ತರೆಯಬೇಕು, ವಿದ್ಯಾರ್ಥಿಗಳು ಕಾಲೇಜುಗಳಿಗೆ ಹೋಗಬೇಕು ಎಂದು ತೀರ್ಮಾನವಾಗಿದೆ. ಆದರೆ ಇದು ವಿದ್ಯಾರ್ಥಿಗಳ ಒಮ್ಮತದ ನಿರ್ಣಯವಾಗಿಲ್ಲ. ಕೆಲವು ಹುಡುಗರು ವಿರೋಧ ಮಾಡಬಹುದು. ಕಾಲೇಜುಗಳಿಗೆ ಇಂಥ ವಿದ್ಯಾರ್ಥಿಗಳು ಹೋಗಿ ಒಳಗೆ ಇರತಕ್ಕಂಥವರನ್ನು ಹೊರಗೆ ತರುವುದಕ್ಕೆ ಪ್ರಯತ್ನ ಮಾಡಬಹುದು ಹಾಗು ಗಲಾಟೆ ಆಗುವ ಸಂಭವ ಕಂಡುಬರಬಹುದು. ಆದುದರಿಂದ ಹೋಂ ಮಿನಿಸ್ಟರ್ ಅವರು ಆಗಲಿ ಅಥವಾ ಇದಕ್ಕೆ ಸಂಬಂಧಪಟ್ಟವರು ಆಗಲಿ ದಯಮಾಡಿ ಈ ಕ್ಷಣದಲ್ಲಿ ಕಾಲೇಜುಗಳಲ್ಲಿ ಶಾಂತತೆ ಕಾಪಾಡಿಕೊಂಡು ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳು ಶಾಂತ ರೀತಿಯಿಂದ ಹೋಗಗೊಡಬೇಕು. ಯಾವ ರೀತಿಯ ಗೊಂದಲವಾಗಬಾರದು. ಸೂಕ್ತ ಕ್ರಮ ತೆಗೆದುಕೊಂಡು ವ್ಯವಸ್ಥೆ ಮಾಡಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿ ಈ ಎರಡು ಮಾತು ಆಡುವುದಕ್ಕೆ ಅವಕಾಶ ಕೊಟ್ಟಿರತಕ್ಕ ಅಧ್ಯಕ್ಷರಿಗೆ ವಂದನೆ ಅರ್ಪಿಸುತ್ತೇನೆ.

† ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ಈ ಭಾಷಾ ಸಮಸ್ಯೆ ಬಗ್ಗೆ ಸರಕಾರದವರು ಬೇರೆ ಒಂದು ಠರಾವು ತರತಕ್ಕವರು ಇದ್ದಾರೆ ಎಂದು ವರ್ತಮಾನ ಇದೆ. ಅದು ಬಂದಾಗ್ಗೆ ಭಾಷಾ ಧೋರಣೆಯ ಬಗ್ಗೆ ಯಾವ ಧೋರಣೆ ಅನುಸರಿಸಬೇಕು ಎನ್ನುವುದಕ್ಕೆ ಪ್ರತ್ಯೇಕವಾಗಿ ಆಗ್ಗೆ ಮಾತನಾಡುತ್ತೇನೆ. ಆದರೆ ಈ ದಿನ ಶ್ರೀಮಾನ್ ಶೆಟ್ಟರ್ ಅವರು ತಂದಿರುವ ನಿಲುವಳಿ ಸೂಚನೆ ಬಗ್ಗೆ ಕೆಲವು ಮಾತುಗಳನ್ನು ಆಡುತ್ತೇನೆ.

ನಮ್ಮ ಮೈಸೂರು ರಾಜ್ಯದಲ್ಲಿ ಇರತಕ್ಕ ವಾಸ್ತವಾಂಶ ಏನು ಎನ್ನುವುದನ್ನು ತಿಳಿಯದೆ ಸ್ಟೇಟ್‌ಮೆಂಟ್ ಕೊಟ್ಟದ್ದು ಕೂಡ ಇಂಥ ದುರಂತಕ್ಕೆ ಕಾರಣವಾಯಿತು ಎಂದು ಹೇಳಬಹುದು. ಸರಕಾರದ ಇಂಥ ನೀತಿ ಮೂಲಕ ವಿದ್ಯಾರ್ಥಿಗಳು ಚಳುವಳಿ ಮಾಡಿದರು ಎಂದು ಕಾಣುತ್ತದೆ. ಭಾಷೆಯ ಬಗ್ಗೆ ಸರಕಾರದ ನೀತಿ ಏನು ಎಂದು ಕೇಳಿದಾಗ್ಗೆ ಶ್ರೀಮಾನ್ ಶಂಕರಗೌಡರು ಹೇಳಿದ್ದಾರೆ. ನಾವು ತ್ರಿಭಾಷಾ ಸೂತ್ರಕ್ಕೆ ಕಂಕಣಬದ್ಧರಾಗಿದ್ದೇವೆ ಎಂದು ಅವರು ಹೇಳಿದರು. ಇದನ್ನು ಎಲ್ಲರೂ ಒಪ್ಪಲಿಲ್ಲ. ಅನೇಕರು ದ್ವಿಭಾಷಾ ಸೂತ್ರಕ್ಕೆ ಕಟ್ಟುಬಿದಿದ್ದಾರೆ. ಇಂಥ ಸಮಯದಲ್ಲಿ ಆಟಂ ಬಾಂಬ್ ಬಿದ್ದಹಾಗೆ ಅಫಿಷಿಯಲ್ ಲಾಂಗ್ವೇಜ್ ಅಮೆಂಡಮೆಂಟ್ ಬಿಲ್ ತಂದು ಅದರ ಬಗ್ಗೆ ರೆಜಲ್ಯೂಷನ್ ಪಾಸ್ ಮಾಡಿಕೊಂಡಿದ್ದು ಹಿಂದಿಯ ಬಗ್ಗೆ ವಿಷಾದವನ್ನುಂಟುಮಾಡಿತು. ತ್ರಿಭಾಷಾ ಸೂತ್ರ ಹೋಗಿ ಏಕ ಭಾಷಾ ಸೂತ್ರ ಅಂದರೆ ಹಿಂದೀ ಸೂತ್ರ ಬಂದರೆ ಉತ್ತರ ಭಾರತೀಯರು ದಕ್ಷಿಣ ಭಾರತೀಯರಮೇಲೆ ಒತ್ತಾಯದಿಂದ ಹೊರಿಸುತ್ತಾರೆ ಎಂದು ವಿದ್ಯಾರ್ಥಿಗಳ ಮುಖಂಡರು ತಿಳಿದು ಕೊಂಡರು. ಈ ವಾಸ್ತವಾಂಶ ಪರಿಸ್ಥಿತಿ ಸರಕಾರ ತಿಳಿದುಕೊಳ್ಳದೆ ಕ್ರಮವಾದ ನಡೆಸಿದ್ದರಿಂದ ವಿದ್ಯಾರ್ಥಿಗಳು ಚಳವಳಿ ಮಾಡಿದರು ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಈ ತ್ರಿಭಾಷಾ ಸೂತ್ರಕ್ಕೆ ಕಟ್ಟುಬಿದ್ದು, ಕೇಂದ್ರದಲ್ಲಿ ಅಫಿಷಿಯಲ್ ಲ್ಯಾಂಗ್ವೇಜಸ್ ಆಕ್ಟ್ ಪಾಸಾದಾಗ ಕೇಂದ್ರ ಸರ್ಕಾರಕ್ಕೆ ಏನಾದರೂ ಮನವಿಯನ್ನು ಸಲ್ಲಿಸಿದಿರಾ? ನೀವು ಏನು ಭರವಸೆ ಯನ್ನು ವಿದ್ಯಾರ್ಥಿಗಳಿಗೆ ಕೊಟ್ಟಿದ್ದೀರಿ? ಅಫಿಷಿಯಲ್ ಲ್ಯಾಂಗ್ವೇಜಸ್ ಆಕ್ಟ್ ಮಾಡಿದರೆ ವಿದ್ಯಾರ್ಥಿ ಗಳು ಮತ್ತು ಸಾರ್ವಜನಿಕರ ಮುಖಂಡರು ದಂಗೆ ಏಳುತ್ತಾರೆಯೆಂದೇನಾದರೂ ನೀವು ಕೇಂದ್ರ ಸರ್ಕಾರದ ಗಮನಕ್ಕೆ ತಂದಿರಾ? ಇಲ್ಲಿ ನಿಮ್ಮ ಕರ್ತವ್ಯ ಲೋಪವಾಗಿದೆ. ಈ ಚಳುವಳಿ ಪ್ರಾರಂಭ ವಾದ ಮೇಲೂ ಸಹ ಪ್ರತಿಯೊಂದು ಕಡೆಗೂ ವಿದ್ಯಾ ಮಂತ್ರಿಗಳು ಭೇಟಿ ಇತ್ತು ಸಾರ್ವಜನಿಕರನ್ನು, ತಂದೆತಾಯಿಗಳನ್ನು ಕರೆಸಿಕೊಂಡು ಒಂದು ಕೌನ್ಸಿಲ್ ರಚನೆ ಮಾಡಿ ಏನಾದರೂ ಶಾಂತಿ ಸಂಧಾನಕ್ಕೆ ಪ್ರಯತ್ನಪಟ್ಟಿರಾ? ರಿಸರ್ವ್ ಪೋಲೀಸರನ್ನು ಕರೆಸಿ ಹುಡುಗರನ್ನು ಸುಟ್ಟಿರಿ. ಇದು ಒಳ್ಳೆಯ ಆಡಳಿತದ ವೈಖರಿಯಲ್ಲ. ನೀವು ಮಾಡಿದ ತಪ್ಪಿಗೆ ಎಲ್ಲರನ್ನೂ ದೂಷಣೆ ಮಾಡುತ್ತಿದ್ದೀರಿ. ಒಂದು ಭಾಷಾ ನೀತಿಯನ್ನು ಕೇಂದ್ರದವರು ಅಂಗೀಕಾರ ಮಾಡಿದಾಗ ಕೇಂದ್ರ ಸರ್ಕಾರಕ್ಕೆ ನಿಮ್ಮ ಪ್ರತಿ ಭಟನೆಯನ್ನು ಸೂಚಿಸಲಿಲ್ಲ. ಆದಾದಮೇಲೂ ಸಹ, ಚಳುವಳಿ ಆರಂಭವಾದ ಮೇಲೂ ಸಹ ಮುಖ್ಯ ಮಂತ್ರಿಗಳಾಗಲೀ, ವಿದ್ಯಾಮಂತ್ರಿಗಳಾಗಲೀ ಮೈಸೂರು ವಿಶ್ವವಿದ್ಯಾಲಯದ ಕೇಂದ್ರಕ್ಕೆ, ಬೆಂಗಳೂರು ವಿಶ್ವವಿದ್ಯಾಲಯದ ಕೇಂದ್ರಕ್ಕೆ ಬಂದು ನಾಗರಿಕರನ್ನು ಸೇರಿಸಿ ಒಂದು ಸಮಿತಿಯನ್ನು ಮಾಡಿ, ನೀವೆಲ್ಲ ಶಾಂತಿಯಿಂದ ಇರಿ, ನಾವು ಇದರ ಹೊರೆ ಹೊರುತ್ತೇವೆ, ಇದು ನಮ್ಮ ಜವಾಬ್ದಾರಿ ಯಾಗಿದೆ ಎನ್ನುವಂಥ ಆಶ್ವಾಸನೆಯನ್ನು ಕೊಟ್ಟರಾ, ಅಂಥ ಯಾವುದಾದರೂ ಹೇಳಿಕೆಯನ್ನು ಕೊಟ್ಟರಾ? ಅಂಥದ್ದು ಯಾವುದನ್ನೂ ಮಾಡದೆ ಮೌನವಾಗಿದ್ದೀರಿ. ಇಲ್ಲಿ ಗಲಾಟೆ ಶುರುವಾದ ಮೇಲೆ, ಮದ್ರಾಸಿನಲ್ಲಿ ಅಲ್ಲಿನ ಸರ್ಕಾರ ಭಾಷೆಯ ಬಗ್ಗೆ ಒಂದು ನಿರ್ಣಯ ಮಾಡಿತು, ಆಂಧ್ರ ಸರ್ಕಾರವೂ ಒಂದು ನಿರ್ಣಯ ಮಾಡಿತು. 'ಎಲ್ಲ ಸೂರೆಯಾದ ಮೇಲೆ ಕೋಟೆ ಬಾಗಿಲು ಹಾಕಿ ದರು' ಎನ್ನುವ ಹಾಗೆ ಈಗ ಒಂದು ನಿರ್ಣಯವನ್ನು ಸಭೆಯ ಮುಂದೆ ತೆಗೆದುಕೊಂಡು ಬರುತ್ತೇ ವೆಂದು ಹೇಳುತ್ತಾರೆ. ಅದನ್ನು ಕೂಡ ತೆಗೆದುಕೊಂಡು ಬರುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಆ ನಿರ್ಣಯ ಸಭೆಯ ಮುಂದೆ ಬಂದಾಗ ಭಾಷಾ ಸಮಸ್ಯೆಯ ಬಗೆ ನಾನು ಮಾತನಾಡುತ್ತೇನ.

ಮಾನ್ಯ ಕಂಠಿಯವರು ಮೈಸೂರು ಬಾರ್ ಅಸೋಸಿಯೇಷನ್ ಮೀಟಿಂಗಿನಲ್ಲಿ ಮಾತನಾಡು ವಾಗ, ನನಗೆ ಗೊತ್ತಿರಲಿಲ್ಲ, 'ತ್ರಿಭಾಷಾ ಸೂತ್ರವನ್ನು ನೆಚ್ಚಿಕೊಂಡು ನಮ್ಮ ಮಕ್ಕಳು ಹಾಳಾಗಿ ಹೋದರು' ಎಂದೆಲ್ಲ ಹೇಳಿ ಅತ್ತುಕೊಂಡರು. ಆದರೆ ಬೆಂಗಳೂರಿಗೆ ಬಂದಮೇಲೆ ಆ ರೀತಿ ಹೇಳ ಲಿಲ್ಲ ಎಂದರು. ಇಂಥ ಮಂತ್ರಿವರ್ಯರು ನಮ್ಮಲ್ಲಿದ್ದಾರೆ! ನಮ್ಮ ವಿದ್ಯಾರ್ಥಿಗಳು ಭಾಷಾ ಪ್ರಶ್ನೆಯ ಬಗ್ಗೆ ಸ್ವಲ್ಪ ಪ್ರತಿಭಟನೆಯನ್ನು ಸೂಚಿಸಿದ್ದಾರ ಬಗ್ಗೆ ಮುಖ್ಯವಾಗಿ ಹುಡುಗರಿಗೆ ಚಿರಋಣಿ ಗಳಾಗಿರಬೇಕು. ಸಭೆಯ ಮುಂದೆ ಸಿಕ್ಕಿದಲ್ಲಿ ಭಾಷಾ ಸೂತ್ರದ ಬಗ್ಗೆ ಸರ್ಕಾರ ಯಾವ ಧೋರಣೆ ಯನ್ನನುಸರಿಸಬೇಕು ಎನ್ನುವುದರ ಬಗ್ಗೆ ಚರ್ಚಿಸುತ್ತೇನೆ. ಮುಖ್ಯವಾಗಿ ಈಗ ನಾನು ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಮಾಡಬಯಸುತ್ತೇನೆ, ಮೊದಲು ಹುಡುಗರಿಗೆ ಒಂದು ಆಶ್ವಾಸನೆಯನ್ನು ಕೊಡಬೇಕು. ಯಾವ ಯಾವ ಹುಡುಗರು ಜೈಲಿನಲ್ಲಿದ್ದಾರೆ ಅವರನ್ನೆಲ್ಲ ಬಿಡಿ, ಹುಡುಗರ ಜೊತೆ

(ಶ್ರೀ ಎಲ್. ಶ್ರೀಕಂಠಯ್ಯ)

ಯಲ್ಲಿ ಯಾವ ಯಾವ ಸಾರ್ವಜನಿಕರನ್ನು ದಸ್ತಗಿರಿ ಮಾಡಿದ್ದೀರಿ ಅವರೆಲ್ಲರನ್ನೂ ಬಿಡುಗಡೆ ಮಾಡಿ, ಎಲ್ಲರ ಮೇಲೆ ಹಾಕಿರುವ ಕೇಸುಗಳನ್ನೂ ಹಿಂದಕ್ಕೆ ತೆಗೆದುಕೊಳ್ಳಿ, ಆಗ ಶಾಂತಿ ಏರ್ಪಡುತ್ತದೆ. ಇದು ಒಂದು ಷರತ್ತು. ಎರಡನೆಯದು, ಯಾರು ಸತ್ತಿದ್ದಾರೆ ಅವರ ಸಂಬಂಧೀಕರಿಗೆ ಏನಾದರೂ ಪರಿಹಾರವನ್ನು ಕೊಡಬೇಕು ಮತ್ತು ಯಾವ ಯಾವ ಹುಡುಗನಿಗೆ ಟರ್ಮ್ಸ್ ಡೇಸ್ ಹೋಗಿದೆ ಅವರಿಗೆಲ್ಲ ಟರ್ಮ್ಸ್ ಡೇಸ್ ಕೊಡುವಂತೆ ಮಾಡಬೇಕು, ಈ ಗಲಾಟೆ ನಡೆದಷ್ಟು ದಿವಸಗಳ ಕಾಲ ಪರೀಕ್ಷೆಗಳನ್ನು ಮುಂದಕ್ಕೆ ಹಾಕಿ ಪರೀಕ್ಷೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಡಬೇಕು. ಇಷ್ಟು ಆಶ್ವಾಸನೆಯನ್ನು ಹುಡುಗರಿಗೆ ಕೊಡಬೇಕು. ಮತ್ತು ಯಾವ ರೀತಿಯಲ್ಲಿಯೂ ಹಿಂದಿಯೇತರ ರಾಜ್ಯಗಳಿಗೆ ಹೊರೆಯಾಗದ ರೀತಿಯಲ್ಲಿ ಭಾಷಾ ಸಮಸ್ಯೆಯನ್ನು ನ್ಯಾಯವಾದ ರೀತಿಯಲ್ಲಿ ಬಗೆಹರಿಸುತ್ತೇವೆ ಎನ್ನುವ ಆಶ್ವಾಸನೆಯನ್ನು ಹುಡುಗರಿಗೆ ಕೊಟ್ಟರೆ ಆವಾಗ ಈ ಸಮಸ್ಯೆ ಸುಲಭವಾಗಿ ಬಗೆಹರಿಯುತ್ತದೆ. ಈ ರೀತಿಯಾಗಿ ಮಾಡಿ ಹುಡುಗರು ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕೆ ಅವಕಾಶಮಾಡಿಕೊಡಿ. ಭಾಷಾ ನೀತಿಯ ಬಗ್ಗೆ ನಿರ್ಣಯ ಬಂದಾಗ ನಾನು ಪುನಃ ಮಾತನಾಡುತ್ತೇನೆ ಸ್ವಾಮಿ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭಾಪತಿಗಳೇ, ಹಿಂದಿ ಭಾಷಾ ಸಮಸ್ಯೆಯನ್ನು ಹುಟ್ಟಿಸಿದ್ದು ಸರ್ಕಾರ, ಬೆಳೆಸಿದ್ದು ಸರ್ಕಾರ, ಇದರ ನಿವಾರಣೆಗಾಗಿ ಗುಂಡು ಹಾರಿಸಿದ್ದೂ ಸರ್ಕಾರ. ಸ್ವಾಮಿ, ಹಿಂದಿ ರಾಷ್ಟ್ರಭಾಷೆ ಆಗಬೇಕು ಎನ್ನುವುದು ರಾಜ್ಯಾಂಗದತ್ತವಾದ ಸೂಚನೆ. ಈ ಸೂಚನೆಯ ಚೌಕಟ್ಟಿನೊಳಗೆ ಹಿಂದಿ ಭಾಷೆಯನ್ನು ಕಲಿಯಬೇಕು, ಅದು ರಾಷ್ಟ್ರಭಾಷೆಯಾಗಬೇಕು ಎಂದು ಈಗ್ಗೆ 20 ವರ್ಷಗಳ ಹಿಂದೆಯೇ ಶಾಲಾ ಕಾಲೇಜುಗಳಲ್ಲಿ ಇದನ್ನು ಕಡ್ಡಾಯವಾಗಿ ಇಟ್ಟು, ಮಕ್ಕಳಿಗೆ ಬೋಧಿಸಿದ್ದರೆ ಈಗ ಉಂಟಾಗಿರುವ ಭಾಷಾ ಗೊಂದಲ ಬರುತ್ತಲೇ ಇರಲಿಲ್ಲ. ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ 'ಡೌನ್ ವಿತ್ ಇಂಗ್ಲಿಷ್' ಎಂದು ಪ್ರತಿಭಟನೆ ಮಾಡಿದ್ದು ಜ್ಞಾಪಕವಿದೆ. ಇವೊತ್ತು ಅದೇ ವಿದ್ಯಾರ್ಥಿಗಳು 'ಡೌನ್ ವಿತ್ ಹಿಂದಿ' ಎಂದು ಹೇಳಬೇಕಾದರೆ ಸರ್ಕಾರದ ಧೋರಣೆ ಏನಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಖಾದಿ, ಹಿಂದಿ ಇವೆಲ್ಲ ಪಕ್ಷದ ವಿಚಾರಗಳು ಎಂದು ತಿಳಿದುಕೊಂಡು ಅವರು ಕೆಲಸ ಮಾಡಿದ್ದರಿಂದ ಇಂಥ ಗೊಂದಲಕ್ಕೆ ಅವಕಾಶವಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿ ಸಹಸ್ರಾರು ಜನ ಪದವೀಧರರಿದ್ದಾರೆ, ಲಕ್ಷಾಂತರ ಜನ ಶಾಲಾ ಕಾಲೇಜುಗಳಲ್ಲಿ ಓದುತ್ತಿದ್ದಾರೆ. ಹಿಂದಿ ಭಾಷೆಯನ್ನು ಕಲಿಯದೆ ಇದ್ದರೆ ಸರ್ಕಾರಿ ನೌಕರಿ ಸಿಕ್ಕುವುದಿಲ್ಲ. ನಮ್ಮ ಭವಿಷ್ಯ ಹೇಗಾಗುತ್ತದೆಯೋ ಎನ್ನುವ ಜಿಗುಪ್ಸೆ ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಕೆಲಸ ಮಾಡುತ್ತಿದೆ. ಈ ಜಿಗುಪ್ಸೆಯ ಪರಿಹಾರಕ್ಕೆ ಔಷಧಿ ಇಲ್ಲ.

ನಾವು ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿದ್ದೇವೆಂದು ಅಪ್ಪಣೆ ಕೊಡಿಸಿದ ದಿವಸದಿಂದಲೇ ಈ ಭಾಷಾ ಗೊಂದಲ ಪ್ರಾರಂಭವಾಯಿತು. ಸರ್ಕಾರ ಭಾಷೆಯ ವಿಚಾರದಲ್ಲಿ ನಿರ್ದಿಷ್ಟವಾದ, ದೃಢವಾದ ನಿಲುವನ್ನು ಕೈಕೊಂಡಿದ್ದ ಪಕ್ಷದಲ್ಲಿ ಖಂಡಿತ ಈ ಹಿಂದಿ ಚಳುವಳಿ ದೇಶದಲ್ಲಿ ಉಂಟಾಗುತ್ತಿರಲಿಲ್ಲ. ಅನೇಕ ಶಕ್ತಿಗಳು ಇದಕ್ಕಾಗಿ ಕೆಲಸ ಮಾಡುತ್ತಿವೆ. ಹೊರಗಿನ ಶಕ್ತಿಗಳ ಕೈವಾಡವಿಲ್ಲ ಎಂದು ಕೆಲವರು ಹೇಳುತ್ತಿದ್ದಾರೆ. ಅದನ್ನು ನಾನು ಒಪ್ಪುವುದಿಲ್ಲ. ಹೊರಗಿನ ಶಕ್ತಿ ಇದೆ. ಮತೀಯ ಮಿಷನರಿಗಳು ಲಕ್ಷಾಂತರ ಶಾಲೆಗಳನ್ನು ಈ ದೇಶದಲ್ಲಿ ನಡೆಸುತ್ತಿದ್ದು ಅವರ ಕೈವಾಡ ಇದರಲ್ಲಿದೆ. ಪ್ರಪಂಚದಲ್ಲಿ, ಇಂಡಿಯಾ ದೇಶದಲ್ಲಿಯೇ ಇಂಗ್ಲಿಷ್ ಪುಸ್ತಕಗಳು ಹೆಚ್ಚಾಗಿ ಮಾರಾಟ ಆಗುತ್ತಿವೆ. ಇಂಥ ಪುಸ್ತಕ ವ್ಯಾಪಾರಿಗಳ ಮತ್ತು ಪ್ರಕಟಣಕಾರರ ಕೈವಾಡ ಇದರಲ್ಲಿದೆ. ನೆರೆ ಪ್ರಾಂತದಲ್ಲಿ ಹಣ ಕೊಟ್ಟು ಇದಕ್ಕೋಸ್ಕರ ಪ್ರಚೋದನೆ ಮಾಡುವ ಶಕ್ತಿಗಳೂ ಇವೆ. ಇದೆಲ್ಲದರ ಜೊತೆಗೆ ಸರ್ಕಾರದ ಧೋರಣೆಯೂ ಬಹಳ ಮುಖ್ಯವಾದುದು.

ನಾನು ಬಸ್ಸಿನಲ್ಲಿ ಹೋಗುತ್ತಿದ್ದಾಗ ಒಬ್ಬ ಹುಡುಗ ನನ್ನನ್ನು ಕೇಳಿದ, ಇಂದಿರಾ ಗಾಂಧಿಯವರ ಮಕ್ಕಳು ಇಂಗ್ಲೆಂಡಿನಲ್ಲಿ ಇಂಗ್ಲಿಷ್ ಶಿಕ್ಷಣ ಪಡೆಯುತ್ತಿದ್ದಾರೆ, ನಮ್ಮ ಮಂತ್ರಿಗಳ ಮಕ್ಕಳು ಕಾನ್‌ವೆಂಟಿನಲ್ಲಿ ಓದುತ್ತಾರೆ, ನಾವು ಮಾತ್ರ ಇಂಗ್ಲಿಷ್ ಓದಬೇಕು ಎಂದರೆ ಅದಕ್ಕೆ ಅವಕಾಶವಾಗುತ್ತಿಲ್ಲ. ಇದು ಏಕೆ ಎಂದು ಕೇಳಿದ್ದಕ್ಕೆ ನನಗೆ ಜವಾಬು ಹೇಳುವುದಕ್ಕೆ ಸಾಧ್ಯವಾಗಲಿಲ್ಲ.

ಹಿಂದಿ ರಾಷ್ಟ್ರಭಾಷೆಯಾಗಬೇಕು ಎಂದು ಇದ್ದ ಪಕ್ಷದಲ್ಲಿ ಕಳೆದ 20 ವರ್ಷಗಳಿಂದಲೂ ಅದನ್ನು ಬೆಳೆಸುವುದಕ್ಕೆ ಸರ್ವವಿಧದಲ್ಲಿಯೂ ಪ್ರಯತ್ನ ಮಾಡಬೇಕಾಗಿತ್ತು. ತಾಂತ್ರಿಕ ಶಬ್ದಗಳು ಹಿಂದಿಯಲ್ಲಿ ಇಲ್ಲವೆಂದೂ ಹಿಂದಿಯಲ್ಲಿ ತಾಂತ್ರಿಕ ವಿಷಯಗಳನ್ನು ಬೋಧಿಸುವುದಕ್ಕೆ ಸಾಧ್ಯವಿಲ್ಲವೆಂದೂ

ಹೇಳುತ್ತಾರೆ. ಜರ್ಮನಿ ದೇಶದಲ್ಲಿ ವಿಜ್ಞಾನ ಹೆಚ್ಚು ಮುಂದುವರಿದಿದೆ, ಆ ದೇಶದಲ್ಲಿ ಜರ್ಮನ್ ಭಾಷೆಯಲ್ಲಿಯೇ ಎಲ್ಲವನ್ನೂ ಬೋಧಿಸುತ್ತಾರೆ, ಜಪಾನ್ ದೇಶದಲ್ಲಿ ಎಲೆಕ್ಟ್ರಾನಿಕ್ಸ್ ಸೈನ್ಸ್ ಹೆಚ್ಚು ಮುಂದುವರೆದಿದೆ. ಅಲ್ಲಿಯೂ ಕೂಡ ಜಪಾನ್ ಭಾಷೆಯಲ್ಲಿಯೇ ಎಲ್ಲವನ್ನೂ ಬೋಧಿಸುತ್ತಾರೆ. ನಮ್ಮಲ್ಲಿ ಭಾಷೆಯನ್ನು ಚೆನ್ನಾಗಿ ಬೆಳೆಸದೆ ಇರುವುದರಿಂದ ದೇಶದ ಪ್ರಗತಿ ಕುಂಠಿತವಾಗಿದೆ ಎನ್ನುವ ಮನೋಭಾವನೆ ಬಂದಿದೆ. ಆ ಮನೋಭಾವನೆಯಿಂದ ಈ ಚಳುವಳಿ ಷುರುವಾಗಿದೆ. ಕಾಂಗ್ರೆಸ್ ಸರ್ಕಾರ ಈ ದೇಶದಲ್ಲಿ ಮಾಡಿದ ಪಾಪವೇನಿದೆ ಅದೆಲ್ಲ ಈ ರೀತಿಯಾಗಿ ಪ್ರತಿಬಿಂಬಿತವಾಗುತ್ತಿದೆ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಹಿಂದಿಯನ್ನು ನಿಜವಾಗಿ ಜಾರಿಗೆ ತರಬೇಕು ಎನ್ನುವ ಇಚ್ಛೆ ನಿಮಗೆ ಇದ್ದರೆ 20 ವರ್ಷದಿಂದಲೂ ಬಲಾತ್ಕಾರವಾಗಿ ಹಿಂದಿಯನ್ನು ಓದಬೇಕು ಎಂದು ದೃಢ ನಿರ್ಧಾರದಿಂದ ಕೆಲಸ ಮಾಡಬೇಕಾಗಿತ್ತು. ಆದರೆ ನೀವು ಮಾಡುತ್ತ ಇರುವುದಾದರೂ ಏನು ! ಸ್ಕೂಲುಗಳು ಆರಂಭವಾಗುವ ಮೊದಲು ಹಿಂದಿಯನ್ನು ಕಡ್ಡಾಯವಾಗಿ ತಗೆದುಕೊಳ್ಳಬೇಕು ಎಂದು ಸರ್ಕ್ಯುಲರ್ ಕಳಿಸುತ್ತೀರಿ. ಆದರೆ ಪರೀಕ್ಷೆಗಳು ಹತ್ತಿರ ಬಂದಾಗ ವಿದ್ಯಾರ್ಥಿಗೆ ಹಿಂದಿಯಲ್ಲಿ ಏನೂ ಅಂಕಗಳು ಬಾರದೆ ಇದ್ದರೂ ಅವನನ್ನು ತೇರ್ಗಡೆ ಮಾಡಿಸಬೇಕು ಎಂದು ತಿಳಿಸುತ್ತಿದ್ದಾರೆ. ಹಿಂದಿ ರಾಷ್ಟ್ರಭಾಷೆಯಾಗಬೇಕು ಎನ್ನುವುದಕ್ಕೆ ನಮಗೆ ಇರುವ ಅಭಿಮಾನವನ್ನು ನೋಡಿದರೆ ನಾವು ದೇಶದ್ರೋಹಿಗಳಾಗಿರುತ್ತೇವೆ ಎಂದು ಹೇಳಬೇಕಾಗಿದೆ. ಇಲ್ಲದೆ ಹೋದರೆ ದೃಢ ನಿರ್ಧಾರವನ್ನು ಹಿಂದಿ ಭಾಷೆಯ ವಿಚಾರವಾಗಿ ತೆಗೆದುಕೊಳ್ಳಬೇಕು. ಈಗ ಸುಮ್ಮನೆ ಒಂದು ಭೂತವನ್ನು ಸೃಷ್ಟಿಮಾಡಿ ಜನಗಳನ್ನು ಮಂಕು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಇದರಿಂದಾಗಿಯೇ ದೇಶದಲ್ಲಿ ಗೊಂದಲ, ಗಲಾಟೆ, ಆಗುವುದಕ್ಕೆ ಅವಕಾಶವಾಗಿದೆ. ನಿಜವಾಗಿಯೂ ಕೂಡ ಏನು ಮಾಡಬೇಕು ಎಂಬುದನ್ನು ನೀವು ಈಗಲಾದರೂ ಕಣ್ಣುಬಿಟ್ಟು ನೋಡಬೇಕಾಗಿದೆ. ಆಂಧ್ರ ವಿಧಾನಸಭೆ ಮತ್ತು ಮದ್ರಾಸ್ ವಿಧಾನ ಸಭೆಗಳಲ್ಲಿ ಈ ಭಾಷಾ ಸಮಸ್ಯೆಯಬಗ್ಗೆ ನಿರ್ಣಯಗಳನ್ನು ಮಾಡಿದ್ದಾರೆ. ನಮ್ಮಲ್ಲಿ ಏನು ಮಾಡಿದ್ದಾರೆಂದು ವಿಮರ್ಶೆ ಮಾಡಿ ನೋಡಿದರೆ ನಮ್ಮಲ್ಲಿ ವಿಧ್ಯಾರ್ಥಿಗಳು ಚಳುವಳಿ ಮಾಡಿದಾಗ ಅವರ ಮೇಲೆ ಗೋಲಿಬಾರ್ ಮಾಡಿದ್ದಾರೆ. ಶ್ರೀ ರಾಮರಾಯರು ಇರುವವರೆಗೂ ಕನಿಷ್ಠಪಕ್ಷ 50 ಬಾರಿಯಾದರೂ ಗೋಲಬಾರ್ ಆಗಬೇಕು ಎಂದು ಬಹುಶಃ ಅವರು ಭಾವಿಸಿಕೊಂಡಿದ್ದರು ಎಂದು ಕಾಣುತ್ತದೆ. ಆ ರೀತಿಯಾಗಿ ಮಾಡಿದರು. ಶ್ರೀರಾಮಚಂದ್ರನು ಲಂಕೆಯಲ್ಲಿ ರಾವಣನ ಮೇಲೆ 500 ಸಾರಿ ಅಸ್ತ್ರಗಳನ್ನು ಬಿಟ್ಟರೆ ನಾನು ಐವತ್ತುಸಾರಿಯಾದರೂ ಅಸ್ತ್ರ ಬಿಡಬೇಕು ಎನ್ನುವ ಮನೋಭಾವನೆಯಿಂದ ಅವರು ಗೋಲಿಬಾರು ಮಾಡಿಸಿದರು ಎಂದು ಹೇಳಬಹುದಾಗಿದೆ. ಅವರು ಈ ರಾಜ್ಯ ಸರ್ಕಾರವನ್ನು ಬಿಟ್ಟರು. ಅವರು ಈ ರೀತಿ ಮಾಡಬಾರದಾಗಿತ್ತು ಇದಕ್ಕೆ ನಾನು ಬಹಳ ದುಃಖಪಡುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಸನ್ಮಾನ್ಯ ಸಭಾಪತಿಯವರೇ, ಈಗ ಹೆಚ್ಚು ಕಾಲಾವಕಾಶವಿಲ್ಲದ್ದರಿಂದ ಈ ಸಮಸ್ಯೆಯ ಬಗ್ಗೆ ವಿಶದವಾಗಿ ಅಭಿಪ್ರಾಯವದ್ನು ವ್ಯಕ್ತಮಾಡವುದನ್ನು ಮುಂದಕ್ಕೆ ಹಾಕಿ ಸದ್ಯಕ್ಕೆ ವಿದ್ಯಾರ್ಥಿಗಳಮೇಲೆ ಗೋಳಿಬಾರು ಮಾಡಿರುವುದು, ಚಳುವಳಿ ನಡೆದಿರುವುದು ಸೂಕ್ತವೇ ಎಂಬ ಬಗ್ಗೆ ಒಂದೆರಡು ಮಾತುಗಳನ್ನು ಈ ಸಭಾನಾಯಕರಾದ ನಿಜಲಿಂಗಪ್ಪನವರ ಗಮನಕ್ಕೆ ತರಬಯಸುತ್ತೇನೆ.

ಇಂದು ದ್ವಿಭಾಷೆ, ತ್ರಿಭಾಷೆ ಎಂದೇನು ಇರಬೇಕೆಂದು ಹೇಳುತ್ತಿದ್ದಾರೆ ಆ ವಿಚಾರದಲ್ಲಿ ಹಿರಿಯರಲ್ಲಿ ಬೇರೆಬೇರೆ ಅಭಿಪ್ರಾಯಪಡುವವರಿರಬಹುದು, ಅದನ್ನು ಬಿಡೋಣ. ವಿದ್ಯಾರ್ಥಿಗಳು ತಮ್ಮ ಸಮಸ್ಯೆಯನ್ನು ಹಿರಿಯರ ಮುಂದಿಟ್ಟಿದ್ದಾರೆ. ಇಂದು ವಿದ್ಯಾರ್ಥಿಗಳು ತಾವು ಮಕ್ಕಳು ಆಗಿದ್ದರೂ ಮುಂದೆ ದೇಶದ ನಾಯಕರಾಗುವವರು. ದೇಶದಲ್ಲಿ ದೊಡ್ಡ ದೊಡ್ಡ ಹುದ್ದೆಗಳಿಗೆ ಬರುವವರು. ಆಗ ಹಿಂದಿಗೆ ಪ್ರೋತ್ಸಾಹ ಹೆಚ್ಚಾಗಿ ಕೊಟ್ಟರೆ ಆ ಭಾಷೆಯಲ್ಲೇ ಪರೀಕ್ಷೆ ವಗೈರೆ ಪಾಸುಮಾಡಿ ಉನ್ನತ ಹುದ್ದೆಗಳಿಗೆ ಆವಕಾಶ ಪಡೆಯಬೇಕೆಂದರೆ ಹಿಂದಿಯನ್ನು ಮಾತೃಭಾಷೆಯಾಗಿ ಉಳ್ಳವರನ್ನು ಇತರ ದೇಶಗಳವರು ಸ್ಪರ್ಧೆಯಲ್ಲಿ ಸೋಲಿಸಿ ಹುದ್ದೆಗಳು ವಗೈರೆ ಪಡೆಯಲು ತೊಂದರೆಯಾಗುತ್ತದೆ, ಹಿಂದಿ ಭಾಷೆ ಮಾತೃಭಾಷೆಯಾಗುಳ್ಳವರು ಹೆಚ್ಚು ಅಂಕಗಳನು ಪಡೆಯುವರು. ಅದುದರಿಂದ ನಿಜಲಿಂಗಪ್ಪನವರೇ ಮುಂತಾದ ನಾಯಕರೇಕೆ ಈ ಕೊರತೆಯನ್ನು ಹೋಗಲಾಡಿಸಲು ಒಂದು ಸೂಕ್ತ ಮಾರ್ಗವನ್ನು ಕಂಡುಹಿಡಿಯಬಾರದು ಎಂಬುದು ವಿದ್ಯಾರ್ಥಿಗಳ ವಾದವಾಗಿದೆ. ಹಾಗೆ ಮಾಡಬೇಕಾದ್ದು ಜವಾಬ್ದಾರಿ ಸ್ಥಾನಗಳಲ್ಲಿರುವವರ ಕರ್ತವ್ಯವಾಗಿದೆ. ಅದನ್ನು ಬಿಟ್ಟು ಚಳವಳಿ ಹೆಚ್ಚಲು ಅದರಿಂದ ಜನರಿಗೆ ತೊಂದರೆಯಾಗಲು ಅವಕಾಶ ಕೊಡುವುದು ಸೂಕ್ತವೇ ? ಇದನ್ನು ವಿದ್ಯಾರ್ಥಿಗಳು ಕೇಳುವಾಗ ಸಹಜವಾಗಿರುವ ಈ ವಿಚಾರದಲ್ಲಿ ಸರಿಯಾದ ಉತ್ತರ ಕೊಡದೆ ಪೋಲೀಸಿನವರ ಬ್ಯಾನೆಟ್ಟಿಗೆ ವಿದ್ಯಾರ್ಥಿಗಳನ್ನು ಗುರಿಮಾಡುವುದು ಸಮಂಜಸವೇ ? ಇದನು ಪರಿಶೀಲಿಸಬೇಕು. ವಿದ್ಯಾರ್ಥಿಗಳ

(ಶ್ರೀ ಕೆ. ಎಚ್. ಪಾಟೀಲ್)

ಸಂಶಯ ನಿವಾರಣೆಮಾಡದೆ ನಿರಪರಾಧಿಗಳಾದ ಅವರನ್ನು ಪೋಲೀಸರ ಕೈನಿಂದ ತೊಂದರೆಗೆ ಗುರಿ ಮಾಡುತ್ತಿದ್ದಾರೆ. ಪೋಲೀಸರ ಬ್ಯಾನೆಟ್ ಉತ್ತರ ಕೊಡುತ್ತಿದೆ. ಪೋಲೀಸರ ಅತ್ಯಾಚಾರ ಜಾಸ್ತಿಯಾಗಿದೆಯೆಂಬ ಕೂಗು ಹೊರಗಡೆ ಇರುವಾಗ ನಮ್ಮ ಮಕ್ಕಳನ್ನು ಹೊಡೆಯಬೇಡಿ ಎಂದು ಪೋಲೀಸಿನವರಿಗೆ ಹೇಳಬೇಡವೇ ? ಚಳವಳಿ ಕಾಲದಲ್ಲಿ ಅನೇಕರು ಸತ್ತರು. ಸತ್ತವರ ಬಗ್ಗೆ ಸಂತಾಪ ಸೂಚಿಸಲು ಒಂದು ಠರಾವಾದರೂ ಸರಕಾರದ ವತಿಯಿಂದ ಬರಲಿಲ್ಲ. ಈ ದಿವಸ ಇದು ಪೋಲೀಸರ ರಾಜ್ಯವಾಗಿಲ್ಲವೇ, ಇಲ್ಲಿ ಪ್ರಜಾಪ್ರಭುತ್ವ ನಿಜವಾಗಿಯೂ ಇದೆಯೇ ಎಂಬುದನ್ನು ಭಾರತದ ನಾಯಕರೇ ಆಲೋಚನೆಮಾಡಿ ಹೇಳಬೇಕಾಗಿದೆ. ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿರುವ ಶ್ರೀ ಗೋಕಾಕ್‌ರವರಂಥ ದೊಡ್ಡ ವ್ಯಕ್ತಿಗಳು ಕಣ್ಣೀರು ಸುರಿಸಿದ್ದಾರೆ, ನಡೆದಿರುವ ಅತ್ಯಾಚಾರವನ್ನು ನೋಡಿ ಅವರು ಬಹಳವಾಗಿ ಮರುಗಿದ್ದಾರೆ. ಅಂಥ ಉನ್ನತ ವ್ಯಕ್ತಿಗಳು ಹೇಳಿದ ಮಾತಿಗೆ ಗೃಹ ಸಚಿವರು ಮತ್ತು ಸರಕಾರದವರು ಮನ್ನಣೆ ಕೊಡಬೇಡವೇ ? ವಿದ್ಯಾರ್ಥಿಗಳು ಗಲಾಟೆ ಮಾಡಿದರೆ ತಾವು ಹೊಣೆ ಹೊರುವುದಾಗಿಯೂ ಕಾಲೇಜು ಆವರಣವನ್ನು ಅವರ ಅನುಮತಿಯಿಲ್ಲದೆ ಪ್ರವೇಶಿಸಬಾರದೆಂದೂ ಅವರು ಮನವಿಮಾಡಿದ್ದಕ್ಕೆ ಬೆಲೆ ಕೊಡಬೇಡವೇ ? ಅವರ ಅನುಮತಿ ಇಲ್ಲದೆಯೇ ಕಾಲೇಜಿನ ಆವರಣಕ್ಕೆ ನುಗ್ಗಿ ನಿಷ್ಕಾರಣವಾಗಿ ವಿದ್ಯಾರ್ಥಿಗಳನ್ನು ಹಿಂಸೆಮಾಡಿದ್ದು ಉಚಿತವೇ ? ಇದನ್ನು ಯೋಚಿಸಿ ತಕ್ಕ ಸಮಾಧಾನ ನೀಡಬೇಕು. ವಿದ್ಯಾರ್ಥಿಗಳ ಕೈಲಿ ಶಸ್ತ್ರವಿಲ್ಲ, ಅಂಥವರಮೇಲೆ ಬಲಪ್ರಯೋಗಮಾಡಿ ಪೋಲೀಸರಿಂದ ತೊಂದರೆಗೀಡುಮಾಡಿ ಮಹಾ ಪಾಪ ಮಾಡಿದ್ದೀರಿ. ಯುದ್ಧ ಕಾಲದಲ್ಲೂ ಕೂಡ ಹೀಗಾಗುವುದಿಲ್ಲ. ಭಗವದ್ಗೀತೆ, ಬಸವಗೀತೆ ಮುಂತಾದುವುಗಳ ತತ್ವವನ್ನು ಬಾಯಲ್ಲಿ ಹೇಳುತ್ತಾ ಅದಕ್ಕಾಗಿ ರಾಜ್ಯದ ಹಣವನ್ನು ಸೂರೆಮಾಡುತ್ತಾ ನಿರಪರಾಧಿಗಳನ್ನು ಹಿಂಸಿಸಲು ಬೊಕ್ಕಸವನ್ನು ಸೂರೆಮಾಡುತ್ತಿರುವುದು ಸೂಕ್ತವಲ್ಲ. ಇನ್ನು ಮುಂದಾದರೂ ವಿದ್ಯಾರ್ಥಿಗಳಿಗೆ ಮುನ್ನೆಚ್ಚರಿಗೆ ಕೊಡಬೇಕು, ಸರಕಾರದ ಧೋರಣೆ ಏನೆಂಬುದನ್ನು ಖಚಿತವಾಗಿ ಸಕಾಲದಲ್ಲಿ ತಿಳಿಸಬೇಕು, ಯೋಗ್ಯ ಮಾರ್ಗದರ್ಶನ ಮಾಡಬೇಕು ಮತ್ತು ನಿರಪರಾಧಿಗಳ ಕೊಲೆಯಾಗಿರುವುದಕ್ಕೆ ಹಿಂಸೆಯಾಗಿರುವುದಕ್ಕೆ ಮುಖ್ಯಮಂತ್ರಿಗಳು ಪಶ್ಚಾತ್ತಾಪವಾದರೂ ಸೂಚಿಸಬೇಕು ಎಂದು ಹೇಳಿ ನಾನು ನಮ್ಮ ಮುಂದಿರುವ ನಿಲುವಳಿ ಸೂಚನೆಯನ್ನು ಸಮರ್ಥನೆಮಾಡುತ್ತೇನೆ.

Sri DIGAMBAR RAO B. KALMANKAR (Aland).—Mr. Speaker, Sir, I submit that the Government is primarily responsible for the disturbances that have taken place in Bangalore and some other places in recent times. The Government itself has not made up its mind, and probably the people at the helm of affairs have not understood the purport of the Resolution passed and also the amendment made to the Language Bill in the Parliament; and they were not in a position to give assurance in time having understood what that amendment and resolution is. As it was said for two days, our Chief Minister is also responsible for the recent disturbances, beeause as Congress President, he has got to say certain things. When he is in Delhi, he has to say that three-language formula should be there and when he is in Bangalore, he has to say that English should stay. These statements are responsible for the disturbances. This fact has also come to the notice of the Government of India that he says something at Delhi and some other thing here. The Hon'ble Education Minister says something in contravention to the Chief Minister. These utterances have been responsible for the disturbances. Ever since the Madhugiri incident, there is no Minister to look after law and order, because the Ex-Minister Sri M. V. Rama Rao had not had any more interest in the Department and did not look after the work. The officers in-charge say that there was no direction from the Cabinet or the Minister concerned, with the result

many innocent people lost their lives for no fault of theirs. It is really a shame that the Police should enter the precincts of the University and should pollute the atmosphere and mishandle the Principal of the College. It is really a shame to the people who are sitting on the other side that they should keep quite. My submission is it is the two personalities of the Chief Minister that is primarily responsible for this.

Secondly, as pointed out by my friend Sri Sharana Gowda, some more problems of the State are there, which are equally important, and if the same injustice is going to be done in future the same thing will be repeated by the Government. Having understood the past, I request the Chief Minister to reconsider and avoid the danger of such repetitions in future.

With these words, I conclude.

7-00 P.M.

ಶ್ರೀ ಎಸ್. ನಿಜಲಿಂಗಪ್ಪ.– ಸ್ವಾಮಿ, ಈ ನಿರ್ಣಯದ ಬಗ್ಗೆ ಸಾಕಾದಷ್ಟು ಜನ ಮಾತನಾಡಿದ್ದಾರೆ. ಮೊಟ್ಟಮೊದಲನೆಯದಾಗಿ ಈ ಪ್ರಕರಣ ಬೆಂಗಳೂರಿನಲ್ಲಿ ಮತ್ತು ಇತರ ಕಡೆಗಳಲ್ಲಿ ಹಾಗೂ ನಮ್ಮ ಪಕ್ಕದಲ್ಲಿರತಕ್ಕ ಆಂಧ್ರ, ಮದರಾಸಿನಲ್ಲಿ ನಡೆಯುತ್ತಾ ಇದೆ; ನಡೆದಿದೆ. ಇದು ಬಹಳ ವಿಷಾದಪಡಿಸತಕ್ಕ ವಿಚಾರ. ನಾನು ನಾನಾ ಕಡೆಗಳಲ್ಲಿ ನಾನಾ ರೀತಿಯಾಗಿ ಮಾತನಾಡಿದ್ದೇನೆ ಎಂದು ಎಲ್ಲರೂ ಹೇಳಿದ್ದಾರೆ, ಆದರೆ ಒಬ್ಬರೂ ಕೂಡ ಏನು ಮಾತನಾಡಿದ್ದೇನೆ ಎಂಬುದನ್ನು ಹೇಳಲಿಲ್ಲ. ಈ ಮನೆಯಲ್ಲಿ ಇಂಗ್ಲೀಷ್ ಇರಬೇಕು ಎಂದು ಹೇಳಿದೆ, ಹಿಂದಿ ಇರಬೇಕು ಎಂದು ಹೇಳಿದೆ, ಆ ಮಾತು ಈಗಲೂ ಹೇಳುತ್ತೇನೆ. ಇಂಗ್ಲೀಷು ಇರಬೇಕು. ಬೇಡ ಅಂದರೂ ಕೂಡ ಅದು ಇರುತ್ತದೆ. ಹಿಂದಿ ಕಲಿಯಬೇಕು ಎಂದು ಹೇಳತಕ್ಕವನು ನಾನು. ಇದನ್ನು ನಾನು ಇವತ್ತು ಹೇಳತಕ್ಕ ಮಾತಲ್ಲ, 40 ವರ್ಷದ ಕೆಳಗೆ ಮಹಾತ್ಮಾ ಗಾಂಧಿಯವರು ಒಂದು ಭಾಷೆ ಎಲ್ಲರನ್ನೂ ಒಟ್ಟು ಮಾಡುವುದಕ್ಕೆ, ಸೇರಿಸುವುದಕ್ಕೆ ಅವಶ್ಯಕ ಅದು ಹಿಂದೂಸ್ಥಾನಿ ಆ ಭಾಷೆಯಾಗಿರಬೇಕೆಂದು ಒತ್ತಾಯ ಮಾಡಿದರು ಅದನ್ನು ಎಲ್ಲರೂ ಒಪ್ಪಿಕೊಂಡರು. 40 ವರ್ಷದ ಕೆಳಗೆ ಮದರಾಸಿನಲ್ಲಿ ದಕ್ಷಿಣಭಾರತ ಹಿಂದೀ ಪ್ರಚಾರ ಸಭಾ ಅಂತ ಹೇಳಿ ಅವರಿಂದ ಹುಟ್ಟು ಹಾಕಲ್ಪಟ್ಟು ಅದರ ಬ್ರಾಂಚ್‌ಗಳು ಎಲ್ಲಾ ಕಡೆಯಲ್ಲೂ ಇವೆ. ಬೆಂಗಳೂರಿನಲ್ಲೂ ಕೂಡ 7–8 ಇವೆ. ಎಲ್ಲಾ ಕಡೆಯಲ್ಲೂ ಹಿಂದೀ ಕಲಿಸುತ್ತಾ ಇದ್ದಾರೆ. ಹಿಂದಿ ಬೇಕು ಅಂತ ಎಲ್ಲರೂ ಒಪ್ಪಿಕೊಂಡಿರತಕ್ಕ ಮಾತು. ಕಾನ್‌ಸ್ಟಿಟ್ಯೂಷನ್‌ನಲ್ಲಿರತಕ್ಕ ಆರ್ಟಿಕಲ್ 343ರ ಪ್ರಕಾರ 'Hindi should be the Official language of the Union' ಅಂತ ಸ್ಪಷ್ಟವಾಗಿ ಇದೆ. 1950ನೇ ಇಸವಿ ಜನವರಿ 2;ನೇ ತಾರೀಖು ಒಪ್ಪಿಕೊಂಡಿರತಕ್ಕ ಕಾನ್‌ಸ್ಟಿಟ್ಯೂಷನ್‌ನಲ್ಲಿ ಇದ್ದು ಅದಕ್ಕೆ ಯಾವ ತೊಂದರೆಯೂ ಇಲ್ಲದೆ, ಯಾರೂ ಅಡ್ಡಿ ಆತಂಕ ಮಾಡದೆ ಬೆಳೆದುಕೊಂಡು ಬಂದಿದೆ. ಹಿಂದಿ ಇರಬೇಕೆಂದು ಶಾಸ್ತ್ರಿಗಳು ಹೇಳಿದರು. ಅದು ಇರಬೇಕೆಂದು ಅನ್ನುವವರಲ್ಲಿ ನಾನು ಒಬ್ಬ ಅದನ್ನು ಒಪ್ಪಿಕೊಂಡು ಬಂದಿದ್ದೇನೆ. ಅದೂ ಅಲ್ಲದೆ, ದಕ್ಷಿಣದಲ್ಲಿ ಮೈಸೂರಿನಲ್ಲಿ, ಆಂಧ್ರದಲ್ಲಿ ಹಾಗೂ ಕೇರಳದಲ್ಲಿ ಹಿಂದಿ ಕಂಪಲ್ಸರಿ ಲ್ಯಾಂಗ್ವೇಜ್ ಆಗಿರಬೇಕೆಂದು 10-11 ವರ್ಷಗಳಿಂದ ನಡೆದುಕೊಂಡು ಬಂದಿದೆ, ಎಲ್ಲರೂ ಕಲಿಯುತ್ತಾ ಇದ್ದಾರೆ ಎಂದು ಹೇಳಬಹುದು. ತಕರಾರು ಇರಲಿಲ್ಲ. ಯಾರು ಬೇಡ ಅಂದರು, ಯಾರು ಕೆಲವರು ಪರೀಕ್ಷೆಗೆ ಕಷ್ಟ ಅಂದರು, ಅಂತಹವರು ಪರೀಕ್ಷೆಗೆ ಹೋದರೂ ಹೋಗಲಿ ಇಲ್ಲದೇ ಇದ್ದರೆ ಬಿಡಲಿ ಅಂತ ಅಂದರೂ ಕೂಡ ಹೋದ ವರ್ಷ 70 ಸಾವಿರ ಜನ ಹುಡುಗರು ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ, ಪರೀಕ್ಷೆಗೆ ಹಾಜರಾಗಿದ್ದಾರೆ. ಈ ವರ್ಷ ವಿದ್ಯಾ ಮಂತ್ರಿಗಳು ಪರೀಕ್ಷೆಯಲ್ಲಿ ಸೊನ್ನೆ ಬಂದರೂ ಕೂಡ ಪ್ರಮೋಷನ್ ಕೊಡುತ್ತೇವೆ ಎಂದು ಹೇಳಿದ್ದಾರೆ ಅದು ಇರಲಿ. ಇಲ್ಲಿಯವರೆಗೂ ಯಾವ ರೀತಿಯ ತಕರಾರು ಇಲ್ಲದೇ ನಡೆದುಕೊಂಡು ಬಂದಿದೆ. ಹಿಂದಿ ವಿಚಾರದಲ್ಲಿ ಪಂಡಿತ್ ಜವಾಹರಲಾಲ್ ನೆಹರೂರವರು, ಲಾಲ್ ಬಹದ್ದೂರ್ ಶಾಸ್ತ್ರಿಯವರು ಸ್ಪಷ್ಟವಾಗಿ ಹೇಳಿದ್ದಾರೆ. ಇಂಗ್ಲೀಷ್ ಉಳಿಯುತ್ತದೆ, ಎಲ್ಲಿಯವರಿಗೆ ಹಿಂದಿಯೇತರ ರಾಜ್ಯಗಳಲ್ಲಿ ಇಂಗ್ಲೀಷ್ ಇರಬೇಕೆಂದು ಅನಿಸುತ್ತದೆ ಕ್ರಮಬದ್ಧವಾಗಿ ಹಿಂದಿ ಪ್ರಚಾರ ಎಂದಿನವರೆಗೆ ಬರುತ್ತದೆ ಅಲ್ಲಿಯವರೆಗೂ ಯಾವುದೇ ಒಂದು ರಾಜ್ಯದಲ್ಲೂ ಇಂಗ್ಲೀಷನ್ನು ಬಿಟ್ಟು ಕೊಡುವುದಿಲ್ಲ ಎಂಬ ಮಾತನ್ನು ಹೇಳಿದ್ದಾರೆ ಅದರಂತೆ ಅಕ್ಟ್ ಕೂಡ ಇದೆ. ಇದಕ್ಕೆಲ್ಲಾ ಕಾರಣ ಯಾರು

(ಶ್ರೀ ಎಸ್. ನಿಜಲಿಂಗಪ್ಪ)

ಎಂಬುದನ್ನು ಕಣ್ಣಿನಲ್ಲಿ ಕಣ್ಣಿಟ್ಟು ನೋಡಬೇಕಾಗುತ್ತದೆ. ಸುಮ್ಮನೆ ಹಾಗೆ ಆಗಬೇಕು, ಹೀಗೆ ಆಗಬೇಕು, ಎಲ್ಲರೂ ಅದಕ್ಷರು ಎಂದು ಹೇಳಿ ಬಯ್ಯಬೇಕೆಂದು ಹೇಳುತ್ತಾ ಹೋದರೆ ಪ್ರಯೋಜನ ವಿಲ್ಲ. ಬಯ್ಯುವುದರಿಂದ ಸಮಾಧಾನವಾಗುವುದಾದರೆ ಆ ರೀತಿ ಮಾಡಿಕೊಳ್ಳಿ, ಅದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಡಿಸೆಂಬರ್ ಕೊನೆಯಲ್ಲಿ ಈ ಕಾನೂನಿನ ತಿದ್ದುಪಡಿ ಆಯಿತು. ಅದಕ್ಕೆ ಮುಂಚೆ ಗಲಾಟೆಯೇ ಇರಲಿಲ್ಲ. ಜವಾಹರ್‌ಲಾಲ್ ನೆಹರೂರವರು ಲಾಲ್ ಬಹದ್ದೂರ್ ಶಾಸ್ತ್ರಿಯವರು ಮತ್ತು ನಾವೆಲ್ಲಾ ಒಪ್ಪಿಕೊಂಡಿರತಕ್ಕ ರೀತಿಯಲ್ಲಿ ತ್ರಿಭಾಷಾ ಕ್ರಮ ಒಪ್ಪಿಕೊಂಡದ್ದಾಗಿದೆ. ಆದರೆ ತಕರಾರು ಬಂದಿರುವುದು ಇದು. ಈಗ ಆಗಿರತಕ್ಕ ರೆಸಲ್ಯೂಷನ್ ಪ್ರಕಾರ ಅದರಲ್ಲಿ ಏನು ಮಾಡಿದ್ದಾರೆ ಎಂದರೆ, ಮೊದಲು ಏನು 'ಇಂಗ್ಲೀಷ್ ಅಂಡ್ ಹಿಂದಿ' ಅಂತ ಇತ್ತು ಅದನ್ನು 'ಇಂಗ್ಲೀಷ್ ಆರ್ ಹಿಂದಿ' ಅಂತ ಮಾಡಿದರು, ಅದೇ ಇದಕ್ಕೆಲ್ಲಾ ಕಾರಣವಾಯಿತು. ಇಂಗ್ಲೀಷ್ ಅಥವಾ ಹಿಂದೀ ಎಂದರೆ ಬರೀ ಹಿಂದಿಯೇ ಉತ್ತರದವರು ಕಲಿಯುವುದು ದಕ್ಷಿಣದಲ್ಲಿ ನಾವು ಹಿಂದಿಯನ್ನೂ ಕಲಿಯಬೇಕು, ಕನ್ನಡವನ್ನೂ ಕಲಿಯಬೇಕು, ಇಂಗ್ಲೀಷನ್ನೂ ಕಲಿಯಬೇಕು ಈ ರೀತಿ ಕಷ್ಟ ಬರುತ್ತದೆ ಎಂದು ಒಬ್ಬರಿಗೊಬ್ಬರಿಗೆ ವ್ಯತ್ಯಾಸ ಕಂಡುಬಂದು ವಿದ್ಯಾರ್ಥಿಗಳ ಮನಸ್ಸನ್ನು ಕೆರಳಿಸಿತು. ಮದ್ರಾಸಿನಲ್ಲಿ ಗಲಾಟೆ ಪ್ರಾರಂಭವಾಯಿತು ಮದ್ರಾಸಿನಲ್ಲಿ ಕಂಪಲ್ಸರಿ ಲ್ಯಾಂಗ್ವೇಜ್ ಆಗಿ ಹಿಂದಿಯನ್ನು ಒಪ್ಪಿಕೊಂಡಿಲ್ಲ, ಅದು ಏನೇ ಇರಲಿ, ಇದು ಅಕಸ್ಮಾತ್ತಾಗಿ ಬಂದಿರುವುದು, ಈ ಥಾಳಿ ನಡೆಯುತ್ತದೆ ಎಂದು ಕನಸು ಮನಸಿನಲ್ಲಿಯೂ ಇರಲಿಲ್ಲ. ಹುಡುಗರು ಗಲಾಟೆ ಮಾಡುತ್ತಾರೆ ಅಂತಲೂ ಇರಲಿಲ್ಲ. ಅಕಸ್ಮಾತ್ತಾಗಿ ಹೋದ ಜನವರಿ ತಿಂಗಳಿನಲ್ಲಿ ಇದು ಪ್ರಾರಂಭವಾಯಿತು. ಸುಮಾರು 18–19 ನೇ ತಾರೀಖು. ಸಿನಿಮಾದಲ್ಲಿ ಹಿಂದಿ ಚಿತ್ರಗಳನ್ನ ಹಾಕುತ್ತಾರೆ ಅಂತ ಗಲಾಟೆ ಆಯಿತು. ವಿದ್ಯಾರ್ಥಿಗಳು ಇಷ್ಟೊಂದು ಭಾವನಾಪರವಶರಾಗಿದ್ದಾರೆ ಎಂದು ಗೊತ್ತಿರಲಿಲ್ಲ, ಅವತ್ತು ಗೊತ್ತಾಯಿತು. ಅವತ್ತಿನ ದಿವಸ ಅಷ್ಟು ಗಲಾಟೆಯಾಗಿತ್ತು 22—23 ನೇ ತಾರೀಖಿನ ದಿವಸ ವಿಶೇಷವಾಗಿ ಗಲಾಟೆಯಾಗಿದೆ. 23ನೇ ತಾರೀಖಿನ ದಿವಸ ಕೆಲವರು ಸತ್ತಿದ್ದಾರೆ. ವಿದ್ಯಾರ್ಥಿಗಳೇ ಆಗಿದ್ದರೆ ಇಷ್ಟು ಪ್ರಕೋಪಕ್ಕೆ ಹೋಗುತ್ತಾ ಇರಲಿಲ್ಲ. ಈ ವಿದ್ಯಾರ್ಥಿಗಳ ಜೊತೆಗೆ ಕೆಲವು ಪೋಕರಿಗಳು, ಪುಂಡರು ಸೇರಿಕೊಂಡರು. ಹೀಗಾಗಿ ವಿದ್ಯಾರ್ಥಿಗಳೂ ಕೂಡ ಬೇಕಾದಷ್ಟು ಕಲ್ಲುಗಳನ್ನು ತೆಗೆದುಕೊಂಡು ಹೊಡೆದಿದ್ದಾರೆ. ಸೆಂಟ್ರಲ್ ಕಾಲೇಜಿನ ಗೋಡೆಯನ್ನು ಕೆಡವಿದ್ದಾರೆ. ಅದು ಏನಾಯಿತು ಏನು ಎಂಬುದನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ ವಿಚಾರಿಸುತ್ತಾ ಇದ್ದೇನೆ. ಹೊರಗಡೆಯಿಂದ ಬೇಕಾದಷ್ಟು ಜನ ವಿದ್ಯಾರ್ಥಿಗಳು ಬಂದು ಕೆಲಸ ಮಾಡಿದ್ದಾರೆ. ಇಲ್ಲಿನ ವಿದ್ಯಾರ್ಥಿಗಳಿಗೆ ಕೆಲವರು ಸೀರೆ, ಬಳೆಗಳನ್ನು ಕಳುಹಿಸಿದ್ದರೆ, ನೀವೇನು ಹೆಂಗಸರೇನು ಎಂದು ಕೇಳಿದ್ದಾರೆ. ಈ ರೀತಿಯೆಲ್ಲಾ ಮಾಡುವವರಿದ್ದಾರೆ, ಅದು ನಮಗೆ ಗೊತ್ತಿದೆ. ಹೊರಗಡೆಯಿಂದ ಬಂದ ವಿದ್ಯಾರ್ಥಿಗಳನ್ನು ಅರೆಸ್ಟ್ ಮಾಡಿದ್ದರು, ಮತ್ತೆ ಅವರ ಕಡೆಯವರೇ ಅವರನ್ನು ಬಿಡಿಸಿಕೊಂಡು ಹೋಗಿದ್ದಾರೆ. ಹೊರಗಡೆಯಿಂದ ಬಂದು ಗಲಾಟೆ ಮಾಡಿ ಪ್ರಚೋದನೆ ಮಾಡಿದ್ದಾರೆ. ಮಕ್ಕಳಿಗೆ ತಿಳಿಯದು, ಅವರು ಭಾವನಾಪರವಶವಾಗಿ ಗಲಾಟೆ ಮಾಡಿದ್ದಾರೆ. ಕಾಲೇಜಿನ ಕಾಂಪೌಂಡನ್ನು ಕಿತ್ತು ಹಾಕಿದ್ದಾರೆ. ಪೋಲೀಸಿನವರನ್ನು ಇಟ್ಟಿಗೆ ತೆಗೆದುಕೊಂಡು ಹೊಡೆದಿದ್ದಾರೆ. ವಿದ್ಯಾರ್ಥಿಗಳು ನನ್ನ ಹತ್ತಿರ ಬಂದಿದ್ದರು, ವಿದ್ಯಾರ್ಥಿಗಳೂ ಹೊಡೆದಿದ್ದಾರೆ, ಪೋಲೀಸ್‌ನವರೂ ಹೊಡೆದಿದ್ದಾರೆ ಅದು ನಿಜ. ಈ ರೀತಿ ಗಲಾಟೆಯಾಗಿ ಕಾರುಗಳಿಗೆ ಕಲ್ಲುಗಳನ್ನು ಹೊಡೆದು, ಕಾರಿನ, ಬಸ್ಸುಗಳ ಗಾಜನ್ನು ಒಡೆಯುತ್ತಾ ಇರುವಾಗ ಪೋಲೀಸ್‌ನವರು ಸುಮ್ಮನೆ ನಿಂತುಕೊಂಡು ನೋಡುವುದು ಅದು ಪೋಲೀಸ್‌ನವರ ಕೆಲಸ ಅಲ್ಲ. ವಿದ್ಯಾರ್ಥಿಗಳು ಫ್ರೇಜರ್ ಟೌನ್‌ನಲ್ಲಿ ಬಸ್ಸು ಹೋಗುತ್ತಾ ಇದ್ದರೆ ಕಲ್ಲು ತೆಗೆದುಕೊಂಡು ಹೊಡೆದರು ಅದನ್ನು ನೋಡಿಕೊಂಡು ಪೋಲೀಸ್‌ನವರು ಸುಮ್ಮನೆ ಇರುವುದಕ್ಕೆ ಸಾಧ್ಯವೇ? ಅದನ್ನು ತಡೆಗಟ್ಟುವುದು ಪೋಲೀಸ್‌ನವರ ಕರ್ತವ್ಯ. 23ನೇ ತಾರೀಖು ನಮಗೆ ಚೆನ್ನಾಗಿ ಗೊತ್ತಿದೆ. ಮಕ್ಕಳ ಕೈಯಲ್ಲಿ ಪೆಟ್ರೋಲ್‌ನಲ್ಲಿ ಅದ್ದಿದ ಕಾಟನ್ ವುಲ್ ಕೊಟ್ಟು ಬೆಂಕಿ ಹಚ್ಚುವುದಕ್ಕೆ ಕಳುಹಿಸಿದ್ದಾರೆ. ರಸ್ತೆಗಳನ್ನ ಅಡ್ಡ ಹಾಕಿದ್ದಾರೆ, ಬರೀ ವಿದ್ಯಾರ್ಥಿಗಳು ಇದರಲ್ಲಿ ಇರಲಿಲ್ಲ, ಪುಂಡರು ಸೇರಿದ್ದರು, ಪೋಲೀಸ್‌ನವರು ಆ ಸಮಯದಲ್ಲಿ ತಮ್ಮ ಕರ್ತವ್ಯವನ್ನು ಮಾಡದೇ ಹೋಗಿದ್ದರೆ ಬೆಂಗಳೂರಿನ ಮಾರ್ಕೆಟ್ಟೆಲ್ಲಾ ಲೂಟಿಯಾಗುತ್ತಾ ಇತ್ತು ಅಂತಹ ಕೆಲಸ ನಡೆದಿತ್ತು. ಅಂತಹ ಸಂದರ್ಭದಲ್ಲಿ ಪೋಲೀಸ್‌ನವರು ಕಣ್ಣುಮುಚ್ಚಿಕೊಂಡು ಇರುವುದಕ್ಕಾಗುವುದಿಲ್ಲ. ಸಾಕಾದಷ್ಟು ಸಹನೆಯಿಂದ ನಡೆದುಕೊಂಡಿದ್ದಾರೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರ ಕರ್ತವ್ಯ ಮಾಡದೇ ಇದ್ದಿದ್ದರೆ ಇಷ್ಟು ಆಸ್ತಿ, ಎಷ್ಟು ಸ್ವತ್ತು ಲೂಟಿಯಾಗುತ್ತಾ ಇತ್ತೋ ಹೇಳುವುದಕ್ಕೆ ಬರುವುದಿಲ್ಲ. ಈಗಾಗಲೇ ಸರ್ಕಾರದ ಆಸ್ತಿ, ಬಲ್ಬುಗಳು, ಒಡೆದು ಹಾಕಿರುವುದರಿಂದ ಬಸ್ಸುಗಳನ್ನು ಸುಟ್ಟು

ಹಾಕಿರುವುದರಿಂದ ಎಷ್ಟೋ ನಷ್ಟವಾಗಿದೆ. ಕಾರುಗಳಿಗೆ ಹೊಡೆದಿದ್ದಾರೆ, ಗ್ಲಾಜುಗಳನ್ನು ಒಡೆದು ಹಾಕಿದ್ದಾರೆ, ಅಂಗಡಿಗಳಿಗೆ ನಷ್ಟವನ್ನುಂಟು ಮಾಡಿದ್ದಾರೆ ಇಂತಹ ಕೆಲಸಗಳೆಲ್ಲಾ ಆಗುವುದು ಪೋಲಿಗಳಿಂದ. ವಿದ್ಯಾರ್ಥಿಗಳು ಗಲಾಟೆ ಮಾಡುತ್ತಾ ಇದ್ದಾಗ ಅವರ ಜತೆಯಲ್ಲಿ ಸೇರಿಕೊಂಡು ಎಲ್ಲಾ ಕೆಲಸಗಳನ್ನು ಮಾಡಿದ್ದಾರೆ. ಅಂತಹ ಸಂದರ್ಭದಲ್ಲಿ ಪೋಲೀಸ್‌ನವರು ಸುಮ್ಮನೆ ಇರುವುದಕ್ಕಾಗುವುದಿಲ್ಲ, ಲಾ ಅಂಡ್ ಆರ್ಡರ್ ಇರಲಿಲ್ಲ ಎಂದು ಹೇಳುವುದು ಸರಿಯಲ್ಲ, ಅದು ಬಹಳ ತಪ್ಪು ತಿಳಿವಳಿಕೆ.

ಶ್ರೀ ಎಚ್. ಸಿದ್ಧವೀರಪ್ಪ.—ಪೋಲೀಸ್‌ನವರೇನೋ ತಮ್ಮ ಕರ್ತವ್ಯ ಮಾಡಿದರು, ಇದೆಲ್ಲಾ ನಡೆಯುತ್ತಿದ್ದಾಗ್ಗೆ, ಗೃಹ ಮಂತ್ರಿಗಳು ಎಲ್ಲಿದ್ದರು ? ಬೀಗ ಹಾಕಿಕೊಂಡು ಕೋಣೆಯಲ್ಲಿ ಕುಳಿತುಕೊಂಡಿದ್ದರೆ ?

ಶ್ರೀ ಎಸ್. ನಿಜಲಿಂಗಪ್ಪ.—ಹೊರಗೂ ಇದ್ದರು, ಒಳಗೂ ಇದ್ದರು. ಸೂಕ್ತ ನಿರ್ದೇಶನಗಳನ್ನು ಕೊಡುತ್ತಾ ಇದ್ದರು. ಗೃಹಮಂತ್ರಿಗಳ ವಿಚಾರದಲ್ಲಿ ಏನು ತಪ್ಪು ಕಲ್ಪನೆ, ಅವರು ಹಾಗೆ ಮಾಡಬೇಕಾಗಿತ್ತು, ಹೀಗೆ ಮಾಡಬೇಕಾಗಿತ್ತು ಎಂಬ ಬುದ್ಧಿವಾದ ಇದೆ, ಅವರ ವಿಚಾರದಲ್ಲಿ ಏನು ಆಕ್ಷೇಪಣೆ ಇದೆ ಅದು ಸರಿಯಲ್ಲ. ಅವರು competent, honest and earnest man.

Sri S. CHANNIAH (Krishnaraj).—He is better for office and not for outside. I have got that experience.

Sri S. NIJALINGAPPA.—I have also got experience. ಚನ್ನಯ್ಯನವರಿಗೆ ಎಷ್ಟು ಅನುಭವವಿದೆಯೋ ಅದಕ್ಕಿಂತ ಹೆಚ್ಚು ಅನುಭವ ನನಗೆ ಇದೆ ಅದು ನನಗೆ ಗೊತ್ತು.

ಶ್ರೀ ಎಸ್. ಚೆನ್ನಯ್ಯ.—ನಿಮಗಿಂತ ನನಗೆ ಹೆಚ್ಚು ಅನುಭವ ಇದೆ ಎಂಬುದನ್ನು ತಾವು ಒಪ್ಪಿಕೊಳ್ಳಬೇಕು ನಾನೂ ನೋಡಿದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಆಗಲಿ, ನೀವೇ ಮೊದಲು ಅಧ್ಯಕ್ಷರಾಗಿದ್ದಿರಿ, ಅವರು ಸೆಕ್ರೆಟರಿಗಳಾಗಿದ್ದರು, ನನಗೆ ಗೊತ್ತಿರುವ ಹಾಗೆ ಇದು 20 ವರ್ಷದ ಮಾತು.

Sri H. SIDDAVEERAPPA.—He has no tact. He has no understanding and he has no human feeling.

Sri S. NIJALINGAPPA.—That is his opinion and this is my opinion.

ಇಲ್ಲಿಯವರಿಗೆ ಹಾಗೆ ಏನೇನು ನಡೆದಿದೆಯೋ ಆಗಿದೆಯೋ ಅದೊಂದೂ ಆಗಬಾರದಾಗಿತ್ತು. ಬರೀ ವಿದ್ಯಾರ್ಥಿ ವೃಂದ ಒಂದಕ್ಕೇ ಕಷ್ಟ ನಷ್ಟಗಳು ಉಂಟಾಗಿಲ್ಲ. ಇತರೆ ಜನರೆಷ್ಟು ಏಟುಗಳನ್ನು ತಿಂದಿಲ್ಲ ? ಪೋಲೀಸಿನವರೂ ಅನೇಕರು ಹೊಡೆಸಿಕೊಂಡಿದ್ದಾರೆ. ಮೇಲಾಗಿ ಸಾರ್ವಜನಿಕ ಸಂಪತ್ತಿಗೆಷ್ಟು ಹಾನಿಯಾಗಿದೆ ? ಎಷ್ಟು ಬಸ್ಸುಗಳನ್ನು ಸುಟ್ಟು ಹಾಕಿದ್ದಾರೆ ? ಒಬ್ಬ ಹುಡುಗನೇ ನನ್ನ ಹತ್ತಿರ ಬಂದು ನಾವು ಕಲ್ಲಿನಿಂದ ಹೊಡೆದದ್ದು ಉಂಟೆಂದು ಒಪ್ಪಿಕೊಂಡಿದ್ದಾನೆ. ಆದರೆ ಇಲ್ಲಿ ಕೆಲವರು ಹೇಳಿದರು—ಹುಡುಗರನ್ನು ವಿಶ್ವವಿದ್ಯಾನಿಲಯದ ಆವರಣದೊಳಗೆ ಓಡಿಸಿಕೊಂಡು ಹೋಗಿ ಹೊಡೆದಿದ್ದಾರೆ ಎಂದು. ಪೋಲೀಸಿನವರ ಮೇಲೆ ಕಲ್ಲನ್ನು ತೂರಿ ಒಳಗೆ ಓಡಿ ಹೋದರೆ ಅಂಥವರನ್ನು ಹಾಗೇ ಕೈ ಬಿಡಬೇಕೋ ? ಅಂಥ ಸಮಯದಲ್ಲಿ ಒಳಗೂ ನುಗ್ಗಲೇ ಬೇಕಾಗುವುದು. ಇನ್ನು ಕೆಲವರು ಹೇಳಿದರು ರೂಮಿನಲ್ಲಿ ಇದ್ದ ಹುಡುಗರನ್ನೂ ಮತ್ತು ಶ್ರೀ ಷಡಾಕ್ಷರಪ್ಪನವರನ್ನೂ ಪೋಲೀಸಿನವರು ಹೊಡೆದಿದ್ದಾರೆ ಎಂದು. ನಾನು ಷಡಾಕ್ಷರಪ್ಪನವರನ್ನೇ ಕೇಳಿದ್ದೇನೆ. ಪೋಲೀಸಿನವರು ಅಲ್ಲಿ ಹುಡುಗರನ್ನು ಹೊಡೆಯುತ್ತಿದ್ದ ಸಂದರ್ಭದಲ್ಲಿ ತಮಗೂ ಒಂದು ಸಣ್ಣ ಪೆಟ್ಟು ಬಿತ್ತು ಎಂದು ಹೇಳಿದ್ದಾರೆ. ಆ ವಿದ್ಯಾರ್ಥಿಗಳು ಪೋಲೀಸಿನವರ ಮೇಲೆ ಕಲ್ಲನ್ನು ತೂರಿದ್ದಲ್ಲದೆ ಜೇಬಿನಲ್ಲಿ ಕಲ್ಲನ್ನು ತುಂಬಿಕೊಂಡು ರೂಮಿನೊಳಕ್ಕೆ ಓಡಿ ಹೋದರೆ ಅಂಥವರನ್ನು ಹೇಗೆ ಕೈ ಬಿಡಲಾಗುತ್ತದೆ ? ಒಬ್ಬ ಕಳ್ಳ ಯಾರದೋ ಮನೆಯಲ್ಲಿ ನುಗ್ಗಿ ಕಳುವು—ದರೋಡೆಗಳನ್ನು ಮಾಡಿ ಓಡಿಹೋಗುತ್ತಿದ್ದ ಸಮಯದಲ್ಲಿ ಜನರು ಹಿಡಿದುಕೊಳ್ಳುತ್ತಾರೆಂದು ಅವನು ಅಕ್ಕಪಕ್ಕದ ಮನೆಯೊಳಕ್ಕೆ ನುಗ್ಗಿದರೆ ಅಂಥವನನ್ನು ಹಿಡಿಯದೆ ಬಿಟ್ಟು ಬಿಡಬೇಕು ? ಆದುದರಿಂದ ಆ ಸಂದರ್ಭದಲ್ಲಿ ಪೋಲೀಸಿನವರು ಏನು ಮಾಡಿದ್ದಾರೋ ಅದೇ ಸರಿ. ಅಂತೂ ಆದುದಾಯಿತು. ಅದು ಹಾಗೆ ಆಗಬಾರದಾಗಿತ್ತು. ಇತ್ತೀಚೆಗೆ ಕೆಲವು ಜನ ವಿದ್ಯಾರ್ಥಿಗಳು ನನ್ನ ಹತ್ತಿರ ಬಂದು ವಿದ್ಯಾರ್ಥಿಗಳ ಮೇಲೆ ಹಾಕಿರತಕ್ಕ ಎಲ್ಲ ಕೇಸುಗಳನ್ನೂ ಸರ್ಕಾರದವರು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಂಡರು. ಆಗ ನಾನು ಏನೋ ಆದದ್ದಾಯಿತು. ಆ ಕೇಸುಗಳನ್ನು ವಾಪಸ್ ತೆಗೆದುಕೊಳ್ಳುವಂತೆ ನೀವು ಒಂದು ಅರ್ಜಿ ಕೊಡಿ ಎಂದು ಹೇಳಿದ್ದೇನೆ. ಆ ಕೇಸುಗಳನ್ನೂ ಸಹಾ ವಿತ್‌ಡ್ರಾ ಮಾಡಲಾಗುತ್ತದೆ,

(ಶ್ರೀ ಎಸ್. ನಿಜಲಿಂಗಪ್ಪ)

ಹೇಳಿದ್ದೇನೆ. ಅನಂತರ ಅವರು ಸತ್ತವರಲ್ಲಿ ಕೆಲವರು ಬಹಳ ಬಡ ಹುಡುಗರಿದ್ದಾರೆಂದು ಹೇಳಿದರು. ಆದಕ್ಕೆ ಸರ್ಕಾರದಲ್ಲಿ ಏನು ನೇಮಗಳಿವೆಯೋ ಅದರ ಪ್ರಕಾರ ಅವರಿಗೆ ಸಹಾಯವನ್ನು ನೀಡಲಾಗುತ್ತದೆಂಬುದನ್ನೂ ಸಹಾ ಹೇಳಿದ್ದೇನೆ. ಇಲ್ಲಿ ಇನ್ನು ಕೆಲವರು ಮುಖ್ಯಮಂತ್ರಿಗಳು ಎರಡು ಬಾಯಿನಲ್ಲಿ ಮಾತನಾಡಿದ್ದಾರೆಂದು ಹೇಳಿದ್ದಾರೆ. ಹಾಗೆ ಎರಡು ಬಾಯಿನಲ್ಲಿ ನಾನು ಎಲ್ಲಿಯೂ ಏನನ್ನೂ ಹೇಳಿಲ್ಲ. ಆದರೆ ನಾನು ಏನು ಹೇಳಿದ್ದೇನೋ ಅದನ್ನೇ ಕೆಲವರು ಎರಡು ರೀತಿ ಅರ್ಥಮಾಡಿಕೊಂಡಿರಬಹುದು. ಉತ್ತರ ಇಂಡಿಯಾವಲ್ಲೂ ಸಹಾ ಎಲ್ಲ ರಾಜ್ಯಗಳೂ ಆ ಹಿಂದೀ ಭಾಷೆಯನ್ನು ಆಡಳಿತ ಭಾಷೆ ಮಾಡಬೇಕೆಂಬುದನ್ನು ಒಪ್ಪಿಲ್ಲ. ರಾಜಸ್ಥಾನ, ಬಂಗಾಳ, ಮಹಾರಾಷ್ಟ್ರ, ಒರಿಸ್ಸಾ, ಗುಜರಾತ್ ಇತ್ಯಾದಿ ಅನೇಕ ರಾಜ್ಯಗಳವರು ಅದನ್ನು ಒಪ್ಪಿಲ್ಲ. ಆದರೆ ಅವರು ಅವರಲ್ಲಿರತಕ್ಕ ಭಾಷೆಗೂ ಮತ್ತು ಹಿಂದಿಗೂ ರೂಟ್ ಒಂದೇ ಎಂದು ಕೆಲವರು ಹೇಳುತ್ತಾರೆ. ಅಲ್ಲಿ ಅವರು ಹಿಂದೀ ಅಥವಾ ಇಂಗ್ಲೀಷ್ ಎರಡರಲ್ಲಿ ಒಂದನ್ನು ಕಲಯಬೇಕೆಂದಿದೆ. ನಾವು ದಕ್ಷಿಣದವರು ಇಲ್ಲಿ ಆ ಹಿಂದಿಯನ್ನೂ ಕಲಿಯಬೇಕು. ಮಾತೃ ಭಾಷೆಯನ್ನೂ ಕಲಿಯಬೇಕು ಮತ್ತು ಇಂಗ್ಲೀಷನ್ನೂ ಕೂಡ ಕಲಯಬೇಕು. ಅಲ್ಲಿಗೆ ನಮ್ಮ ಹುಡುಗರು ಮೂರು ಭಾಷೆಯನ್ನು ಕಲಿಯಬೇಕೆಂದರೆ ಇವರಿಗೆ ಭಾರ ಹೆಚ್ಚಾಯಿತು. ಅದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು, ಅದರಲ್ಲಿ ಯಾರಿಗೂ ಅನುಮಾನವೇ ಇಲ್ಲ. ಈಗಾಗಲೇ ಈ ವಿಚಾರ ನಮ್ಮ ವರ್ಕಿಂಗ್ ಕಮಿಟಿಯಲ್ಲಿ ಬಂದು ಚರ್ಚೆಯಾಗಿ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಲಾಗಿದೆ. ಅನೇಕ ಜನ ವಿದ್ಯಾರ್ಥಿಗಳು ಬಂದು ಹಿಂದಿ ಕಲಯತಕ್ಕ ಭಾರವನ್ನು ತಪ್ಪಿಸಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಆದರೆ ಹಿಂದೀ ಭಾಷೆಯನ್ನು ನಾವು ಕಲಿಯಲೇಬೇಕು. ಅದನ್ನು ಕಲಿಯಲೇಬೇಕೆಂದು ಒತ್ತಾಯ ಮಾಡುವುದೂ ಕೂಡ ನ್ಯಾಯವಾದ್ದೇ. ಆದರೆ ಅದನ್ನು ಕಲಿಯಬೇಕೆಂದು ಹೇಳಿದರೆ ಆದರಿಂದ ನಮ್ಮ ಮಕ್ಕಳಿಗೆ ಒಂದು ಹೆಚ್ಚಿನ ಭಾರ ಆಗಬಾರದು. ಆದರೆ ಇದರಲ್ಲಿ ಒಂದು ಮುಖ್ಯವಾದ ಅಂಶ ಏನಿದೆ ಅಂದರೆ, ಇಲ್ಲಿ ಭಾಷೆಯ ವಿಚಾರ ಅಷ್ಟು ಪ್ರಾಮುಖ್ಯವಾದದ್ದಲ್ಲ. ಭರತಖಂಡದರಲ್ಲಿತಕ್ಕ ಜನರೆಲ್ಲಾ ಒಂದುಗೂಡುವಂತಾಗಬೇಕು ಅನ್ನುವುದು ಇದರಲ್ಲಿ ಅಡಗಿದೆ. ಉತ್ತರದವರೂ—ದಕ್ಷಿಣದವರೂ ಪೂರ್ವದವರೂ ಮತ್ತು ಪಶ್ಚಿಮದವರೂ ಹೀಗೆ ಯಾರಿದ್ದಾರೆ ಅವರೆಲ್ಲರೂ ಒಂದುಗೂಡುವಂತೆ ಆಗಬೇಕು ಅನ್ನುವುದಕ್ಕೆ ಇದು ಸಹಕಾರಿ ಆಗುತ್ತದೆಂದು ಭಾವಿಸಲಾಗಿದೆ. ಇಂತಹ ಒಂದು ದೃಷ್ಟಿಯಿಂದ ನಾವು ನಮಗೆ ಒಂದು ನ್ಯಾಷನಲ್ ಲಾಂಗ್ವೇಜ್ ಇರಬೇಕೆಂದು ಹೇಳುತ್ತಿದ್ದೇವೆ. ಆದರೆ ಕೆಲವು ರಾಜ್ಯಗಳು ಮಾತ್ರ ಮೂರು ಭಾಷೆಯನ್ನು ಕಲಿಯಬೇಕು ಇನ್ನು ಕೆಲವು ರಾಜ್ಯಗಳಲ್ಲಿ ಒಂದೇ ಭಾಷೆ ಇರಬೇಕೆಂದರೆ ಅದು ಸಾಧ್ಯವಿಲ್ಲ. ಆದರೆ ಇಲ್ಲಿ ಕೆಲವರು ಇಂಗ್ಲೀಷನ್ನು ಓದಿ ಅದನ್ನು ಕಲಿತು ಅದರಲ್ಲೇ ಬೆಳೆದು ಸರ್ವೀಸನ್ನು ಮಾಡಿ ಅದರಲ್ಲೇ ನಿವೃತ್ತರಾದಂಥ ಜನ ಏನಿದ್ದಾರೆ ಅವರ ಕಾಟ ಜಾಸ್ತಿಯಾಗಿದೆ. ಈ ಇಂಗ್ಲೀಷ್ ಹೋದರೆ ನನಗೇನೂ ಅಷ್ಟು ವ್ಯಸನವಾಗುವುದಿಲ್ಲ. ಆದರೆ ಬಹುಸಂಖ್ಯಾತರಾಗಿರತಕ್ಕ ಹಿಂದೀ ಭಾಷೆ ಏನಿದೆ ಅದರಲ್ಲಿ ನಾವೆಲ್ಲರೂ ಪಂಡಿತರಾಗಬೇಕಾದ್ದೇನಿಲ್ಲ. ಒಂದು ವರ್ಕಿಂಗ್ ನಾಲೆಡ್ಜ್ ಇದ್ದರೆ ಸಾಕು. ಈ ದಿವಸ ಭೂಪಾಲಿನಲ್ಲಿ ಕೆಲಸದಲ್ಲಿರತಕ್ಕ ಇಂಜಿನಿಯರುಗಳಲ್ಲಿ ಸುಮಾರು 400 ಜನರಲ್ಲಿ 300 ಜನರು ನಮ್ಮ ರಾಜ್ಯದವರೇ ಇದ್ದಾರೆ. ಅವರೆಲ್ಲರೂ ಈ ದಿವಸ ಚೆನ್ನಾಗಿ ಹಿಂದಿಯಲ್ಲಿ ಮಾತನಾಡುತ್ತಾರೆ. ನಮಗೆ ವ್ಯವಹಾರಕ್ಕೆ ಸಾಕಾಗುವಷ್ಟು ಹಿಂದೀ ಪರಿಚಯವಾದರೆ ಸಾಕು. ಸರ್ಕಾರಿ ಕೆಲಸಕ್ಕೆ ಹೋಗತಕ್ಕ ಜನರಿಗೆ ಅಷ್ಟು ಹಿಂದೀ ಜ್ಞಾನ ಇದ್ದರೆ ಸಾಕು. ಮೊನ್ನೆ ನಾವಿಲ್ಲಿ ಒಂದು ಪಂಡಿತರ ಸಭೆಯನ್ನು ಸೇರಿಸಿದ್ದೆವು. ಟೆಕ್ಸ್ಟ್ ಬುಕ್ಕುಗಳ ಬಗ್ಗೆಯೂ ಒಂದು ಕಮಿಟಿಯನ್ನು ಕರೆಯಲಾಗಿತ್ತು. ನಾವು ಈಗಾಗಲೇ ನಮಗೆ ಅಗತ್ಯವಾಗಿ ಬೇಕಾಗಿರತಕ್ಕ ಟೆಕ್ನಿಕಲ್ ಪದಗಳ ಒಂದು ಅರ್ಥಕೋಶವನ್ನು ತಯಾರಿಸಿ ತಮಗೆಲ್ಲರಿಗೂ ಹಂಚಲಾಗಿದೆ. ನೂರಾರು ವರ್ಷಗಳಿಂದ ಬಂದಿರತಕ್ಕ ಈ ಒಂದು ಸಂಪ್ರದಾಯ ಪದ್ಧತಿಯೇನಿದೆ ಇದನ್ನು ಒಂದೇದಿನದಲ್ಲಿ ಇಷ್ಟೇ ದಿನದಲ್ಲಿ ತೆಗೆದುಹಾಕಬೇಕೆಂದರೆ ಅದು ಸಾಧ್ಯವಾಗದ ಮಾತು. ಶ್ರೀಮಾನ್ ವಾಟಾಳ್‌ರವರು ಒಂದು ಸಿನೀಮಾ ಮುಂದೆ ಹೋಗಿ ಅದಕ್ಕೆ ಕಲ್ಲನ್ನೆಸೆದರೆ ಅವರೊಬ್ಬ ಕನ್ನಡಾಭಿಮಾನಿಗಳು ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ತಾವು ಹಾಗೆ ಮಾತನಾಡಬಾರದು. ಪೋಲೀಸಿನವರು ಹೇಳಿದ್ದನ್ನು ತಾವು ನಂಬಬಾರದು. ಅದು ಸರಿಯಾದುದಲ್ಲ......

ಶ್ರೀ ಎಸ್. ನಿಜಲಿಂಗಪ್ಪ.—ಹಾಗೆ ತಾವು ಕಲ್ಲನ್ನು ಎಸೆಯಲಿಲ್ಲ ಅನ್ನುವುದಾದರೆ ಬಹಳ ಸಂತೋಷ. ಈ ಭಾಷಾ ವಿಚಾರದಲ್ಲಿ ಎಲ್ಲ ರಾಜ್ಯಗಳಿಗೂ ಒಂದು ಸಮನಾದ ಹೊರೆ ಇರುವಂತೆ ಇದನ್ನು ಅನುಕ್ರಮದಲ್ಲಿ ತರುವಂತೆ ಮಾಡಬೇಕೆಂದು ಒಂದು ನಿರ್ಣಯವನ್ನು ಕಳುಹಿಸಲಾಗಿದೆ.

ಇದೇ ವಿಚಾರದಲ್ಲಿ ನಾನು ಮೊನ್ನೆ ತಾನೆ ಇಲ್ಲಿ ಒಂದು ದಕ್ಷಿಣ ಭಾರತದ ಮುಖ್ಯಮಂತ್ರಿಗಳ ಸಭೆಯೊಂದನ್ನು ಕರೆದಿದ್ದೆನು. ಅದಕ್ಕೆ ಕೆಲವರು ಸಕಾಲದಲ್ಲಿ ಬರುವುದಕ್ಕಾಗಲಿಲ್ಲ. ಬರದೆ ಇರತಕ್ಕವರನ್ನು ನಾನು ಹೋಗಿ ಎಳೆದುಕೊಂಡು ಬರುವುದಕ್ಕಾಗುವುದಿಲ್ಲ. ಆ ಸಭೆ ಸೇರಿದ್ದು ಇಲ್ಲಿಗೆ 3-4 ದಿನಗಳ ಕೆಳಗೆ ನಾನು ಸಭೆಯನ್ನು ಕರೆದಿದ್ದೇ ಕಳೆದ ಜನವರಿಯ ಮೂರನೆ ವಾರದಲ್ಲಿ ಆ ಮೀಟಿಂಗಿನಲ್ಲಿ ನಾವು ನಮ್ಮ ದಕ್ಷಿಣ ಭಾರತದ ಮಕ್ಕಳಿಗೆ ಮೂರು ಭಾಷೆಯನ್ನು ಕಲಿಯಬೇಕು ಎಂದರೆ ಇವರಿಗೆ ಭಾರ ಜಾಸ್ತಿಯಾಗುತ್ತದೆ, ಅದು ಸರಿಯಾದ್ದಲ್ಲ ಇದರಲ್ಲಿ ಯಾರಿಗೂ ಒಂದು ಡಿಸ್ಕ್ರಿಮಿನೇಷನ್ ಇಲ್ಲದಂತೆ ಒಂದು ಸೂಕ್ತ ತೀರ್ಮಾನ ಕೈಗೊಳ್ಳಬೇಕೆಂದು ಒತ್ತಾಯಮಾಡಿ ಬರೆದಿದ್ದೇವೆ. ಉತ್ತರ ಭಾರತದವರಿಗೂ ಅಲ್ಲಿ ಕಲಿಯಬೇಕು ಅಂದರೆ ನಮ್ಮ ದಕ್ಷಿಣದಲ್ಲಿ ಇರೊ ಹಾಗೆ ಅಲ್ಲಿಯೂ 6-7 ಭಾಷೆಗಳಿವೆ. ಉತ್ತರದವರೂ ಕೂಡ 3 ಭಾಷೆಗಳನ್ನೂ ಕಲಿಯಲೇಬೇಕು.

ಶ್ರೀ ಹೆಚ್. ಸಿದ್ದವೀರಪ್ಪ.—ಅವರು ಮೂರು ಭಾಷೆಯನ್ನು ಕಲಿಯುವುದಿಲ್ಲ ಎಂದರೆ ಆಗ ತಾವು ಏನು ಮಾಡುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಹಾಗೆ ಕಲಿಯುವುದಿಲ್ಲ ಎಂದು ಹಟ ಹಿಡಿದರೆ ಮುಂದೆ ಇಲ್ಲಿ ನಾವೇನು ಮಾಡಬೇಕು ಅನ್ನುವುದು ನಮಗೂ ಗೊತ್ತಿದೆ. ಉತ್ತರದಲ್ಲಿ ಅವರಿಗೆ ಕಲಿಯಲು ಮರಾಠಿ, ಒರಿಯ ಮತ್ತು ಬಂಗಾಳಿ ಈ ಭಾಷೆಗಳೆಲ್ಲಾ ಇರುತ್ತವೆ. ಅವರು ಇವನ್ನು ಕಲಿಯಲಿ. ಈ ದಿವಸ ನಾವು ಅಲ್ಲಿಂದ 'ಬರತಕ್ಕ ಐ. ಎ. ಎಸ್ ಮತ್ತು ಐ. ಪಿ. ಎಸ್. ಅಧಿಕಾರಿಗಳಿಗೆ ನಮ್ಮ ಭಾಷೆಯನ್ನು ಕಲಿಸುತ್ತಿಲ್ಲವೇ ನಾವಿಲ್ಲಿ. ಜನರು ಒಟ್ಟಿನಲ್ಲಿ ಯಾರು ಎಷ್ಟು ಭಾಷೆಗಳನ್ನು ಕಲಿತರೂ ಅದರಿಂದ ಅವರಿಗೆ ಅಪಾಯವೇನಿಲ್ಲ. ಆದರೆ ಪರೀಕ್ಷೆಗೆ ಕೂಡತಕ್ಕ ಜನರಿಗೆ ಹೊರೆ ಹೆಚ್ಚಾಗಬಾರದು. ಅದಕ್ಕೆ ತಕ್ಕ ಪ್ರಯತ್ನಗಳನ್ನು ನಡೆಸಿದ್ದೇವೆ. ನಾವು ಇಲ್ಲಿ ಮೂರು ಭಾಷೆಗಳನ್ನು ಕಲಿಯಬೇಕು, ಅಲ್ಲಿ ಉತ್ತರದಲ್ಲಿರತಕ್ಕವರು ಎರಡು ಭಾಷೆಯನ್ನು ಕಲಿತರೆ ಸಾಕು ಎಂದರೆ ಆದು ಸಾಧ್ಯವಿಲ್ಲದ ಮಾತು. ಅದನ್ನು ನಾವು ಒಪ್ಪುವುದಕ್ಕೆ ಆಗುವುದಿಲ್ಲ. ಅದರಿಂದ ನಮ್ಮ ಮಕ್ಕಳಿಗೆ ಬಹಳ ತೊಂದರೆಯಾಗುತ್ತದೆ, ಅದನ್ನು ತಪ್ಪಿಸಬೇಕು ಅನ್ನುವುದು ನಮ್ಮೆಲ್ಲರ ಇಷ್ಟವಾಗಿದೆ. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದರ ಬಗ್ಗೆ ತಮ್ಮೆಲ್ಲರ ಸಹಕಾರವಿರಲಿ ಎಂದು ಹಾರೈಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

(The Chair proceeded to take votes)

Sri H. SIDDAVEERAPPA.—The rules do not envisage any voting.

Mr. CHAIRMAN.—I am not very much interested in doing it. Rule 56 says :

> "The Speaker may, if he is satisfied that there has been adequate debate, put the question at 6 P. M. or at such other hour not being less than two hours from the time of commencement of the debate."

Rule 57 says that on a motion to adjourn for the purpose of discussing a matter of urgent public importance, the only question that may be put shall be : "that the Assembly do now adjourn".

Sri L. SRIKANTAIAH.—There is no specific motion before the House.

Mr. CHAIRMAN.—There is the specific motion moved by the hon'ble Member Sri Shettar. Does the hon'ble Member Sri Shettar want to withdraw his motion ?

Sri S. S. SHETTAR.—I do not want to withdraw.

Sri H. SIDDAVEERAPPA.—Sir I rise on a point of order. Under what provision should we vote ? The House is seized of the matter. The point that really will have to be considered is whether any voting is obligatory under the Rules. It is for the hon'ble Member to say whether he wants voting or not.

Mr. CHAIRMAN.—I shall now put the question.

Sri K. H. PATIL.—There is no provision enabling the Speaker to put it to the vote.

Sri H. SIDDAVEERAPPA.—We understand that the Government are likely to move a resolution on this subject. We will have to be realistic. This is a subject in which the entire State is interested. Whatever may be our differences with the ruling party on this matter, as far as possible there must be a consensus. Therefore, I appeal to the gentleman who have had the opportunitly of moving this adjournment motion to consider it. If he still says that he wants voting, it cannot be helped.

Sri S. S. SHETTAR.—I fail to understand the argument advanced by Sri Siddaveerappa and I fail to understand why he is so eager to press that I should withdraw.

Mr. CHAIRMAN.—The question is :

"that the House do now adjourn."

The motion was negatived.

The House will now adjourn to meet tomorrow at 1 P. M.

The House adjourned at Thirty Minutes past Seven of the Clock to meet again at One of the Clock on Friday, the 23rd February 1968